ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 9 ಶುಕ್ರವಾರ 2022

₹4

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 144 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com

ಮೈಸೂರು ಮಿತ್ರ ಶುಕ್ರವಾರ 9 ಸೆಪ್ಟೆಂಬರ್ 2022

ವಿಶ್ವಮಾನವರಾಗಿ ಪ್ರಜ್ವಲಿಸಿದವರು ತೇಜಸ್ವಿ



ಮೈಸೂರು, ಸೆ. 8– ಕನ್ನಡವನ್ನು ವಿಶ್ವದ ಉದ್ದಗಲಕ್ಕೂ ಮೆರೆಸಿದ ವಿಶ್ವಮಾನವ ರಸಋಷಿ ಕುವೆಂಪು ಅವರ ಸುಪುತ್ರರಾಗಿ ತಂದೆಯ ತತ್ವಾದರ್ಶಗಳನ್ನು ತಮ್ಮ ಬದುಕಿನುದ್ದಕ್ಕೂ ಅಳವಡಿಸಿಕೊಂಡು ಅಕ್ಷರಶಃ ವಿಶ್ವಮಾನವರಾಗಿ ಪ್ರಜ್ವಲಿಸಿದವರು ವೈಚಾರಿಕ ಮತ್ತು ವೈಜ್ಞಾನಿಕ ಪ್ರಜ್ಞೆಯ ಸಾಹಿತಿ ಪೂರ್ಣಚಂದ್ರ ತೇಜಸ್ವಿಯವರೆಂದು ಪತ್ರಕರ್ತರೂ ಆದ ಸಾಹಿತಿ ಬನ್ನೂರು ಕೆ.ರಾಜು ಹೇಳಿದರು.

ನಗರದ ಜಲದರ್ಶಿನಿ ಅತಿಥಿ ಗೃಹದ ಪ್ರಕೃತಿ ಸೌಂದರ್ಯದ ಆವರಣದಲ್ಲಿ ಪಡುವಾರ ಹಳ್ಳಿ ಸ್ನೇಹ ಬಳಗದಿಂದ ಏರ್ಪಡಿಸಿದ್ದ ಖ್ಯಾತ ಸಾಹಿತಿ ಕೆ.ಪಿ. ಪೂರ್ಣಚಂದ್ರತೇಜಸ್ವಿ ಅವರ ಜನ್ಮದಿನೋತ್ಸವ ಕಾರ್ಯಕ್ರಮವನ್ನು ತೇಜಸ್ವಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಅಪ್ರತಿಮ ಸಾಹಿತಿಯಾಗಿ ಗಿಡ– ಮರ, ಹಕ್ಕಿ–ಪಕ್ಷಿ, ಹೂವು–ಹಣ್ಣು, ಮಣ್ಣು–ನೀರು,ಇಳೆ–ಬೆಳೆ, ಕಾಡು–ಮೇಡು ಅಂತ ಸದಾ ನಿಸರ್ಗದಲ್ಲಿ ಸ್ವರ್ಗ ಕಾಣುತ್ತಿದ್ದ ತೇಜಸ್ವಿಯವರು ಜನಾರಣ್ಯದಿಂದ ದೂರವಿದ್ದು ಸಂತನಂತೆ ಬದುಕಿದರೂ ಅವರ ಕಾಡಿನ ಸಂತ ಬದುಕಿನಲ್ಲೂ ನಾಡಿನ ಹಿತವೇ ಮುಖ್ಯವಾಗಿತ್ತೆಂಬುದು ಅವರ ಬದುಕಿನ ಶೈಲಿಯಲ್ಲೇ ಕಾಣುತ್ತದೆ ಎಂದರು.

ಸಹಕಾರಿ ಕ್ಷೇತ್ರದ ಧುರೀಣರೂ ಆದ ವಕೀಲ ಪಡುವಾರಹಳ್ಳಿ ಎಂ.ರಾಮಕೃಷ್ಣ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಾಹಿತ್ಯದ ಮೂಲಕ ಪ್ರತಿಯೊಂದು ಒಳಿತನ್ನೂ ನಾಡಿಗೆ ಕೊಟ್ಟು ಕನ್ನಡವನ್ನು ಶ್ರೀಮಂತಗೊಳಿಸಿರುವ ಮಹಾ ಚೇತನ ಪೂರ್ಣಚಂದ್ರ ತೇಜಸ್ವಿಯವರು ಮರೆತು ಹೋಗದ ಹಾಗೆ ಅವರ ಪ್ರತಿಯೊಂದು ಕೃತಿಗಳನ್ನು ಜನಮಾನಸಕ್ಕೆ ತಲುಪಿಸುವ ಕೆಲಸವನ್ನು ಸರ್ಕಾರ ಮತ್ತು ಸಾಹಿತ್ಯ ಸಂಘಟನೆಗಳು ಮಾಡಬೇಕಾಗಿದೆ. ಆಗ ಮುಂದಿನ ಪೀಳಿಗೆಗೂ ತೇಜಸ್ವಿಯವರ ಜನೋಪಯೋಗಿ ಸಾಹಿತ್ಯ ತಲುಪಿ ಸಮಾಜಾಭಿರುದ್ಧಿಯಾಗುತ್ತದೆಂದರು. ಈ ಸಂದರ್ಭದಲ್ಲಿ ನಗರ ಪಾಲಿಕೆ ಸದಸ್ಯ ಎಂ.ಚಿಕ್ಕವೆಂಕಟು, ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎಸ್.ಬಿ.ಶಿವು, ಪಡುವಾರಹಳ್ಳಿ ಸ್ನೇಹ ಬಳಗದ ಎಸ್.ಕೃಷ್ಣಕುಮಾರ್, ಬಿ.ಕುಮಾರ್, ಎಂ.ಶಿವಪ್ರಕಾಶ್, ಸಂತೋಷ್, ಸುರೇಂದ್ರ, ಅಜಯ್ ಶಾಸ್ತ್ರಿ, ಗಿರಿಧರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸೆ.11, ಬಹುಪ್ರತಿಭೆ ನಾಗಚಂದ್ರರಿಗೆ ಅಭಿನಂದನೆ

ಕಾರ್ಯಕ್ರಮದಲ್ಲಿ ಧರ್ಮದುರಂತ ನಾಟಕ ಪ್ರದರ್ಶನ


ಮೈಸೂರು,ಸೆ.8(ಎಂಟಿವೈ)–ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಸೆ.11ರಂದು ಸಂಜೆ 4.30ಕ್ಕೆ ನಾ. ನಾಗಚಂದ್ರ 70 ಅಭಿನಂದನೆ ಕಾರ್ಯಕ್ರಮ ಹಾಗೂ ಎಂ.ಆರ್.ಶ್ರೀ. ವಿರಚಿತ ಧರ್ಮದುರಂತ ನಾಟಕ ಪ್ರದರ್ಶನ ಆಯೋಜಿಸಲಾಗಿದೆ ಎಂದು ಅಪ್ರವರಂಬೆ ಸಂಸ್ಥೆ ಸಂಚಾಲಕ ಎನ್.ಧನಂಜಯ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನಾ.ನಾಗಚಂದ್ರ ವೃತ್ತಿಯಿಂದ ಶಿಕ್ಷಕರಾಗಿದ್ದು, ಪ್ರವೃತ್ತಿಯಿಂದ ನಟರಾಗಿದ್ದಾರೆ. ನಾಟಕಕಾರರೂ, ನಿರ್ದೇಶಕರೂ ಆಗಿದ್ದು, ಇವರಿಗೆ 70 ವರ್ಷ ತುಂಬಿದ ಹಿನ್ನೆಲೆಯಲ್ಲಿ ಈ ಅಭಿನಂದನಾ ಕಾರ್ಯಕ್ರಮ ಆಯೋಜಿಸಲಾಗಿದೆ. ಕಾರ್ಯಕ್ರಮ ವೇಳೆ 'ಧರ್ಮದುರಂತ' ನಾಟಕ ಪ್ರದರ್ಶನವಿದೆ. ಜಾತಿ, ಧರ್ಮ, ಮತ ಮುಖ್ಯವಲ್ಲ. ಅದು ಅವರವರಿಗೇ ಸೇರಿದ ವಿಷಯವಾಗಿದೆ ಎಂಬ ಕೋಮು ಸೌಹಾರ್ದತೆ ಸಾರುವ ನಾಟಕ ಇದಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷ ಹೆಚ್.ವಿ. ರಾಜೀವ್ ವಹಿಸಲಿದ್ದು, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ರಂಗಚಂದ್ರ ಸಾಕ್ಷ್ಯಚಿತ್ರ ಬಿಡುಗಡೆ ಮಾಡಲಿದ್ದಾರೆ. ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಡಾ. ಎ.ಭೀಮಸೇನ ಅಭಿನಂದನಾ ನುಡಿ ಆಡಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಅಪ್ರವರಂಬೆ ನಿರ್ದೇಶಕರಾದ ಯು.ಎಸ್.ರಾಮಣ್ಣ, ನಾ.ನಾಗಚಂದ್ರ ಇದ್ದರು.

ನಾಳೆ ನಾರಾಯಣ ಗುರುಗಳ ಜಯಂತಿ

ಮೈಸೂರು,ಸೆ.8(ಎಂಟಿವೈ)– ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ಸೆ.10ರಂದು ಬೆಳಗ್ಗೆ 11ಕ್ಕೆ ಬ್ರಹ್ಮಶ್ರೀ ನಾರಾಯಣ ಗುರುಗಳ 168ನೇ ಜಯಂತಿ ಆಚರಿಸಲಾಗುತ್ತಿದೆ ಎಂದು ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಆರ್ಯ ಈಡಿಗರ ಸಂಘದ ಉಪಾಧ್ಯಕ್ಷ ರಾಜಶೇಖರ ಕದಂಬ ತಿಳಿಸಿದ್ದಾರೆ.




ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಧ್ಯಾತ್ಮಿಕ ಪುರುಷರು ಸಮಾಜ ಸುಧಾರಕರೂ ಆಗಿರುವ ಬ್ರಹ್ಮಶ್ರೀ ನಾರಾಯಣ ಗುರುಗಳು ತಮ್ಮದೇ ಆದ ತತ್ವ ಸಿದ್ಧಾಂತಗಳಿಂದ ಸಮಾಜದಲ್ಲಿ ಬೇರೂರಿದ್ದ ಜಾತೀಯತೆ, ಶೋಷಣೆ, ಅಜ್ಞಾನ, ಅಂಧಕಾರ ಹಾಗೂ ಮೂಢನಂಬಿಕೆ ಹೋಗಲಾಡಿಸಲು ಶ್ರಮಿಸಿದ್ದರು. ಜಿಲ್ಲಾಡಳಿತದ ವತಿಯಿಂದ ನಾರಾಯಣ ಗುರುಗಳ 168ನೇ ಜನ್ಮ ಜಯಂತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಈ ವೇಳೆ ಸೇಂಟ್ ಫಿಲೋಮಿನಾ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿ.ವಿ.ಶ್ರೀಧರ ಮೂರ್ತಿ ಪ್ರಧಾನ ಭಾಷಣ ಮಾಡಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಆರ್ಯ ಈಡಿಗರ ಸಂಘದ ಸಹ ಕಾರ್ಯದರ್ಶಿ ಟಿ.ಎಸ್.ಮುರಳಿ, ಖಜಾಂಚಿ ಹೆಚ್.ಟಿ.ಗೋವಿಂದರಾಜು, ಸಂಘಟನಾ ಕಾರ್ಯದರ್ಶಿ ಬಿ.ವಿದ್ಯಾಸಾಗರ ಕದಂಬ, ಪ್ರಧಾನ ಸಂಚಾಲಕ ವಿ.ಜಯಣ್ಣ, ಕಚೇರಿ ನಿರ್ವಾಹಕ ಕೆ.ಎಚ್.ಸ್ವಾಮಿ, ಎಸ್.ಟಿ.ರಾಜು, ಕೆ.ಸೋಮಶೇಖರ್ ಉಪಸ್ಥಿತರಿದ್ದರು.

ನೀಟ್ (ಯುಜಿ)ನಲ್ಲಿ ಆಕಾಶ್ ಬೈಜೂಸ್‌ನ

ಮಾನಸ್ AIR 226, ಅರ್ನವ್ AIR 606 ಅಗ್ರಸ್ಥಾನ



ಮೈಸೂರು,ಸೆ.8–ರಾಷ್ಟ್ರೀಯ ಪ್ರವೇಶ ಪರೀಕ್ಷೆ (NEET) UG 2022ರ ಫಲಿತಾಂಶದಲ್ಲಿ ಮೈಸೂರಿನ ಆಕಾಶ್ ಬೈಜೂಸ್‌ನ ಏಳು ವಿದ್ಯಾರ್ಥಿಗಳು ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಅವರಲ್ಲಿ ವಿದ್ಯಾರ್ಥಿ ಮಾನಸ್ ಕುಡ್ಲಾಪುರ್ ರಾಕೇಶ್ AIR 226 (720/685) ಅಂಕ ಪಡೆದುಕೊಳ್ಳುವ ಮೂಲಕ ಸಂಸ್ಥೆಗೆ ಹೆಮ್ಮೆ ತಂದಿದ್ದಾರೆ. ನಂತರ ಅರ್ನವ್ ರಂಜನ್ 606 (720/685) ಅಂಕಗಳನ್ನು ಪಡೆದುಕೊಂಡಿದ್ದಾರೆ ಎಂದು ಆಕಾಶ್ ಬೈಜೂಸ್‌ನ ವ್ಯವಸ್ಥಾಪಕ ನಿರ್ದೇಶಕ ಆಕಾಶ್ ಚೌಧರಿ ತಿಳಿಸಿದ್ದಾರೆ.




ಮರೀಗೌಡಗೆ ಪಿಹೆಚ್.ಡಿ ಪದವಿ

ಮೈಸೂರು, ಸೆ.8– ಡಾ.ಬಿ. ನಾಗಮೂರ್ತಿ ಅವರ ಮಾರ್ಗದರ್ಶನದಲ್ಲಿ ಪಿ.ಮರೀಗೌಡ ಅವರು ಕ್ರಿಮಿನಾಲಜಿ ಮತ್ತು ಫೋರೆನ್ಸಿಕ್ ಸೈನ್ಸ್ ವಿಷಯದಲ್ಲಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರಿನ ಭಾವಸಾರ ಸಮಾಜದ ಹಿರಿಯ ಮುಖಂಡ ನಾರಾಯಣರಾವ್ ತೇಲ್ಕರ್ ನಿಧನ

ಮೈಸೂರು, ಸೆ.8– ಮೈಸೂರಿನ ಲಷ್ಕರ್ ಮೊಹಲ್ಲಾದ ಸೊಪ್ಪಿನಕೇರಿ ನಿವಾಸಿ ನಿವೃತ್ತ ರೈಲ್ವೆ ಉದ್ಯೋಗಿ, ಸಮಾಜ ಭೂಷಣ ಟಿ.ಎಚ್.ನಾರಾಯಣರಾವ್ ತೇಲ್ಕರ್ (79) ಅವರು ಗುರುವಾರ ಮುಂಜಾನೆ ನಿಧನರಾದರು.



ಮೃತರು ಪತ್ನಿ ದ್ರಾಕ್ಷಾಯಿಣಿ, ಪುತ್ರರಾದ ಮಂಜುನಾಥ್ ತೇಲ್ಕರ್, ರಾಘವೇಂದ್ರ ತೇಲ್ಕರ್ ಮತ್ತು ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಮೃತರು ಭಾವಸಾರ ಕ್ಷತ್ರಿಯ ಮಂಡಳಿ ಉಪಾಧ್ಯಕ್ಷ, ಭಾವಸಾರ ಕ್ಷತ್ರಿಯ ಕೋ–ಆಪರೇಟಿವ್ ಸೊಸೈಟಿ, ಭಾವಸಾರ ಕ್ಷತ್ರಿಯ ಚಾಮುಂಡೇಶ್ವರಿ ದೇವಸ್ಥಾನ ಟ್ರಸ್ಟ್, ಭಾವಸಾರ ಕ್ಷತ್ರಿಯ ಇನ್‌ಸ್ಟಿಟ್ಯೂಟ್ ಟ್ರಸ್ಟ್, ವಿಠ್ಠಲ ರುಕ್ಮಿಣಿ ಕನ್ವೆನ್ಷನ್ ಹಾಲ್ ಸೇರಿದಂತೆ ಸಮಾಜದ ವಿವಿಧ ಅಂಗಸಂಸ್ಥೆಗಳಲ್ಲಿ ಪ್ರಮುಖ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ್ದರು. ಅವರ ಸಾಮಾಜಿಕ ಸೇವಾ ಕಾರ್ಯವನ್ನು ಪ್ರಶಂಸಿಸಿ ಅವರಿಗೆ ಎಐಬಿಕೆ ಮಹಾಸಭಾ ಹೈದ್ರಾಬಾದ್‌ನಲ್ಲಿ ನಡೆದ ರಾಷ್ಟ್ರೀಯ ಸಮ್ಮೇಳನದಲ್ಲಿ 'ಸಮಾಜ ಭೂಷಣ' ಪ್ರಶಸ್ತಿ ನೀಡಿ ಗೌರವಿಸಿತ್ತು.

ಮೃತರ ಅಂತ್ಯಕ್ರಿಯೆ ಗುರುವಾರ ಸಂಜೆ ಚಾಮುಂಡಿಬೆಟ್ಟ ಪಾದದ ಬಳಿ ನೆರವೇರಿಸಲಾಯಿತು ಎಂದು ಅವರ ಕುಟುಂಬದ ಮೂಲಗಳು ತಿಳಿಸಿವೆ.

ಮೂರು ದಿನಗಳ 14ನೇ ಅಖಿಲ ಕರ್ನಾಟಕ ವಿಜ್ಞಾನ ಸಮ್ಮೇಳನಕ್ಕೆ ಇಸ್ರೋ ಮಾಜಿ ಅಧ್ಯಕ್ಷ ಎ.ಎಸ್.ಕಿರಣ್‌ಕುಮಾರ್ ಚಾಲನೆ

ವಿಜ್ಞಾನ–ತಂತ್ರಜ್ಞಾನ ದುರ್ಬಳಕೆ ನಿಯಂತ್ರಣವೂ ಅಗತ್ಯ



ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಮೈಸೂರಿನ ಮುಕ್ತ ಗಂಗೋತ್ರಿ ಘಟಿಕೋತ್ಸವ ಭವನದಲ್ಲಿ ಆಯೋಜಿಸಿರುವ ಮೂರು ದಿನಗಳ 14ನೇ ಅಖಿಲ ಕರ್ನಾಟಕ ವಿಜ್ಞಾನ ಸಮ್ಮೇಳನಕ್ಕೆ ಸಮ್ಮೇಳನಾಧ್ಯಕ್ಷರೂ ಆದ ಇಸ್ರೋ ಮಾಜಿ ಅಧ್ಯಕ್ಷ ಎ.ಎಸ್.ಕಿರಣ್‌ಕುಮಾರ್ ಚಾಲನೆ ನೀಡಿದರು. ಚಿತ್ರದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್, ರಾಜ್ಯ ವಿಜ್ಞಾನ ಪರಿಷತ್ ಅಧ್ಯಕ್ಷ ಗಿರೀಶ್ ಬಿ.ಕಡ್ಲೇವಾಡ, ಶ್ರೀಮತಿ ಹರಿಪ್ರಸಾದ್ ಇನ್ನಿತರರನ್ನು ಕಾಣಬಹುದು.

ಮೈಸೂರು, ಸೆ.8(ಆರ್‌ಕೆಬಿ)– ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಪ್ರಗತಿಯು ತ್ವರಿತ ಗತಿಯಲ್ಲಿ ಆಗುತ್ತಿದೆ. ಅದೇ ಸಮಯದಲ್ಲಿ ಇಂತಹ ಪ್ರಗತಿಯ ದುರುಪಯೋಗವಾಗುತ್ತಿದೆ. ಇದರ ತಡೆಗೆ ಜನರಿಗೆ ನಿರಂತರವಾಗಿ ವಿಜ್ಞಾನ–ತಂತ್ರಜ್ಞಾನದ ದುರ್ಬಳಕೆ ಕುರಿತು ಶಿಕ್ಷಣ ನೀಡುವುದು ಅಗತ್ಯ ಎಂದು ಇಸ್ರೋ ಮಾಜಿ ಅಧ್ಯಕ್ಷ ಎ.ಎಸ್. ಕಿರಣ್‌ಕುಮಾರ್ ಅಭಿಪ್ರಾಯಪಟ್ಟರು.

ಮೈಸೂರಿನ ಮುಕ್ತ ಗಂಗೋತ್ರಿ ಆವರಣದ ಕರ್ನಾಟಕ ಮುಕ್ತ ವಿವಿಯ ಘಟಿಕೋತ್ಸವ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಆಯೋಜಿಸಿರುವ ಮೂರು ದಿನಗಳ 14ನೇ ಅಖಿಲ ಕರ್ನಾಟಕ ವಿಜ್ಞಾನ ಸಮ್ಮೇಳನಕ್ಕೆ ಡೋಲು ಬಾರಿಸುವ ಮೂಲಕ ಚಾಲನೆ ನೀಡಿ, ಮಾತನಾಡಿದರು.

ಪ್ರತಿಯೊಬ್ಬರೂ ತಮ್ಮದೇ ಆದ ದಕ್ಷತೆಯನ್ನು ಬಳಸಿಕೊಂಡು ಮುಂದೆ ಬರಬೇಕಾದ ಅಗತ್ಯವನ್ನು ಒತ್ತಿ ಹೇಳಿದ ಅವರು, ಮೊಬೈಲ್ ಫೋನ್‌ಗಳು ಇಬ್ಬರು ವ್ಯಕ್ತಿಗಳನ್ನು ಎಲೆಕ್ಟ್ರೋಮ್ಯಾಗ್ನೆಟಿಕ್ ವಿಕಿರಣದೊಂದಿಗೆ ಸಂಪರ್ಕಿಸುವಂತೆ, ದೇಶದ ಬೆಳವಣಿಗೆಗೆ ಮಾನವರು ಕೂಡ ತಮ್ಮ ಮನಸ್ಸಿನೊಂದಿಗೆ ಸಂಪರ್ಕ ಹೊಂದಬೇಕು ಎಂದು ಹೇಳಿದರು. ಸಮಾಜದ ಸುಧಾರಣೆ ಎಂದು ಹೇಳುವುದು ಸುಲಭವಾದರೂ ಆಚರಣೆಯಲ್ಲಿ ಸ್ವಲ್ಪ ಕಷ್ಟ ಎಂದರು.

ಭೂಮಿಯ ಮೇಲಿನ ಪ್ರತಿಯೊಂದು ಜೀವಿಯ ಮಹತ್ವವನ್ನು ಪ್ರತಿಯೊಬ್ಬರೂ ಅರಿತುಕೊಳ್ಳಬೇಕು. ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಉತ್ತಮ ರೀತಿಯಲ್ಲಿ ಬಳಸಿದರೆ ಮಾನವರು ಉತ್ತಮವಾಗಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಜಾಗತಿಕ ತಾಪಮಾನ ಮತ್ತು ಹವಾಮಾನ ಬದಲಾವಣೆಯನ್ನು ಉಲ್ಲೇಖಿಸಿದ ಅವರು, ಅತ್ಯಾಧುನಿಕ ಉಪಗ್ರಹಗಳ ಉಡಾವಣೆ ಹೊರತಾಗಿಯೂ, ಹವಾಮಾನ ಬದಲಾವಣೆಯ ಕುರಿತು ಸರಿಯಾಗಿ ಊಹಿಸಲು, ನಿರ್ಧರಿಸಲು ಜಗತ್ತು ವಿಫಲವಾಗಿದೆ ಎಂದು ವಿಷಾದಿಸಿದರು. ಇದು ಜಗತ್ತಿನಾದ್ಯಂತ ನಾನಾ ರೀತಿಯ ಹಾನಿಯನ್ನುಂಟು ಮಾಡುತ್ತಿದೆ. ಹವಾಮಾನ ಬದಲಾವಣೆಯ ಕಾರಣಗಳು ಮತ್ತು ಪರಿಣಾಮಗಳನ್ನು ಪತ್ತೆ ಹಚ್ಚಲು ನಿರಂತರ ಸಂಶೋಧನೆಯನ್ನು ಕೈಗೊಳ್ಳುವ ಅಗತ್ಯವನ್ನು ಅವರು ತಿಳಿಸಿದರು.

> ❝ ವಿಜ್ಞಾನ ಮತ್ತು ತಂತ್ರಜ್ಞಾನವು ಅಭೂತಪೂರ್ವ ವೇಗದ ಪ್ರಗತಿಯನ್ನು ಸಾಧಿಸುತ್ತಿರುವುದರಿಂದ, ಹೊಸ ಸಮಸ್ಯೆಗಳು ಸೃಷ್ಟಿಯಾಗುತ್ತಿವೆ. ಹಾಗಾಗಿ, ಈ ಸಮಸ್ಯೆಗಳಿಗೆ ನಾವು ಆದಷ್ಟು ಬೇಗ ಉತ್ತರಗಳನ್ನು ಹುಡುಕಬೇಕಾಗಿದೆ. ಹಲವಾರು ಅಂತಾರಾಷ್ಟ್ರೀಯ ಕಂಪನಿಗಳು ಲಾಭ ಗಳಿಸುವ ಏಕೈಕ ಗುರಿಯೊಂದಿಗೆ ಮನುಷ್ಯರನ್ನು ಕೇವಲ ಗ್ರಾಹಕರನ್ನಾಗಿ ಮಾಡಲು ಪ್ರಯತ್ನಿಸುತ್ತಿವೆ. ಈ ಯೋಜನೆಗಳ ಬಗ್ಗೆ ನಾವು ಜಾಗರೂಕರಾಗಿರಬೇಕು. –ಎ.ಎಸ್.ಕಿರಣ್‌ಕುಮಾರ್

ರಾಜ್ಯ ವಿಜ್ಞಾನ ಪರಿಷತ್ತಿನ ರಾಜ್ಯ ಮತ್ತು ಮೈಸೂರು ಜಿಲ್ಲಾ ಸಮಿತಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ, ಜಿಲ್ಲಾಡಳಿತ, ರಾಜ್ಯ ಮುಕ್ತ ವಿವಿ, ಮೈಸೂರು ವಿವಿ ಸಹಯೋಗದಲ್ಲಿ ನಡೆಯುತ್ತಿರುವ ಸಮ್ಮೇಳನದಲ್ಲಿ ಉತ್ತಮ ವಿಚಾರಗಳು ಹೊರಹೊಮ್ಮಲಿ ಎಂದು ಹಾರೈಸಿದರು.

ಮೈಸೂರು ವಿವಿ ಕುಲಪತಿ ಪ್ರೊ.ಜಿ. ಹೇಮಂತಕುಮಾರ್, ವಿಶ್ರಾಂತ ಕುಲಪತಿ ಪ್ರೊ.ಪಿ.ವೆಂಕಟರಾಮಯ್ಯ, ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ರಾಜ್ಯ ವಿಜ್ಞಾನ ಪರಿಷತ್ ಅಧ್ಯಕ್ಷ ಗಿರೀಶ್ ಬಿ.ಕಡ್ಲೇವಾಡ, ಗೌರವ ಕಾರ್ಯದರ್ಶಿ ಸಿ.ಕೃಷ್ಣೇಗೌಡ, ರಾಜ್ಯ ಸಂಚಾಲಕ ಎ.ಎನ್.ಮಹೇಶ್, ಪದಾಧಿಕಾರಿಗಳಾದ ಡಾ.ಆರ್. ಶೇಖರ್ ನಾಯಕ್, ಶ್ರೀಮತಿ ಹರಿಪ್ರಸಾದ್, ಟಿ.ಜಿ. ಕೃಷ್ಣಮೂರ್ತಿರಾಜ್‌ಅರಸ್, ಮೀನಾಕ್ಷಿ ಕುಡುಸೋಮಣ್ಣವರ ಇತರರು ಉಪಸ್ಥಿತರಿದ್ದರು.

ಓಣಂ ಮೂಲಕ ಸಮಾಜ ಬೆಸೆಯುವ ಕೆಲಸ



ಮೈಸೂರು, ಸೆ. 8– ಶಿಕ್ಷಣ ಕ್ಷೇತ್ರದಲ್ಲಿ ದೇಶದಲ್ಲೇ ಮೊದಲ ಸ್ಥಾನದಲ್ಲಿರುವುದು ಕೇರಳ ರಾಜ್ಯಕ್ಕೆ ಹೆಮ್ಮೆಯ ವಿಚಾರ. ಕೇರಳೀಯರು ಪ್ರಪಂಚದ ಯಾವುದೇ ಮೂಲೆಯಲ್ಲೂ ಕಾಣಿಸುತ್ತಾರೆ. ಧಾರ್ಮಿಕ, ದೇವಾಲಯಗಳ ನಾಡು ಕೂಡ ಹೌದು. ಓಣಂ ಹಬ್ಬದ ಮೂಲಕ ಸಮಾಜವನ್ನು ಬೆಸೆಯುವ ಕೆಲಸ ಆಗುತ್ತಿದೆ ಎಂದು ಕಾಮಾಕ್ಷಿ ಆಸ್ಪತ್ರೆಯ ಮ್ಯಾನೇಜಿಂಗ್ ಟ್ರಸ್ಟಿ ಮಹೇಶ್ ಶೆಣೈ ಹೇಳಿದರು.

ಕಾಮಾಕ್ಷಿ ಆಸ್ಪತ್ರೆ ಆವರಣದಲ್ಲಿ ಆಸ್ಪತ್ರೆ ವೈದ್ಯರು ಹಾಗೂ ಸಿಬ್ಬಂದಿ ಓಣಂ ಹಬ್ಬದ ಅಂಗವಾಗಿ ಹೂಗಳಿಂದ ಆಕರ್ಷಕ ರಂಗೋಲಿ ಬಿಡಿಸಿದ್ದರು. ಓಣಂ ಹಿನ್ನೆಲೆಯಲ್ಲಿ ಏರ್ಪಡಿಸಿದ್ದ ನಾನಾ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನವನ್ನು ವಿತರಿಸಲಾಯಿತು. ಓಣಂ ಆಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಹಾಬಲಿಯು ಪ್ರತಿ ವರ್ಷವೂ ಓಣಂ ಸಂದರ್ಭದಲ್ಲಿ ಭೂಮಿಗೆ ಮರಳಿ ಬಂದು ಜನರ ಕಷ್ಟಗಳನ್ನು ನಿವಾರಿಸುತ್ತಾನೆ ಎನ್ನುವ ನಂಬಿಕೆಯಿದೆ. ಇದರಿಂದಾಗಿ ಈ ಹಬ್ಬವು ಅತ್ಯಂತ ಮಹತ್ವವಾಗಿದೆ. ವಿಷ್ಣುವಿನ ವಾಮನ ಅವತಾರದ ಇತಿಹಾಸವನ್ನು ಓಣಂ ಎಲ್ಲರಿಗೂ ಶುಭವನ್ನು ತರಲಿ ಎಂದು ಹಾರೈಸಿದರು.

ಇದೇ ಸಂದರ್ಭದಲ್ಲಿ ಅಶೋಕ್ ಶೆಣೈ, ಡಾ.ರೂಪಾ ಪ್ರಕಾಶ್, ಡಾ.ಉಮೇಶ್ ಕಾಮತ್, ಡಾ.ಪ್ರಸನ್ನಕುಮಾರ್, ಡಾ. ವಿಜಯ್‌ಕುಮಾರ್, ಡಾ.ಪುಷ್ಪಲತಾ, ಡಾ. ಧನ್ಯ, ಡಾ.ಜನಾರ್ಧನ, ಡಾ.ರವಿಕುಮಾರ್, ಡಾ.ನಳಿನಿ, ಡಾ.ಶ್ರುತಿ, ಡಾ.ದಿವ್ಯಾ ಹಾಗೂ ಇನ್ನಿತರರು ಹಾಜರಿದ್ದರು.

ಪಟಾಕಿ ಮಾರಾಟ ಲೈಸೆನ್ಸ್‌ಗೆ ಅರ್ಜಿ ಸಲ್ಲಿಸಿ



ಮೈಸೂರು, ಸೆ.8(ಆರ್‌ಕೆ)–ಪಟಾಕಿ ಮಾರಾಟ ಮಾಡಲಿಚ್ಛಿಸುವವರು ಪರವಾನಗಿ ಪಡೆಯಲು ಸೆ.17ರೊಳಗಾಗಿ ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿಗೆ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸುವಂತೆ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ತಿಳಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಅಕ್ಟೋಬರ್ 24ರಿಂದ 26ರವರೆಗೆ ದೀಪಾವಳಿ ಹಬ್ಬ ಆಚರಿಸುತ್ತಿರುವುದರಿಂದ ಮೈಸೂರಿನ ವಿವಿಧ ಬಡಾವಣೆಗಳಲ್ಲಿ ಪಟಾಕಿ ಮಾರಾಟ ಮಾಡಲು ಅನುಮತಿ ಪಡೆಯಬೇಕಾಗಿದೆ. ಆಸಕ್ತರು ಫಾರಂ ನಂಬರ್ 'ಎಲ್‌ಇ–5'ರಲ್ಲಿ ಕೇಳಿರುವ ಮಾಹಿತಿ ನೀಡಿ ಭರ್ತಿ ಮಾಡಿದ ಅರ್ಜಿಯನ್ನು ತಮ್ಮ ಕಚೇರಿಗೆ ಸಲ್ಲಿಸುವಂತೆ ಅವರು ತಿಳಿಸಿದ್ದಾರೆ.



ಮೈಸೂರಿನ ಅಗಸ್ತ್ಯ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ 28ನೇ ವಾರ್ಷಿಕ ಮಹಾಸಭೆಯಲ್ಲಿ ಅಧ್ಯಕ್ಷ ಪಾರ್ಥಸಾರಥಿ, ಉಪಾಧ್ಯಕ್ಷ ಪ್ರಶಾಂತ್ ತಾತಾಚಾರ್, ಖಜಾಂಚಿ ಗೋಪಿನಾಥ್, ಹಿರಿಯ ನಿರ್ದೇಶಕರಾದ ಕಲ್ಕೆರೆ ನಾಗರಾಜ, ಬಾಲಕೃಷ್ಣ, ಪ್ರೀತನ್, ಅರುಣ್, ರೇಖಾ, ಸೌಮ್ಯ, ಫಣಿರಾಜ್, ನಾಗಶಂಕರ್, ರಾಜಮ್ಮ, ನಾಗೇಂದ್ರ, ರಂಗನಾಥ್, ಸತೀಶ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರಿನ ಸುತ್ತೂರು ಮಠದಲ್ಲಿ ಬೆಳದಿಂಗಳ ಸಂಗೀತ



ಮೈಸೂರು,ಸೆ.8–ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಸೆ.10ರಂದು ಶನಿವಾರ ಸಂಜೆ 6 ಗಂಟೆಗೆ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಜಿ ಆಶೀರ್ವಾದದೊಂದಿಗೆ ಬೆಳದಿಂಗಳ ಸಂಗೀತ–246ರ ಅಂಗವಾಗಿ ವಿದುಷಿ ಶಶಿಕಲಾ ದಾನಿಯವರಿಂದ ಹಿಂದೂಸ್ತಾನಿ ಜಲತರಂಗ ವಾದನವನ್ನು ಏರ್ಪಡಿಸಲಾಗಿದೆ. ವಿದುಷಿ ಶಶಿಕಲಾ ದಾನಿಯವರು ಹಿಂದೂಸ್ತಾನಿ ಜಲತರಂಗ ವಾದನದಲ್ಲಿ ಸಾಧನೆ ಮಾಡಿದ ವಿಶಿಷ್ಟ ಕಲಾವಿದರು. ತಂದೆ ಪಂ.ಡಿ.ಆರ್. ವಾರಂಗ್‌ರವರಿಂದ ಈ ವಾದನ ಕಲಿತು ಅದರಲ್ಲಿ ಪ್ರಾವೀಣ್ಯತೆಯನ್ನು ಪಡೆದುಕೊಂಡರು. ವಿದುಷಿ ಶಶಿಕಲಾ ದಾನಿಯವರು ಆಕಾಶವಾಣಿ ಮತ್ತು ದೂರದರ್ಶನದ ಬಿ–ಹೈ ಶ್ರೇಣಿ ಕಲಾವಿದರು. ಕರ್ನಾಟಕ, ಗುಜರಾತ್, ಗೋವಾ ಮುಂತಾದ ರಾಜ್ಯಗಳಲ್ಲಿ ತಮ್ಮ ವಾದನ ಪ್ರತಿಭೆಯ ಮೂಲಕ ಚಿರಪರಿಚಿತರು. ಹಲವಾರು ಸಂಗೀತ ಸಮ್ಮೇಳನಗಳಲ್ಲಿ ಜಲತರಂಗ ವಾದನ ಪ್ರಸ್ತುತಪಡಿಸಿ ವಿದ್ವಜ್ಜನರ ಮನ್ನಣೆ ಗಳಿಸಿದ್ದಾರೆ. ವಿಶ್ವವಿದ್ಯಾನಿಲಯದಲ್ಲಿದ್ದಾಗ ಉತ್ತಮ ಕ್ರೀಡಾಪಟುಗಳೂ ಆಗಿದ್ದರು. ಸ್ಟೇಟ್ ಬ್ಯಾಂಕಿನಲ್ಲಿ 3 ದಶಕಗಳಿಗೂ ಹೆಚ್ಚು ಕಾಲ ಕಾರ್ಯನಿರ್ವಹಿಸಿ, ಸಂಗೀತದತ್ತ ಗಮನ ನೀಡುವ ಸಲುವಾಗಿ, ಸೇವೆಯಿಂದ ಸ್ವಯಂ ನಿವೃತ್ತಿ ಪಡೆದರು. ಬೆಂಗಳೂರು ಮತ್ತು ಹುಬ್ಬಳ್ಳಿಯಲ್ಲಿ ಸ್ವರನಾದ ಸಂಗೀತ ವಿದ್ಯಾಲಯ ಸ್ಥಾಪಿಸಿ ಶಾಸ್ತ್ರೀಯ ಸಂಗೀತ ಶಿಕ್ಷಣ ನೀಡುತ್ತಿದ್ದಾರೆ, ರಾಜ್ಯ ಸರ್ಕಾರದ 'ಕರ್ನಾಟಕ ಕಲಾಶ್ರೀ' ಮತ್ತು 'ಕಿತ್ತೂರು ರಾಣಿ ಚೆನ್ನಮ್ಮ' ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ನಾಳೆ ಶನಿ ಮಹಾ ಶಾಂತಿ

ಮೈಸೂರು,ಸೆ.8–ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಹುಣ್ಣಿಮೆ ಪ್ರಯುಕ್ತ ಸೆ.10ರಂದು ಶನಿವಾರ ಮಿಥುನ, ಕನ್ಯಾ, ಧನಸ್ಸು, ಮಕರ, ಕುಂಭ ರಾಶಿಯವರಿಗೆ ಶನಿ ಮಹಾ ಶಾಂತಿ ಬಾಧನಿವಾರಕ ಸುದರ್ಶನ ಹೋಮ ಮತ್ತು ಶ್ರೀ ಸತ್ಯನಾರಾಯಣ ಪೂಜೆ ವಿದ್ಯಾ ದಕ್ಷಿಣಾಮೂರ್ತಿ ಹೋಮ ಮಹಾ ಮೃತ್ಯುಂಜಯ ಹೋಮ ಏರ್ಪಡಿಸಿದೆ. ಅಂದು ಬೆಳಗ್ಗೆ 8.30ರಿಂದ ಸಂಕಲ್ಪ ಪ್ರಾರಂಭ ಮಧ್ಯಾಹ್ನ 12 ಗಂಟೆಗೆ ಪೂರ್ಣಾಹುತಿ. ಮಾಹಿತಿಗೆ ಮೈಕುಮಾರ್) ಜಾತಕ ವಿಮರ್ಶಕ) 9845183392 9845183399 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

9.09.2022 ಶುಕ್ರವಾರ, ಮಳೆ ನಕ್ಷತ್ರ: ಪುಬ್ಬ, 31.08.2022ರಿಂದ 13.09.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ,
ತಿಥಿ : ಚತುರ್ದಶಿ, ನಕ್ಷತ್ರ : ಧನಿಷ್ಠ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ 19ನೇ ಚಾತುರ್ಮಾಸ್ಯ ವ್ರತ ದೀಕ್ಷಾ ಮಹೋತ್ಸವ, ಅನಂತಪದ್ಮನಾಭ ವ್ರತ, ದೇವ ದೇವ ದತ್ತಾವತಾರ, ನೂಜಿವೀಡು ಗಣಪತಿ ನವರಾತ್ರಿ ಪರಿಸಮಾಪ್ತಿ, ಗಣಪತಿ ವಿಸರ್ಜನೆ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಮಹಾವಿದ್ಯಾಲಯ ಮತ್ತು ಆಸ್ಪತ್ರೆ :** ಪರ್ವ ವಿದ್ಯಾರ್ಥಿ ಸಂಘದ ಬೀಳ್ಕೊಡುಗೆ ಮತ್ತು ಯುಜ್ ವಿದ್ಯಾರ್ಥಿ ಸಂಘದ ಉದ್ಘಾಟನೆ, ಅಧ್ಯಕ್ಷತೆ : ಡಾ. ಗಜಾನನ ಹೆಗ್ಡೆ, ಸ್ಥಳ: ಪತಂಜಲಿ ಸಭಾಂಗಣ, ಬೆಳಗ್ಗೆ 9 ರಿಂದ.

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜು :** ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜಯಂತಿ ಮಹೋತ್ಸವ ಹಾಗೂ ಪದವಿ ಕಾಲೇಜು ಸಾಂಸ್ಕೃತಿಕ, ಸಾಹಿತ್ಯಕ ಮತ್ತು ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭ, ಅಧ್ಯಕ್ಷತೆ: ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ. ಆರ್. ಮೂಗೇಶಪ್ಪ, ನುಡಿ ನಮನ : ಮೈಸೂರು ವಿವಿ ಶ್ರೀ ಬಸವೇಶ್ವರ ಕೇಂದ್ರದ ಸಂದರ್ಶಕ ಪ್ರಾಧ್ಯಾಪಕ ಪ್ರೊ. ಚಂದ್ರಶೇಖರಯ್ಯ, ಸಮಾರೋಪ ಭಾಷಣ : ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು. ಸದಾನಂದಯ್ಯ, ಬಹುಮಾನ ವಿತರಣೆ : ಪ್ರೊ. ಸಿ. ವೆಂಕಟೇಶ್, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಅಲ್ಜೈಮರ್ಸ್ ಅಂಡ್ ರಿಲೇಟೆಡ್ ಡಿಸಾರ್ಡರ್ಸ್ ಸೊಸೈಟಿ ಆಫ್ ಇಂಡಿಯಾ, ಮೈಸೂರು ಚಾಪ್ಟರ್, ಶಾರದಾ ವಿಲಾಸ ಔಷಧ ವಿಜ್ಞಾನ ಮಹಾವಿದ್ಯಾಲಯ :** ವಿಶ್ವ ಅಲ್ಜೈಮರ್ಸ್ ಮಾಸಾಚರಣೆ, ಮುಖ್ಯ ಅತಿಥಿಗಳು : ರೋಟರಿ ಮೈಸೂರು ವಲಯ–7 ಅಧ್ಯಕ್ಷ ಸುಬ್ರಹ್ಮಣ್ಯ ರಾವ್ ಕೆ., ಗೌರವ ಅತಿಥಿಗಳು : ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಎನ್. ಚಂದ್ರಶೇಖರ್, ಕರ್ನಲ್ (ನಿವೃತ್ತ) ರವಿ ಶಿರಹಟ್ಟಿ, ಡಾ. ಪಿ.ಎಲ್. ಬಸವಣ್ಣ, ಡಾ. ಪ್ರತಿಭಾ ಪೆರೇರಾ, ಅಧ್ಯಕ್ಷತೆ : ಶಾರದಾ ವಿಲಾಸ ಔಷಧ ವಿಜ್ಞಾನ ಮಹಾವಿದ್ಯಾಲಯ ಪ್ರಾಂಶುಪಾಲ ಡಾ. ಹನುಮಂತಾಚಾರ್ ಜೋಷಿ, ಸ್ಥಳ: ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ,

■ **ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಜಿಲ್ಲಾಡಳಿತ, ಕರಾಮುವಿವಿ, ಮೈಸೂರು ವಿಶ್ವವಿದ್ಯಾನಿಲಯ :** ಅಖಿಲ ಕರ್ನಾಟಕ ವಿಜ್ಞಾನ ಸಮ್ಮೇಳನ, ಬೆಳಗ್ಗೆ 10ರಿಂದ ಗೋಷ್ಠಿ–3, ಸಾಗರದಲ್ಲಿ ಪ್ಲಾಸ್ಟಿಕ್ ಮಾಲಿನ್ಯ, ವಿಷಯ ಮಂಡನೆ : ವಿಶ್ರಾಂತ ಪ್ರಾಧ್ಯಾಪಕ ಡಾ.ವಿ.ಎನ್.ನಾಯಕ್, ಅಧ್ಯಕ್ಷತೆ: ಕರಾವಿಪ, ಮೈಸೂರು ಜಿಲ್ಲಾ ಸಮಿತಿ ಅಧ್ಯಕ್ಷ ಡಾ.ಆರ್.ಶೇಖರ್ ನಾಯಕ್; ಬೆಳಗ್ಗೆ 10.45 ರಿಂದ ವೈವಿಧ್ಯ–ಜೀವ ಜಗತ್ತಿನ ಜೀವಾಳ, ವಿಷಯ ಮಂಡನೆ: ಡಾ.ಜಯಕರ ಭಂಡಾರಿ, ಬೆಳಗ್ಗೆ 11.30 ರಿಂದ ಗೋಷ್ಠಿ–4, ವಿಷಯ: ವಿಜ್ಞಾನ ಸೌಂದರ್ಯತೆ ಹಾಗೂ ಸೌಂದರ್ಯದ ವಿಜ್ಞಾನ, ವಿಷಯ ಮಂಡನೆ: ಪ್ರೊ.ಎಸ್.ಎಂ.ಶಿವಪ್ರಸಾದ್, ಅಧ್ಯಕ್ಷತೆ: ಡಾ.ಎ.ಟಿ.ಶಿವರಾಮು, ಉಪಸ್ಥಿತರು: ಪಿ.ಎಸ್. ಕೌಶಿಕ್, ಡಾ.ಎಂ.ಪಿ.ರಾಘವೇಂದ್ರ, ಸ್ಥಳ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಗಾಂಧಿ ಒಂದು ನೆನಪು, ಪ್ರಸ್ತುತಿ–ಪ್ರೊ.ಎನ್.ವೆಂಕೋಬರಾವ್, 6.40 ಭಾವಗೀತೆ–ಕೆ.ಎಸ್.ಸುರೇಖಾ, 6.45 ರೈತರಿಗೆ ಸಲಹೆ, 6.50 ವನ ಮಹೋತ್ಸವ–ಅರಣ್ಯ ಇಲಾಖೆಯ ಪ್ರಾಯೋಜಿತ ಕಾರ್ಯಕ್ರಮ, 7.15 ಭಾವಗೀತೆ, 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಪ್ರಾಯೋಜಿತ ಆರೋಗ್ಯ ಕಾರ್ಯಕ್ರಮ–ಹೃದಯಾಘಾತ ಎಂದರೇನು? ಹೃದಯಾಘಾತವಾಗದಂತೆ ತಡೆಯುವ ಮುನ್ನೆಚ್ಚರಿಕೆ ಕ್ರಮಗಳು ಯಾವುವು? ಭಾಗವಹಿಸುವ ತಜ್ಞರು–ಡಾ.ಕೇಶವಮೂರ್ತಿ ವಿ., 10.00 ವಿಜಯಲಕ್ಷ್ಮಿ ಸುಬ್ರಮಣ್ಯಂ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್.ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ: ಉಮೇಶ್ ಎಸ್.ಎಸ್., 1.20 ಭಾವಗೀತೆ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ.ರವೀಂದ್ರಕುಮಾರ್, 3.00 ಗಾನರಸೋತ್ತುಂಗ ಶ್ರೀ ಶ್ಯಾಮ ಕೃಷ್ಣ–ಶ್ಯಾಮಾಶಾಸ್ತ್ರಿಗಳ ರಚನೆಗಳನ್ನಾಧರಿಸಿದ ವಿಶೇಷ ಕಾರ್ಯಕ್ರಮ ಸರಣಿ, 4.00 ಮಹಿಳಾರಂಗ–ಸಖೀಪದ, ಪ್ರಸ್ತುತಿ–ಎಂ.ಎಸ್.ಭಾರತಿ, 4.30 ವೃತ್ತಿ ಮಾರ್ಗದರ್ಶನ–ಫ್ಯಾಷನ್ ಡಿಸೈನಿಂಗ್ ಮತ್ತು ಇಂಟೀರಿಯರ್ ಡೆಕೋರೇಷನ್ ವಿಷಯದಲ್ಲಿ ಇರುವ ಅಧ್ಯಯನ ವೃತ್ತಿಪರ ಅವಕಾಶಗಳು ಕುರಿತು ವೇದಶ್ರೀ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್‌ವಾಣಿ, ಹವಾಮಾನ ಆಧರಿತ ಕೃಷಿ ತಂತ್ರಜ್ಞಾನಗಳು ಕುರಿತು ಡಾ.ಕೆ.ವಿ.ಕೇಶವಯ್ಯ ಅವರೊಂದಿಗೆ ಸಂದರ್ಶನ, 9.00 ಕನ್ನಡ ಭಾರತಿ–ರಷ್ಯನ್ ಸಾಹಿತ್ಯ ಮತ್ತು ಕನ್ನಡ ಕುರಿತು ಪ್ರೊ.ಹೆಚ್.ಎಸ್.ಹರಿಶಂಕರ್ ಅವರೊಡನೆ ಸಂದರ್ಶನ, ಸಂದರ್ಶಕರು– ದಿವಾಕರ ಹೆಗಡೆ, ಕಾವ್ಯಧಾರೆ–ವೀಣಾ ತಿರಕಪಡಿ ಅವರಿಂದ

■ **ಮುದ್ದುಕೃಷ್ಣ ಪ್ರಕಾಶನ ಮತ್ತು ಹಿರಣ್ಮಯಿ ಪ್ರತಿಷ್ಠಾನ:** ಪೂರ್ಣಚಂದ್ರ ತೇಜಸ್ವಿ ಮತ್ತು ಚುಟುಕು ಬ್ರಹ್ಮ ದಿನಕರ ದೇಸಾಯಿ ಅವರ ಜನ್ಮ ದಿನಾಚರಣೆ ಮತ್ತು ಕವಿಗೋಷ್ಠಿ, ಅಧ್ಯಕ್ಷತೆ : ಸಮಾಜ ಸೇವಾ ಕಾರ್ಯಕರ್ತ ಪ್ರಭುಸ್ವಾಮಿ, ಉದ್ಘಾಟನೆ : ಸಾಹಿತಿ ಬನ್ನೂರು ಕೆ. ರಾಜು, ಮುಖ್ಯ ಅತಿಥಿಗಳು : ಆರೋಗ್ಯ ಇಲಾಖೆ ವಿಶ್ರಾಂತ ಸಹ ನಿರ್ದೇಶಕ ಚಲುವೇಗೌಡ, ಕವಿಗೋಷ್ಠಿ ಉದ್ಘಾಟನೆ : ಮುಕ್ತಕ ಕವಿ ಎಂ. ಮುತ್ತುಸ್ವಾಮಿ, ಉಪಸ್ಥಿತರು : ಹಿರಣ್ಮಯಿ ಪ್ರತಿಷ್ಠಾನ ಅಧ್ಯಕ್ಷ ಎ. ಸಂಗಪ್ಪ, ಸ್ಥಳ: ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರ, ನಿಮಿಷಾಂಬಾ ಬಡಾವಣೆ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್ ವಿಭಾಗ, ಇಂಡಿಯನ್ ಅಕಾಡೆಮಿ ಆಫ್ ಬಯೊಮೆಡಿಕಲ್ ಸೈನ್ಸ್:** ಟ್ರಾನ್ಸಲೇಷನ್ ರಿಸರ್ಚ್ ಕುರಿತು ದಕ್ಷಿಣ ಭಾರತದ ಮೊದಲ ಅಂತರರಾಷ್ಟ್ರೀಯ ಸಮ್ಮೇಳನದ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು: ಜೆಎಸ್‌ಎಸ್ ಮೆಡಿಕಲ್ ಕಾಲೇಜು ಪ್ರಿನ್ಸಿಪಾಲ್ ಡಾ.ಬಸವನಗೌಡಪ್ಪ, ಉಪಸ್ಥಿತರು: ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜಿನ ಡಾ.ಟಿ. ವೆಂಕಟೇಶ್, ಪುದುಚೆರಿ ಜೆಐಪಿಎಂಇಆರ್‌ನ ಡಾ.ಮೇಧಾ, ಸೆಂಟ್ರಲ್ ಯೂನಿವರ್ಸಿಟಿ ಆಫ್ ಕೇರಳ, ಕಾಸರಗೋಡು ಡಾ.ಹೆಚ್.ಪಿ.ಗುರುಶಂಕರ, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಸಂಜೆ 4ಕ್ಕೆ.

■ **ಎಸ್‌ಪಿವಿಜಿಎಂಸಿ ಟ್ರಸ್ಟ್:** 61ನೇ ಪಾರಂಪರಿಕ ಸಂಗೀತೋತ್ಸವ, ಸಂಜೆ 5.30 ರಿಂದ ಕು. ಮಹಿಮಾ ಕಶ್ಯಪ್ ಮತ್ತು ಶ್ರೀಮತಿ ಶೋಭಾ ಆನಂದ್ ಎಲ್. ಅವರಿಂದ ಶಬರ ಶಂಕರ ಪಾರ್ಥರ ಯುದ್ಧ ಕುರಿತು ಕಾವ್ಯವಾಚನ, ಸಂಜೆ 6.45ಕ್ಕೆ ವಿದ್ವಾನ್ ಲಾಲ್‌ಗುಡಿ ಜಿಜೆಆರ್ ಕೃಷ್ಣನ್ ಅವರಿಂದ ವಯೋಲಿನ್ ವಾದನ, ವಿದ್ವಾನ್ ವಿಠ್ಠಲ್ ರಾಮಮೂರ್ತಿ–ವಯೋಲಿನ್, ವಿದ್ವಾನ್ ತಿರುವಾರೂರ್ ಭಕ್ತವತ್ಸಲಂ–ಮೃದಂಗ, ವಿದ್ವಾನ್ ಭಾರ್ಗವ ಹಾಲಂಬಿ–ಖಂಜಿರಾ, ಸ್ಥಳ: 8ನೇ ಕ್ರಾಸ್, ವಿವಿ ಮೊಹಲ್ಲಾ.

■ **ಮಹಾಲಿಂಗೇಶ್ವರ ಸೇವಾ ಸಮಿತಿ, ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಪ್ರತಿಷ್ಠಾನ:** ಶ್ರೀ ಕೃಷ್ಣ ಪಾರಿಜಾತ – ನರಕಾಸುರ ಮೋಕ್ಷ ಯಕ್ಷಗಾನ ಪ್ರದರ್ಶನ, ಸ್ಥಳ: ಶ್ರೀ ಕೃಷ್ಣಧಾಮ, ಗಂಗೋತ್ರಿ ಬಡಾವಣೆ, ಸಂಜೆ 6ರಿಂದ.

■ **ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್:** ರಾಯಲ್ ಚಾರ್ಟರ್ ಡೇ ಕುರಿತು ಇಐಇ ಮಾಜಿ ಅಧ್ಯಕ್ಷ ಪಿ.ಜೆ.ಭಾರದ್ವಾಜ್ ಅವರಿಂದ ಉಪನ್ಯಾಸ, ಸ್ಥಳ: ಎಸ್.ಪಿ.ಭಟ್ ಹಾಲ್, ಸಂಜೆ 6ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಸೆಪ್ಟೆಂಬರ್ 9 ಶುಕ್ರವಾರ 2022


ಸಂಪುಟ: 43 | ಸಂಚಿಕೆ: 144 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4





ದೆಹಲಿಯ ಇಂಡಿಯಾ ಗೇಟ್ ಬಳಿ 28 ಅಡಿ ಎತ್ತರದ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಪ್ರತಿಮೆಯನ್ನು ಗುರುವಾರ ಪ್ರಧಾನಮಂತ್ರಿ ನರೇಂದ್ರ ಮೋದಿ ಅನಾವರಣಗೊಳಿಸಿದರು. ಇದೇ ವೇಳೆ ಐತಿಹಾಸಿಕ ರಾಜಪಥಕ್ಕೆ 'ಕರ್ತವ್ಯ ಪಥ' ಎಂದು ಮರು ನಾಮಕರಣಗೊಂಡಿರುವ ರಸ್ತೆಯನ್ನು ಪ್ರಧಾನಿ ಮೋದಿ ಉದ್ಘಾಟಿಸಿದರು.

ಪರಿಶಿಷ್ಟ ಫಲಾನುಭವಿಗಳಿಗೆ ವಿರಳ ಕಾಯಿಲೆಗೂ

ಚಿಕಿತ್ಸಾ ವೆಚ್ಚ ಭರಿಸಲು ಸರ್ಕಾರ ನಿರ್ಧಾರ

ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಯೋಜನೆಯಡಿ ಈ ಹೊಸ ಕೊಡುಗೆ



ಬೆಂಗಳೂರು, ಸೆ.8(ಕೆಎಂಶಿ)–ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಯೋಜನೆಯಡಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ವಿರಳ ಕಾಯಿಲೆಗಳಿಗೂ ಚಿಕಿತ್ಸಾ ವೆಚ್ಚ ಭರಿಸಲು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಹೆಚ್ಚು ಚಿಕಿತ್ಸಾ ವೆಚ್ಚ ತಗುಲುವ ಕಾಯಿಲೆಗಳಿಗೂ ಉಚಿತ ಚಿಕಿತ್ಸೆ ನೀಡಲು ಕ್ರಮ ವಹಿಸಲಾಗಿದೆ. ಈ ಮೂಲಕ ಬಡ ಜನರ ಆರೋಗ್ಯ ರಕ್ಷಣೆಗೆ ಹೊಸ ಕೊಡುಗೆಯನ್ನು ರಾಜ್ಯ ಸರ್ಕಾರ ನೀಡಿದೆ ಎಂದಿದ್ದಾರೆ. ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಯೋಜನೆಯಡಿ, ವಿವಿಧ ಕಾಯಿಲೆಗಳಿಗೆ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನಿಂದ ಚಿಕಿತ್ಸಾ ವೆಚ್ಚ ಭರಿಸಲಾಗುತ್ತಿದೆ. ಆದರೆ ಕೆಲ ವಿರಳ ಕಾಯಿಲೆಗಳನ್ನು ಈ ಯೋಜನೆಯಡಿ ಸೇರಿಸಲಾಗಿಲ್ಲ. ಅಲ್ಲದೆ ಇಂತಹ ರೋಗಗಳಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸಾ ಸೌಲಭ್ಯ ಇರುವುದಿಲ್ಲ. ಅಂತಹ ಸಂದರ್ಭದಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಿ ಆ ವೆಚ್ಚವನ್ನು ಭರಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ, ಚಿಕಿತ್ಸೆಗಳು ಹಾಗೂ ವೆಚ್ಚದ ಪಟ್ಟಿಯನ್ನು ಸಿದ್ಧಪಡಿಸಿದ್ದ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಈ ಕುರಿತು ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು. ಈ ಪ್ರಸ್ತಾವನೆಗೆ ರಾಜ್ಯ ಸರ್ಕಾರ ಒಪ್ಪಿಗೆ ನೀಡಿ, ಆದೇಶ ಹೊರಡಿಸಿದೆ. ಇದರ ಜೊತೆಗೆ, ಹೆಚ್ಚು ವೆಚ್ಚ ತಗುಲುವ ಕಾಯಿಲೆಗಳ ಚಿಕಿತ್ಸಾ ವಿಧಾನ ಗುರುತಿಸಿ, ಅವುಗಳಿಗೂ ವೆಚ್ಚ ನಿಗದಿ ಮಾಡಲು ಕ್ರಮ ವಹಿಸಲಾಗಿದೆ. ಇದಕ್ಕಾಗಿ ಗಿರಿಜನ ಉಪಯೋಜನೆಯಡಿ 7.39 ಕೋಟಿ ರೂ., ಪರಿಶಿಷ್ಟ ಜಾತಿ ಉಪಯೋಜನೆಯಡಿ ▶ 9ನೇ ಪುಟಕ್ಕೆ

> “ ಪ್ರಧಾನಿ ನರೇಂದ್ರ ಮೋದಿಯವರು ಬಡ ಜನರ ಆರೋಗ್ಯ ರಕ್ಷಣೆಗಾಗಿ ಜಾರಿ ಮಾಡಿದ ಆಯುಷ್ಮಾನ್ ಯೋಜನೆಯನ್ನು ವಿಸ್ತರಿಸುವ ಕೆಲಸವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರ ನೇತೃತ್ವದ ರಾಜ್ಯ ಸರ್ಕಾರ ಮಾಡುತ್ತಿದೆ. ವಿರಳ ಕಾಯಿಲೆಗಳಿಗೂ ಚಿಕಿತ್ಸಾ ವೆಚ್ಚವನ್ನು ಭರಿಸುವ ಮಹತ್ವದ ಕ್ರಮವನ್ನು ಸರ್ಕಾರ ಕೈಗೊಂಡಿದೆ. ಜೊತೆಗೆ, ಹೆಚ್ಚು ವೆಚ್ಚ ತಗುಲುವ ಚಿಕಿತ್ಸೆಗಳಿಗೂ ದರ ನಿಗದಿ ಮಾಡಿ, ಆ ವೆಚ್ಚ ಭರಿಸುವ ಕ್ರಮ ವಹಿಸಲಾಗುತ್ತಿದೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಇದರಿಂದ ಬಹಳಷ್ಟು ಪ್ರಯೋಜನವಾಗಲಿದೆ.
>
> –ಡಾ. ಕೆ. ಸುಧಾಕರ್, ಆರೋಗ್ಯ ಸಚಿವ

ಬ್ರಿಟನ್ ರಾಣಿ 2ನೇ ಎಲಿಜಬೆತ್ ಇನ್ನಿಲ್ಲ




ಲಂಡನ್: ಬ್ರಿಟನ್‌ನ ರಾಣಿ 2ನೇ ಎಲಿಜಬೆತ್ (96) ಗುರುವಾರ ರಾತ್ರಿ ನಿಧನರಾದರು. ಬ್ರಿಟಿಷ್ ಇತಿಹಾಸದಲ್ಲಿಯೇ 70 ವರ್ಷಗಳ ಸುದೀರ್ಘ ಕಾಲ ರಾಣಿಯಾಗಿದ್ದ ಹಿರಿಮೆ ಇವರದು. ಬಂಕಿಂಗ್‌ಹ್ಯಾಮ್ ಅರಮನೆ ಈ ಬಗ್ಗೆ ಹೇಳಿಕೆ ಬಿಡುಗಡೆ ಮಾಡಿದೆ. ರಾಣಿಯ ಗೌರವಾರ್ಥ ಬ್ರಿಟನ್‌ನಲ್ಲಿ 10 ದಿನ ರಾಷ್ಟ್ರೀಯ ಶೋಕ ಘೋಷಿಸಲಾಗಿದೆ. ರಾಣಿಯ ನಿಧನದ ಸುದ್ದಿ ತಿಳಿಯುತ್ತಿದ್ದಂತೆ ಅವರ ದೀರ್ಘಾವಧಿಯ ಬದುಕು ಮತ್ತು ಆಡಳಿತ ಕುರಿತು ಸಂತಾಪದ ಮಾತುಗಳು ಹೊರ ಬರುತ್ತಿವೆ. ರಾಣಿಯ ಪಾರ್ಥಿವ ಶರೀರವನ್ನು ಬಾಲ್‌ಮೊರಲ್ ಎಸ್ಟೇಟ್‌ನಲ್ಲಿ ಇಡಲಿದ್ದು, ಶುಕ್ರವಾರ ಲಂಡನ್‌ಗೆ ಒಯ್ಯಲಾಗುವುದು ಎಂದು ಅರಮನೆಯ ಹೇಳಿಕೆ ತಿಳಿಸಿದೆ. ರಾಣಿಗೆ ನಾಲ್ವರು ಮಕ್ಕಳು. ಹಿರಿಯ ಮಗ, ವೇಲ್ಸ್‌ನ ರಾಜಕುಮಾರ, 73 ವರ್ಷದ ಚಾರ್ಲ್ಸ್ ಅವರು ತಕ್ಷಣದಿಂದಲೇ ಅನ್ವಯವಾಗುವಂತೆ ರಾಜನಾಗಿ ಕರ್ತವ್ಯ ನಿಭಾಯಿಸುವರು ಎಂದು ಪ್ರಕಟಿಸಲಾಗಿದೆ. ಗುರುವಾರ ಸಂಜೆ ರಾಣಿಯ ▶ 9ನೇ ಪುಟಕ್ಕೆ

ಬೆಂಗಳೂರು–ಮೈಸೂರು ಹೆದ್ದಾರಿ ಮುಳುಗಡೆ ಬಗ್ಗೆ ಪ್ರಧಾನಿ ಕಳವಳ

● ಅಧಿಕಾರಿಗಳ ಸಭೆಯಲ್ಲಿ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಪ್ರಸ್ತಾಪ ● ಬೆಂಗಳೂರಿನ ನೆರೆ ಬಗ್ಗೆಯೂ ಪ್ರಧಾನಿ ಆತಂಕದ ಬಗ್ಗೆ ವಿವರಣೆ

ಬೆಂಗಳೂರು, ಸೆ.8(ಕೆಎಂಶಿ)–ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ನಿರ್ಮಾಣದ ಲೋಪದ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರೇ ಕಳವಳ ವ್ಯಕ್ತಪಡಿಸಿದ್ದಾರಂತೆ.

ಈ ವಿಷಯವನ್ನು ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ನಗರದಲ್ಲಿ ನಡೆದ ಅಧಿಕಾರಿಗಳ ಉನ್ನತ ಮಟ್ಟದ ಸಭೆಯಲ್ಲಿ ರಸ್ತೆಯ ಬಗ್ಗೆ ಪ್ರಧಾನಿಯವರ ಆಸಕ್ತಿಯ ಮಾಹಿತಿ ನೀಡಿದ್ದಲ್ಲದೆ, ಅಲ್ಲಿಯೇ ಪಕ್ಕದಲ್ಲಿದ್ದ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ, ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡಿದ್ದಾರೆ. ಅಲ್ಲದೆ ತಕ್ಷಣವೇ ಎಂತಹ ಮಳೆ ಮತ್ತು ನೆರೆ ಬಂದರೂ ಸಾರ್ವಜನಿಕರಿಗೆ ತೊಂದರೆಯಾಗದಂತೆ ನೀರು ಸರಾಗವಾಗಿ ಹರಿದು ಹೋಗುವಂತೆ ರಸ್ತೆ ಪುನರ್ ವಿನ್ಯಾಸ ಮಾಡಿ, ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಿ ಎಂದು ಅಧಿಕಾರಿಗಳಿಗೆ ಕೇಂದ್ರ ಸಚಿವರು ಆದೇಶಿಸಿದ್ದಾರೆ. ಪ್ರಧಾನಿಯವರೇ ಖುದ್ದು ನನ್ನ ಬಳಿ ರಸ್ತೆ ಬಗ್ಗೆ ಮಾಹಿತಿ ಪಡೆದಿದ್ದಾರೆ ಎಂದರೆ, ರಾಷ್ಟ್ರ



ಮಟ್ಟದಲ್ಲಿ ಇದು ಯಾವ ರೀತಿ ನಮ್ಮನ್ನು ಮುಜುಗರಕ್ಕೆ ಸಿಲುಕಿಸಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಿ ಎಂದು ಅಧಿಕಾರಿಗಳಿಗೆ ಕಿವಿಮಾತು ಹೇಳಿದ್ದಲ್ಲದೆ, ಯಾವುದೇ ರಾಷ್ಟ್ರೀಯ ಹೆದ್ದಾರಿ ನಿರ್ಮಾಣವಾಗುವ ಸಂದರ್ಭದಲ್ಲೂ ಇಂತಹ ಲೋಪವಾಗದಂತೆ ನೋಡಿಕೊಳ್ಳಬೇಕು. ರಸ್ತೆಯ ಬಗ್ಗೆ ಮುಖ್ಯಮಂತ್ರಿಯವರಿಂದ ಮಾಹಿತಿ ಪಡೆದ ಗಡ್ಕರಿ ಅವರು, ನೀರು ಸರಾಗವಾಗಿ ಹರಿದು ಹೋಗುವಂತೆ ಮಾಡಲು ಅಗತ್ಯವಾದ ಭೂ ಸ್ವಾಧೀನ ಮಾಡಿಕೊಳ್ಳಿ, ಸಾರ್ವಜನಿಕರಿಗೆ ತೊಂದರೆಯಾಗದಂತೆ ಮತ್ತೆ ಹೊಸದಾಗಿ ಪುನರ್ ವಿನ್ಯಾಸ ಮಾಡಿ ಎಂದು ಸೂಚಿಸಿದ್ದಾರೆ.

ಈ ರಸ್ತೆಯನ್ನು ದಸರಾಗೆ ರಾಷ್ಟ್ರಕ್ಕೆ ಸಮರ್ಪಣೆ ಮಾಡುವುದಾಗಿ ನಾನು ಮಾತು ಕೊಟ್ಟಿದ್ದೆ, ಆದರೆ ವಿಳಂಬವಾಗುತ್ತಿರುವುದು ಏತಕ್ಕೆ ಎಂದು ಅಧಿಕಾರಿಗಳ ತರಾಟೆಗೆ ತೆಗೆದುಕೊಂಡಿದ್ದಾರೆ.

ಮೈಸೂರು ದಸರಾ ವೇಳೆಗೆ ಗೊಂದಲಗಳನ್ನು ಪರಿಹರಿಸಿ, ರಸ್ತೆಯ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಿ ಎಂದು ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಮುಂದುವರೆದು ಮಾತನಾಡಿದ ಅವರು, ಕರ್ನಾಟಕದಲ್ಲಿ ಬಿದ್ದ ಭಾರೀ ಮಳೆ ಅದರಲ್ಲೂ ಬೆಂಗಳೂರು ನಗರದ ಕೆಲವು ಭಾಗ ಮತ್ತು ಹೆದ್ದಾರಿ ನಿರ್ಮಾಣದಲ್ಲಾಗಿರುವ ಲೋಪದ ಬಗ್ಗೆ ಇಡೀ ರಾಷ್ಟ್ರದಲ್ಲಿ ಚರ್ಚೆಗೆ ಗ್ರಾಸವಾಗಿ, ನಮ್ಮನ್ನು ಮುಜುಗರಕ್ಕೆ ಸಿಲುಕಿಸಿದೆ ▶ 9ನೇ ಪುಟಕ್ಕೆ

ರಾಹುಲ್ ಗಾಂಧಿ ನೇತೃತ್ವದಲ್ಲಿ 'ಭಾರತ್ ಜೋಡೋ ಯಾತ್ರೆ' ಆರಂಭ




5 ತಿಂಗಳ ಕಾಲ 12 ರಾಜ್ಯಗಳ ಮೂಲಕ 3570 ಕಿಲೋ ಮೀಟರ್ ಬೃಹತ್ ಯಾತ್ರೆ

ಕನ್ಯಾಕುಮಾರಿ, ಸೆ.8– ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಪಕ್ಷದ ಹಲವಾರು ನಾಯಕರೊಂದಿಗೆ ಗುರುವಾರ ಕನ್ಯಾಕುಮಾರಿಯಿಂದ 'ಭಾರತ್ ಜೋಡೋ ಯಾತ್ರೆ' ಆರಂಭಿಸಿದರು. ಇದರ ಮೂಲಕ ಜನರನ್ನು ತಲುಪಲು ಮತ್ತು ಸಂಘಟನೆಯನ್ನು ಪುನಶ್ಚೇತನಗೊಳಿಸಲು ಪಕ್ಷವು ಪ್ರಯತ್ನಿಸುತ್ತಿದೆ. ಪಾದಯಾತ್ರೆಯ ಆರಂಭದ ಮೊದಲು, ಭಾರತ್ ಯಾತ್ರಿಗಳ ಶಿಬಿರದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ರಾಷ್ಟ್ರಧ್ವಜಾರೋಹಣ ಮಾಡಿದರು. ಕನ್ಯಾಕುಮಾರಿಯಿಂದ ಕಾಶ್ಮೀರದ ವರೆಗೆ 3,570 ಕಿಮೀ ರಾಹುಲ್ ಗಾಂಧಿ ನಡೆಯಲಿದ್ದಾರೆ. 118 'ಭಾರತ ಯಾತ್ರಿಗಳು' ಮತ್ತು ದೇಶದಾದ್ಯಂತದ ಪಕ್ಷದ ಇತರ ನಾಯಕರೊಂದಿಗೆ ಗಾಂಧಿಯವರು ಕನ್ಯಾಕುಮಾರಿಯ ಅಗಸ್ತೇಶ್ವರಂನಿಂದ ಪಾದಯಾತ್ರೆಯನ್ನು ▶ 9ನೇ ಪುಟಕ್ಕೆ

ಸಫಾರಿ ವಾಹನದ ಮೇಲೆರಗಿದ ಒಂಟಿ ಸಲಗ: ಸ್ವಲ್ಪದರಲ್ಲಿ ಪ್ರವಾಸಿಗರು ಪಾರು

ಹೆಚ್.ಡಿ.ಕೋಟೆ, ಸೆ.8–ಒಂಟಿ ಸಲಗವೊಂದು ಸಫಾರಿ ವಾಹನದ ಮೇಲೆರಗಿ ಅದನ್ನು ಹಿಮ್ಮೆಟ್ಟಿಸಿದ ಅತ್ಯಂತ ಆತಂಕಕಾರಿ ಘಟನೆ ತಾಲೂಕಿನ ದಮ್ಮನಕಟ್ಟೆ ಸಫಾರಿ ಕೇಂದ್ರದಲ್ಲಿ ಸಂಭವಿಸಿದೆ.

ಈ ಅನಿರೀಕ್ಷಿತ ಘಟನೆಯಿಂದ ಪ್ರವಾಸಿಗರು ಕೆಲಕಾಲ ಆತಂಕಗೊಂಡಿದ್ದರು. ಚಾಲಕನ ಸಮಯ ಪ್ರಜ್ಞೆಯಿಂದ ಭಾರೀ ಅನಾಹುತವೊಂದು ತಪ್ಪಿದೆ. ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಬರುವ ದಮ್ಮನಕಟ್ಟೆಯಲ್ಲಿ ಪ್ರತಿನಿತ್ಯ ಸಫಾರಿಗೆ ಭಾರೀ ಬೇಡಿಕೆಯಿದ್ದು, ವನ್ಯಜೀವಿ ಪ್ರಿಯ ಪ್ರವಾಸಿಗರು ಇಲ್ಲಿಗೆ ಬಂದು ಸಫಾರಿ ವಾಹನದಲ್ಲಿ ಹುಲಿ, ಆನೆ ಸೇರಿದಂತೆ ಕಾಡುಪ್ರಾಣಿಗಳನ್ನು ಸಮೀಪದಿಂದ ಕಣ್ತುಂಬಿಕೊಳ್ಳುವುದರೊಂದಿಗೆ ತಮ್ಮ ಮೊಬೈಲ್ ಮತ್ತು ಕ್ಯಾಮರಾದಲ್ಲಿ ಅವುಗಳನ್ನು ಸೆರೆ ಹಿಡಿದು, ಸಂಭ್ರಮಿಸುತ್ತಾರೆ. ಇಂದು ಸಹ ಪ್ರವಾಸಿಗರು ಜೀಪಿನಲ್ಲಿ ಸಫಾರಿಗೆ ತೆರಳಿ ಅರಣ್ಯ ಪ್ರದೇಶದ ಸೌಂದರ್ಯ ಮತ್ತು ಕಾಡು ಪ್ರಾಣಿಗಳ ನೋಡುತ್ತಾ ಸಂಭ್ರಮಿಸುತ್ತಿದ್ದರು. ಈ ವೇಳೆ ಒಂಟಿ ಸಲಗವೊಂದು ದಿಢೀರ್ ಜೀಪಿಗೆ ಎದುರು ಬಂದು ನಿಂತಿತು. ಅಪಾಯದ ಸೂಚನೆ ಅರಿತ ಚಾಲಕ ಜೀಪನ್ನು ಹಿಮ್ಮುಖವಾಗಿ ಚಾಲಿಸಲು ಆರಂಭಿಸಿದ. ಆಗ ಸಲಗ ಅಟ್ಟಿಸಿಕೊಂಡು ಬಂತು. ಈ ಸಂದರ್ಭದಲ್ಲಿ ▶ 9ನೇ ಪುಟಕ್ಕೆ



ಮೈಸೂರಲ್ಲೀಗ ಸರಗಳ್ಳರಿಗೆ ಸುಗ್ಗಿ ಕಾಲ!

ಬುಧವಾರ ರಾತ್ರಿ ನಾಲ್ಕು ಕಡೆ ಖದೀಮರ ಕೈಚಳಕ



- ಸಂಜೆ 7 ಗಂಟೆಗೆ ಆರ್.ಎಸ್.ನಾಯ್ಡು ನಗರ
- ರಾತ್ರಿ 8.30ಕ್ಕೆ ವಿಜಯನಗರ ವಾಟರ್ ಟ್ಯಾಂಕ್
- ರಾತ್ರಿ 9ಕ್ಕೆ ವಿ.ವಿ.ಮೊಹಲ್ಲಾ 8ನೇ ಕ್ರಾಸ್
- ರಾತ್ರಿ 9.30 ಗಂಟೆಗೆ ಸರಸ್ವತಿಪುರಂನಲ್ಲಿ

ಸರಗಳ್ಳರ ಕರಾಮತ್ತು

ಮೈಸೂರು, ಸೆ.8(ಆರ್‌ಕೆ)– ದಸರಾ ಉದ್ಘಾಟನೆಗೆ ಇನ್ನು ಕೇವಲ 18 ದಿನಗಳಿವೆ. ಇಂತಹ ಮೆಗಾ ಕಾರ್ಯಕ್ರಮಕ್ಕೆ ಮುನ್ನವೇ ಮೈಸೂರಲ್ಲಿ ಖದೀಮರು ಮಹಿಳೆಯರಲ್ಲಿ ಆಘಾತ ಉಂಟು ಮಾಡಿದ್ದಾರೆ. ಮೈಸೂರಿನ ಹಲವೆಡೆ ಮಹಿಳೆಯರ ಚಿನ್ನದ ಸರ ಕಳವು ಮಾಡುವ ಮೂಲಕ ದಸರಾ ವೇಳೆ ಇನ್ನೇನೋ ಎಂಬ ಆತಂಕಕ್ಕೆ ಕಾರಣರಾಗಿದ್ದಾರೆ.

ಜರ್ಕಿನ್ ಧರಿಸಿ ಬೈಕಿನಲ್ಲಿ ಕಾರ್ಯಾಚರಣೆ ನಡೆಸಿರುವ ಯುವಕರಿಬ್ಬರು, ಮೈಸೂರಿನ ಮೂರು ಕಡೆ ಸರ ಅಪಹರಿಸಿದ್ದರೆ, ಒಂದೆಡೆ ಯತ್ನ ನಡೆಸಿದ್ದಾರೆ. ಪ್ರತಿಷ್ಠಿತ ಬಡಾವಣೆಗಳ ಜನಸಂದಣಿ ಇರುವ ಸ್ಥಳಗಳಲ್ಲೇ ಖದೀಮರು ಕೈಚಳಕ ತೋರಿಸಿದ್ದು, ದಸರಾ ಸಮೀಪಿಸುತ್ತಿರುವಂತೆಯೇ ಸರಣಿ ಸರಗಳವು ನಡೆದಿದೆ. ಮೈಸೂರಿನ ಆರ್.ಎಸ್.ನಾಯ್ಡು ನಗರ ಮುಖ್ಯ ರಸ್ತೆ, ವಿಜಯನಗರ 2ನೇ ಹಂತದ ವಾಟರ್ ಟ್ಯಾಂಕ್, ವಿ.ವಿ.ಮೊಹಲ್ಲಾದ 8ನೇ ಕ್ರಾಸ್ ಹಾಗೂ ಸರಸ್ವತಿಪುರಂ 2ನೇ ಮೇನ್ ಬಳಿ ನಡೆದುಕೊಂಡು ಹೋಗುತ್ತಿದ್ದ ಮಹಿಳೆಯರ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದಾರೆ.

ಆರ್.ಎಸ್.ನಾಯ್ಡು ನಗರ: ನಿನ್ನೆ ರಾತ್ರಿ 7 ಗಂಟೆಯಲ್ಲಿ ಎನ್.ಆರ್.ಠಾಣಾ ಸರಹದ್ದಿನ ಆರ್.ಎಸ್.ನಾಯ್ಡು ನಗರ ಮುಖ್ಯ ರಸ್ತೆಯ ಬಸ್ ನಿಲ್ದಾಣದ ಬಳಿ ಗೋಬಿ ತಿನ್ನುತ್ತಿದ್ದ 72 ವರ್ಷದ ಗಿರಿಜಮ್ಮ ಎಂಬುವರ ಬಳಿಯೇ ತಾವೂ ಪಾನಿಪೂರಿ ತಿನ್ನುತ್ತಿದ್ದ ಯುವಕರು ಹಠಾತ್ತನೆ ಅವರ ಕತ್ತಿಗೆ ಕೈಹಾಕಿ 30 ಗ್ರಾಂ ಚಿನ್ನದ ಸರ ಕಿತ್ತುಕೊಂಡು ಸ್ಕೂಟರ್‌ನಲ್ಲಿ ಪರಾರಿಯಾಗಿದ್ದಾರೆ. ಗೋಬಿ ಮಾರಾಟಗಾರ ಚಾಟ್ಸ್ ತಯಾರಿಸುವಲ್ಲಿ ಮಗ್ನನಾಗಿದ್ದ, ಇತರ ಗ್ರಾಹಕರ್ಯಾರೂ ಇಲ್ಲದ ಸಮಯ ನೋಡಿಕೊಂಡು ಖದೀಮರು ಕೈಚಳಕ ತೋರಿದ್ದಾರೆ. ಗಿರಿಜಮ್ಮ ಅವರು ಜೋರಾಗಿ ಕಿರುಚಿಕೊಂಡರಾದರೂ, ಜನರು ಸುತ್ತುವರಿಯುವಷ್ಟರಲ್ಲಿ ಯುವಕರು ಕತ್ತಲಲ್ಲಿ ಮಾಯವಾದರು. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಎನ್.ಆರ್. ಠಾಣೆ ಇನ್ಸ್‌ಪೆಕ್ಟರ್ ಅಜರುದ್ದೀನ್, ಸಬ್ ಇನ್ಸ್‌ಪೆಕ್ಟರ್ ಜಯಕೀರ್ತಿ ಹಾಗೂ ಸಿಬ್ಬಂದಿ, ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ವಿಜಯನಗರ ವಾಟರ್ ಟ್ಯಾಂಕ್: ರಾತ್ರಿ 8.30 ಗಂಟೆಯಲ್ಲಿ ವಿಜಯನಗರ 2ನೇ ಹಂತದ ವಾಟರ್ ಟ್ಯಾಂಕ್ ಬಳಿಯ ರಿಲಯನ್ಸ್ ಫ್ರೆಶ್ ಹಿಂಭಾಗದ ರಸ್ತೆಯಲ್ಲಿ ಎರಡನೇ ಕೃತ್ಯ ನಡೆದಿದೆ. ಬೈಕಿನಲ್ಲಿ ಬಂದ ಯುವಕರಿಬ್ಬರು ಅಂಗಡಿಯಿಂದ ಮನೆಗೆ ಹಿಂದಿರುಗುತ್ತಿದ್ದ 64 ವರ್ಷದ ವನಮಾಲ ಅವರ ಬಳಿ ಚಿನ್ನದ ಸರ ಕಿತ್ತುಕೊಳ್ಳಲು ಯತ್ನಿಸಿದ್ದಾರೆ. ಎಚ್ಚರಗೊಂಡ ಮಹಿಳೆ, ಸರವನ್ನು ಗಟ್ಟಿಯಾಗಿ ಹಿಡಿದುಕೊಂಡ ಕಾರಣ ದುಷ್ಕರ್ಮಿಗಳಿಗೆ ಚಿನ್ನದ ಸರ ದಕ್ಕಲಿಲ್ಲ. ವಿಷಯ ತಿಳಿಯುತ್ತಿದ್ದಂತೆಯೇ ಸಾರ್ವಜನಿಕರು ಜಮಾಯಿಸಿದರಾದರೂ, ಅಷ್ಟರಲ್ಲಿ ಬೈಕ್ ಸವಾರರು ಮಹದೇಶ್ವರ ಬಡಾವಣೆಯ ಚಿಕ್ಕ ರಸ್ತೆಗಳ ಮೂಲಕ ಪರಾರಿಯಾಗಿದ್ದಾರೆ. ಮಾಹಿತಿ ತಿಳಿದು ಸ್ಥಳಕ್ಕೆ ಧಾವಿಸಿದ ವಿಜಯನಗರ ಠಾಣೆ ಇನ್ಸ್‌ಪೆಕ್ಟರ್ ರವಿಶಂಕರ್ ಹಾಗೂ ಸಿಬ್ಬಂದಿ, ಘಟನೆ ಕುರಿತಂತೆ ವನಮಾಲರಿಂದ ಮಾಹಿತಿ ಕಲೆ ಹಾಕಿದರು.

ವಿವಿ ಮೊಹಲ್ಲಾ: ರಾತ್ರಿ 9 ಗಂಟೆ ವೇಳೆಗೆ ಮೈಸೂರಿನ ವಿವಿ ಮೊಹಲ್ಲಾದ 8ನೇ ಕ್ರಾಸ್‌ನಲ್ಲಿ, ಮನೆ ಬಳಿ ವಾಕ್ ಮಾಡುತ್ತಿದ್ದ ಅಮರನಾಥ್ ಅವರ ಪತ್ನಿ ಸುಜಾತ ಅವರ ಕೊರಳಿಂದ 20 ಗ್ರಾಂನ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದಾರೆ. ಸಮೀಪದಲ್ಲೇ ಗಣಪತಿ ಪ್ರತಿಷ್ಠಾಪಿಸಿದ್ದು, ಅಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯುತ್ತಿದ್ದು, ಬಹಳಷ್ಟು ಜನ ಸೇರಿದ್ದರು. ಸರಗಳ್ಳರಿಗೆ ಇದು ಲೆಕ್ಕವೇ ಇಲ್ಲ ಎಂಬಂತೆ ಕೃತ್ಯ ನಡೆದಿದೆ. ವಿವಿ ಪುರಂ ಠಾಣೆ ಪ್ರಭಾರ ಇನ್ಸ್‌ಪೆಕ್ಟರ್ ಜಯಕುಮಾರ್ ಹಾಗೂ ಸಿಬ್ಬಂದಿ ತಕ್ಷಣ ಕೃತ್ಯ ನಡೆದ ಸ್ಥಳಕ್ಕೆ ಧಾವಿಸಿದರೂ ಸರಗಳ್ಳರು ಪರಾರಿಯಾಗಿದ್ದರು.

ಸರಸ್ವತಿಪುರಂ: ನಾಲ್ಕನೇ ಕೃತ್ಯ ರಾತ್ರಿ 9.30ರಲ್ಲಿ ಸರಸ್ವತಿಪುರಂ 2ನೇ ಮೇನ್ ಬಳಿಯ ದೊಡ್ಡ ಮೋರಿ ಪಕ್ಕದಲ್ಲಿ ನಡೆದಿದ್ದು, ಎಸ್. ಮಾಲತಿ ಎಂಬುವರ ಕೊರಳಿಂದ 30 ಗ್ರಾಂನ ಚಿನ್ನದ ಸರ ಎಗರಿಸಿದ್ದಾರೆ. ಮೂರು ಕಡೆಗಳಲ್ಲಿ ಬೈಕ್ ಬಳಸಿರುವ ಖದೀಮರು ಒಂದೆಡೆ ಮಾತ್ರ ಸ್ಕೂಟರ್‌ನಲ್ಲಿ ಬಂದು ಕೃತ್ಯ ಎಸಗಿದ್ದಾರೆ. ಸರಸ್ವತಿಪುರಂ ಠಾಣೆ ಇನ್ಸ್‌ಪೆಕ್ಟರ್ ರವೀಂದ್ರ ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸುತ್ತಿದ್ದಾರೆ. ಮೊದಲ ಕೃತ್ಯ ಆರ್.ಎಸ್. ನಾಯ್ಡು ನಗರದಲ್ಲಿ ನಡೆದಾಗಲೇ ಮೈಸೂರು ನಗರದಾದ್ಯಂತ ಎಲ್ಲಾ ಠಾಣೆಗಳ ಪೊಲೀಸರು ಎಚ್ಚೆತ್ತು ರಸ್ತೆಗಿಳಿದರೂ, ನಂತರ ಮೂರು ಕಡೆ ಬೈಕ್ ಸವಾರರು ದುಷ್ಕೃತ್ಯವೆಸಗಿದ್ದಾರೆ. ಸಿಸಿ ಕ್ಯಾಮರಾ ಫುಟೇಜ್‌ಗಳನ್ನು ಪಡೆದಿರುವ ಪೊಲೀಸರು, ಆರೋಪಿಗಳ ಪತ್ತೆಗೆ ಶೋಧ ನಡೆಸುತ್ತಿದ್ದಾರೆ.



ನಕ್ಕರೆ ಅದೇ ಸ್ವರ್ಗ

ತಂದೆ : "ಅದೇನೋ ನೋಡ್ತಿರೋದು?"
ಮಗ : "ಫೇಸ್‌ಬುಕ್ ನೋಡ್ತಾ ಇದ್ದೀನಿ"
ತಂದೆ : "ನೀನು ಹೀಗೆ ದಿನವಿಡೀ ಫೇಸ್‌ಬುಕ್‌ನಲ್ಲೇ ಇದ್ರೆ ನಾಡಿದ್ದು, ನಿನ್ನ ಪಾಸ್‌ಬುಕ್‌ನಲ್ಲಿ ಏನೂ ಇರೋದಿಲ್ಲ ತಿಳ್ಕೋ!"

ಮೈಸೂರು ಮಿತ್ರ

ಶುಕ್ರವಾರ, 9 ಸೆಪ್ಟೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಭಾಷೆಯು ವಿಚಾರಗಳನ್ನು ಬಹಿರಂಗಗೊಳಿಸುವ ಶ್ರೇಷ್ಠ ಸಾಧನ –ಡೆವ್ಹಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಗೊಂಬೆಗೆ ಕೈ ಮುಗಿದರೂ ನಂಬಿಕೆ ಇರಬೇಕು

ನಿಮ್ಮ ಪತ್ರಗಳು

ಮೇಯರ್ ಆಯ್ಕೆಯಲ್ಲಿ ಗೊಂದಲ

ಮಾನ್ಯರೆ,

ಮೈಸೂರು ಮಹಾನಗರಪಾಲಿಕೆಯ 24ನೇ ಮೇಯರ್ ಆಗಿ ಭಾರತೀಯ ಜನತಾ ಪಕ್ಷದ ಶಿವಕುಮಾರ್ ಹಾಗೂ ಉಪ ಮೇಯರ್ ಆಗಿ ಅದೇ ಪಕ್ಷದ ಡಾ.ಜಿ.ರೂಪಾ ಅವರು ಆಯ್ಕೆಯಾಗಿದ್ದಾರೆ. ಅವರಿಗೆ ಅಭಿನಂದನೆಗಳು.

ಸಾಮಾನ್ಯವಾಗಿ ಕಳೆದ ಹಲವಾರು ವರ್ಷಗಳಿಂದ ಮೇಯರ್ ಹಾಗೂ ಉಪ ಮೇಯರ್ ಚುನಾವಣೆಗಳಲ್ಲಿ ಕಡೆಯ ಹಂತದವರೆಗೂ, ಗೊಂದಲ ಹಾಗೂ ಅನಿಶ್ಚಿತತೆ ಕಾಡುತ್ತಿರುವುದನ್ನು ಮೈಸೂರಿನ ಪ್ರಜ್ಞಾವಂತ ನಾಗರಿಕರು ಗಮನಿಸುತ್ತಲೇ ಬಂದಿದ್ದಾರೆ. ಅಷ್ಟೇ ಏಕೆ ಇದೊಂದು ಪ್ರಹಸನದ ಸ್ವರೂಪ ಪಡೆದುಕೊಂಡಿದೆ.

ರಾಜ್ಯದ ಮೂರು ಪ್ರಮುಖ ರಾಜಕೀಯ ಪಕ್ಷಗಳಾದ ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಈ ಪ್ರಹಸನದ ಕೇಂದ್ರ ಬಿಂದುಗಳು. ಸುಮಾರು 15 ವರ್ಷಗಳ ಹಿಂದೆ ಮೇಯರ್ ಚುನಾವಣೆ ಇಷ್ಟೊಂದು ಗೊಂದಲಮಯವಾಗಿರಲಿಲ್ಲ. ಎಲ್ಲವೂ ಪೂರ್ವ ನಿರ್ಧಾರಗಳಂತೆ ನಡೆಯುತ್ತಿದ್ದವು. ಆದರೆ ಇತ್ತೀಚಿನ ವರ್ಷಗಳಲ್ಲಿ ಮಾತ್ರ ಈ ಗೊಂದಲ ಹೆಚ್ಚಾಗುತ್ತಲೇ ಬಂದಿದೆ. ಏಕೆಂದರೆ ನಗರ ಪಾಲಿಕೆಯಲ್ಲಿ ಯಾವ ಪಕ್ಷಕ್ಕೂ ಬಹುಮತ ಬರದೇ ಹೋಗುತ್ತಿರುವುದರಿಂದ, ಯಾವುದೇ ರಾಜಕೀಯ ಪಕ್ಷ ತನ್ನ ಸ್ವಂತ ಬಲದಿಂದ ಮೇಯರ್ ಹುದ್ದೆಯನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಈ ಬಾರಿ, ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್ ಸ್ವತಂತ್ರವಾಗಿಯೇ ಮೇಯರ್ ಹುದ್ದೆಗೆ ಸ್ಪರ್ಧಿಸುವುದಾಗಿ ಹೇಳಿಕೊಂಡು ಬಂದಿದ್ದರೂ ಕಡೆಯ ಕ್ಷಣದಲ್ಲಿ ಬಿಜೆಪಿ ಮತ್ತು ಜೆಡಿಎಸ್ ತಮ್ಮ ನಿಜವಾದ ರಾಜಕೀಯ ದಾಳ ಉರುಳಿಸಿದವು. ವಾಸ್ತವವಾಗಿ ಜೆಡಿಎಸ್‌ಗೆ ಉಪ ಮೇಯರ್ ಸ್ಥಾನ ಸಿಕ್ಕಬೇಕಿದ್ದರೂ ಸಹ, ತಾಂತ್ರಿಕ ಕಾರಣದಿಂದ ಜೆಡಿಎಸ್ ಅಭ್ಯರ್ಥಿ ರೇಷ್ಮಾಬಾನು ಅವರ ನಾಮಪತ್ರ ತಿರಸ್ಕೃತಗೊಂಡಿತು. ಬಿಜೆಪಿ ಪರ ಕೈ ಎತ್ತಿದ್ದ ಜೆಡಿಎಸ್ ಕಡೆಗೆ ಇಂಗು ತಿಂದ ಮಂಗನಾಗಬೇಕಾಯಿತು. ಮತ್ತೊಂದು ಕಡೆ, ಹೆಚ್ಚಿನ ಸಂಖ್ಯೆಯ ಸದಸ್ಯರನ್ನು ಹೊಂದಿದ್ದ ಕಾಂಗ್ರೆಸ್ ಮೂಕ ಪ್ರೇಕ್ಷಕನಾಗಬೇಕಾಯಿತು. ಮೇಯರ್ ಹಾಗೂ ಉಪ ಮೇಯರ್ ಹುದ್ದೆ ಒಂದೇ ಪಕ್ಷಕ್ಕೆ ದೊರಕಿರುವುದು ಇತ್ತೀಚಿನ ವರ್ಷಗಳಲ್ಲಿ ವಿರಳವೆಂದು ಹೇಳಬಹುದು. ಅದೇನೆ ಇರಲಿ, ಗೆದ್ದ ಅಭ್ಯರ್ಥಿಗಳು ಮೈಸೂರಿನ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಲಿ ಎಂಬುದು ಮೈಸೂರಿನ ನಾಗರೀಕರ ಕಳಕಳಿ.

ಅಂದ ಹಾಗೆ ಈ ಮೇಯರ್ ಹುದ್ದೆ, ಕೇವಲ ಅಲಂಕಾರಿಕ ಹುದ್ದೆಯಾಗಿದೆ. ಆಡಳಿತದ ಎಲ್ಲಾ ಪ್ರಮುಖ ನಿರ್ಧಾರಗಳನ್ನು ನಗರ ಪಾಲಿಕೆಯ ಆಯುಕ್ತರು ತೆಗೆದುಕೊಳ್ಳುತ್ತಾರೆ. ಆದರೂ ಅನುದಾನ ಹಂಚಿಕೆ ಮತ್ತು ಬಿಡುಗಡೆ ಸೇರಿದಂತೆ ಮೇಯರ್ ಅವರಿಗೂ ಕೆಲವು ಸೀಮಿತವಾದ ಅಧಿಕಾರಗಳಿವೆ. ಮೇಯರ್ ಅವರ ಸ್ಥಾನ ಪೂಜನೀಯ. ಆದ್ದರಿಂದಲೇ ಅವರನ್ನು ಪೂಜ್ಯ ಮೇಯರ್ ಎಂದು ಸಂಭೋದಿಸಲಾಗುತ್ತದೆ. ಅವರು ನಗರದ ಪ್ರಥಮ ಪ್ರಜೆ ಕೂಡ ಹೌದು. ಆದರೆ ದಸರಾ ಸೇರಿದಂತೆ ಹಲವಾರು ಪ್ರಮುಖ ಸಮಾರಂಭಗಳಲ್ಲಿ ಅವರನ್ನು ಸಭೆಗಳಿಗೆ ಆಹ್ವಾನಿಸದೇ ಇರುವುದು, ಆಹ್ವಾನಿಸಿದರೂ ಸೂಕ್ತ ಆಸನ ನೀಡದೆ ಅವಮಾನ ಮಾಡಲಾಗುತ್ತಿರುವ ಹಲವಾರು ಪ್ರಸಂಗಗಳು ನಡೆದಿವೆ. ಅನೇಕ ಹಿಂದಿನ ಮೇಯರ್‌ಗಳು ಈ ಬಗ್ಗೆ ತಮ್ಮ ಆಕ್ರೋಶವನ್ನು ಬಹಿರಂಗವಾಗಿಯೇ ತೋಡಿಕೊಂಡಿದ್ದಾರೆ. ಇನ್ನು ಮುಂದಾದರೂ ಹೀಗಾಗದಿರಲಿ.

–ಡಾ.ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

ಹೂಟಗಳ್ಳಿ ಪಾರ್ಕಿನಲ್ಲಿ ಅವ್ಯವಸ್ಥೆ



ಮಾನ್ಯರೆ,

ಮಕ್ಕಳಿಗೆ ತುಂಬಾ ಇಷ್ಟವಾದ ವಿಷಯವೆಂದರೆ ಅದು ಆಟ. ಆದರೆ ಹೂಟಗಳ್ಳಿಯ ಕೆಹೆಚ್‌ಬಿ ಕಾಲೋನಿಯಲ್ಲಿರುವ ಉದ್ಯಾನವನವನ್ನು ನೋಡಿದರೆ ಪೋಷಕರು ಮಕ್ಕಳನ್ನು ಅಲ್ಲಿ ಆಟವಾಡಲು ಬಿಡುವುದಿಲ್ಲ. ಏಕೆಂದರೆ ಉದ್ಯಾನವನದ ಒಳಗೆ ಹುಲ್ಲು ಬೆಳೆದು ನಿಂತಿದೆ. ಆಟಿಕೆಗಳ ಜಾಗದಲ್ಲಿ ಗುಂಡಿಗಳು. ಅವು ಮಳೆ ನೀರಿನಿಂದ ತುಂಬಿಕೊಂಡಿವೆ. ಸೊಳ್ಳೆಗಳು ತಮ್ಮ ಸಂತಾನೋತ್ಪತ್ತಿ ಸ್ಥಳವನ್ನಾಗಿ ಮಾಡಿಕೊಂಡಿವೆ. ಆದ್ದರಿಂದ ಸಂಬಂಧಿಸಿದ ಅಧಿಕಾರಿಗಳು ಈ ಉದ್ಯಾನವನದ ಕಡೆಗೆ ಗಮನ ಹರಿಸಬೇಕೆಂದು ಕೇಳಿಕೊಳ್ಳುತೇನೆ.

–ಎಸ್.ವೈ.ರಂಜಿತಾ, ಮೈಸೂರು.

ಕಂದಾಯ ಬಡಾವಣೆಯಲ್ಲಿ ಬೀದಿ ದೀಪದ ಸಮಸ್ಯೆ

ಮಾನ್ಯರೆ,

ಮೈಸೂರಿನ ಕಂದಾಯನಗರ 3ನೇ ಹಂತ ಬಡಾವಣೆಯಲ್ಲಿ ಸುಮಾರು ಒಂದು ತಿಂಗಳಿಂದ ಬೀದಿ ದೀಪಗಳು ಉರಿಯುತ್ತಿಲ್ಲ. ಲಿಂಗಾಬುಧಿ ಕೆರೆ ಪಶ್ಚಿಮದಲ್ಲಿದ್ದು, ವಿಷ ಜಂತುಗಳು ಹಾಗೂ ವನ್ಯಪ್ರಾಣಿಗಳ ಹಾವಳಿ ಇದೆ. ನಗರದಿಂದ ರಾತ್ರಿ ಹೊತ್ತು ಮನೆಗೆ ಹಿಂದಿರುಗುವಾಗ ಹಿರಿಯ ನಾಗರಿಕರು ಆದ ನಮಗೆ ಹಾವು, ಚೇಳುಗಳ ಕಾಟ ಇದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಬೀದಿ ದೀಪಗಳನ್ನು ಅಳವಡಿಸುವ ಮೂಲಕ ಅನುಕೂಲ ಮಾಡಿಕೊಡಬೇಕೆಂದು ಮನವಿ.

–ಎನ್. ವೆಂಕಟಾಚಲಪ್ಪ, ಮೈಸೂರು.

ಎಸಿಬಿ ರದ್ದುಗೊಳಿಸಿ ಲೋಕಾಯುಕ್ತಕ್ಕೆ ವರ್ಗಾವಣೆ ಪ್ರಶಂಸನೀಯ

ಮಾನ್ಯರೆ,

'ಆಟಕ್ಕುಂಟು, ಲೆಕ್ಕಕ್ಕಿಲ್ಲ' ಎಂಬ ಮಕ್ಕಳ ಆಟದಲ್ಲಿನ ರೀತಿ, ಹಲ್ಲು ಕಿತ್ತ ಹಾವಿನಂತಿದ್ದ 'ಭ್ರಷ್ಟಾಚಾರ ನಿಗ್ರಹ ದಳ'ವನ್ನು (ಎಸಿಬಿ) ಕರ್ನಾಟಕ ಉಚ್ಚ ನ್ಯಾಯಾಲಯ ರದ್ದುಗೊಳಿಸಿ, ಲೋಕಾಯುಕ್ತಕ್ಕೆ ವರ್ಗಾಯಿಸಿದ್ದು ಪ್ರಶಂಸನೀಯ. ಈ ಎಸಿಬಿಯನ್ನು ಮೋಟಾರು ವಾಹನದ 'ಮೂರು' ಪ್ರಮುಖ ನಿಯಂತ್ರಕಗಳಾದ 'Accilarator', Clutch ಹಾಗೂ Break'ಗೆ ಹೋಲಿಸಬಹುದು.

ಎಸಿಬಿ ಸಂಸ್ಥೆಯು ಕಾನೂನು ಎಂಬ 'ಸ್ಟೇರಿಂಗ್' ನಿಯಂತ್ರಣದಲ್ಲಿ 'Accilarate' ಆಗಿ ಭ್ರಷ್ಟರ ಮೇಲೆ ವೇಗವಾಗಿ ದಾಳಿಯನ್ನು ಮಾಡುತ್ತದೆ. ನಂತರ ಪ್ರಭಾವಿಗಳ, ರಾಜಕಾರಣಿಗಳ, ಭ್ರಷ್ಟರಿಂದ ಅನುಕೂಲ ಪಡೆದವರಿಂದ ಒತ್ತಡದ Clutchಗೆ ಸಿಕ್ಕಿ ಆ ಮೂಲಕ B-ರಿಪೋರ್ಟ್ ಹಾಕಿಸಿ, ಪ್ರಕರಣಕ್ಕೆ Break ಹಾಕಲ್ಪಡುತ್ತದೆ.

ಈ ರೀತಿ ನಿಂತು ಹೋದ ವಾಹನಕ್ಕೆ ಮತ್ತೆ ಚಾಲನೆ ನೀಡಲು ಯಾರೂ ಆಸಕ್ತಿ ತೋರದೆ, ನಿಷ್ಕ್ರಿಯವಾಗಿ ನಿಂತಲ್ಲೆ ನಿಂತು ಬಿಡುತ್ತದೆ. ಎಸಿಬಿ ಸಂಸ್ಥೆಯ ಗತಿ ಇದೇ ಇತ್ತು. 'ಅಹುದಾದರೆ ಹೌದೆನ್ನಿ'.

– ಸಿ. ದಿನಮಣಿ ರಾವ್, ವಿಶ್ವಪಥ ರಸ್ತೆ, ಕುವೆಂಪುನಗರ, ಮೈಸೂರು.

ಈಗಿನ ಮಕ್ಕಳಿಗೆ ಗ್ರಾಫಿಕ್ಸ್ ಬೊಂಬೆಗಳ ಹೊರತು ಕೈಯಿಂದ ಮಾಡಿದಂತಹ ಗೊಂಬೆ ಮಹತ್ವ ತಿಳಿದಿಲ್ಲ...

–ಲೇಖಕಿ ಕಾವೇರಿ ಪೊನ್ನಪ್ಪ

ಮೂಲತಃ ಕೊಡಗಿನವರಾಗಿ ವಿದೇಶದಲ್ಲಿ ಉನ್ನತ ವ್ಯಾಸಂಗ ಮಾಡಿ, ಕೊಡಗಿನ ವೈಶಿಷ್ಟ್ಯತೆ, ಆಹಾರ ಪದ್ಧತಿ, ಪರಂಪರೆ ಕುರಿತು ತಮ್ಮದೇ ಶೈಲಿಯ ಬರವಣಿಗೆಗಳಿಂದ ದೇಶ-ವಿದೇಶಗಳಲ್ಲಿ ಗುರ್ತಿಸಿಕೊಂಡಿರುವ ಲೇಖಕಿ ಕಾವೇರಿ ಪೊನ್ನಪ್ಪ ಅವರು, ಮೈಸೂರಿನ ರಾಮ್‌ಸನ್ಸ್ ಕಲಾಪ್ರತಿಷ್ಠಾನಕ್ಕೆ ಭೇಟಿ ನೀಡಿದ್ದ ವೇಳೆ 'ಮೈಸೂರು ಮಿತ್ರ'ನೊಂದಿಗೆ ತಮ್ಮ ಅಭಿರುಚಿ, ಅನಿಸಿಕೆಗಳನ್ನು ಹಂಚಿಕೊಂಡಿದ್ದಾರೆ. ಕೊಡವ ಭಾಷೆ ಅಕ್ಷರ ರೂಪ ಪಡೆಯಬೇಕು ಎನ್ನುವ ಅವರಿಗೆ ಮೈಸೂರೆಂದರೆ ತುಂಬಾ ಪ್ರೀತಿ. ಮೈಸೂರಿನ ದಸರಾ, ಕಲೆ-ಸಾಹಿತ್ಯ, ಸಂಸ್ಕೃತಿ ಜೊತೆಗೆ ದಸರಾ ಬೊಂಬೆ ಪ್ರದರ್ಶನದ ಕುರಿತು ಮಾತನಾಡಿದ್ದಾರೆ.

■ ಮೋಹನ್ ಕಾಯಕ

ಮೈಸೂರು ಮಿತ್ರ: ***ಮೂಲತಃ ಕೊಡಗಿನವರಾಗಿ ಸಾಕಷ್ಟು ಬಾರಿ ಮೈಸೂರಿಗೆ ಭೇಟಿ ನೀಡಿದ್ದೀರಿ. ಮೈಸೂರಿನ ಬಗ್ಗೆ ತಮ್ಮ ಅಭಿಪ್ರಾಯವೇನು?***

ಲೇಖಕಿ ಕಾವೇರಿ ಪೊನ್ನಪ್ಪ: ಮೈಸೂರಿಗೆ ಎಷ್ಟು ಬಾರಿ ಬಂದಿದ್ದೇನೆ ಎಂಬುದನ್ನು ಲೆಕ್ಕ ಮಾಡುವುದು ಕಷ್ಟ, ಏಕೆಂದರೆ ಮೈಸೂರಿನ ಬಗ್ಗೆ ತುಂಬಾ ತಿಳಿದುಕೊಂಡಿದ್ದೇನೆ. ಇದೊಂದು ಸುಂದರ ಹಾಗೂ ಸಾಂಸ್ಕೃತಿಕ ನಗರವಾಗಿದೆ. ದಕ್ಷಿಣ ಭಾಗದಲ್ಲಿ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿಕೊಂಡಿರುವ ನಗರವೂ ಇದಾಗಿದೆ. ಇಲ್ಲಿನ ವಾಸ್ತುಶಿಲ್ಪ ಶೈಲಿ, ಆಹಾರ ಪದ್ಧತಿ, ದೇವರಾಜ ಮಾರುಕಟ್ಟೆ ಸೇರಿದಂತೆ ಎಲ್ಲವೂ ಇಷ್ಟ, ಇಲ್ಲಿಗೆ ಬಂದಾಗಲೆಲ್ಲಾ ದೇವರಾಜ ಮಾರುಕಟ್ಟೆಗೆ ಭೇಟಿ ನೀಡುತ್ತೇನೆ. ಮೈಸೂರಿಗರು ಸುಸಂಸ್ಕೃತರಾಗಿದ್ದು, ಮೈಸೂರು ಎಂದಿಗೂ ನನಗೆ ಹತ್ತಿರವೇ.

ಮಿತ್ರ: ***ರಾಮ್‌ಸನ್ಸ್ ಕಲಾ ಪ್ರತಿಷ್ಠಾನದ ಬೊಂಬೆ ಮನೆಗೆ ಭೇಟಿ ನೀಡಿದ್ದೀರಿ. ಇಲ್ಲಿನ ವೈಶಿಷ್ಟ್ಯತೆ ಹೇಗಿದೆ?***

ಕಾವೇರಿ ಪೊನ್ನಪ್ಪ: ರಾಜ್ಯದಲ್ಲಿಯೇ ರಾಮ್‌ಸನ್ಸ್ ಕಲಾ ಪ್ರತಿಷ್ಠಾನದ ಬೊಂಬೆ ಮನೆ ಹೆಸರು ಪಡೆದಿದೆ. ಈ ಮೊದಲು ನಾನು ತಮಿಳುನಾಡಿನಲ್ಲಿ ಈ ರೀತಿಯ ಬೊಂಬೆ ಪ್ರದರ್ಶನ ನೋಡಿದ್ದೆ. ಇಲ್ಲಿಗೆ ಮೊದಲು ಭೇಟಿ ನೀಡಿದ್ದ ವೇಳೆ ಬೊಂಬೆ ಮನೆಯಲ್ಲಿ ಸಂಗ್ರಹಿಸಿರುವ ಎಲ್ಲಾ ಬಗೆಯ ಬೊಂಬೆಗಳ ಬಗ್ಗೆಯೂ ಮಾಹಿತಿಯನ್ನು ಆರ್.ಜಿ.ಸಿಂಗ್ ನೀಡಿದ್ದರು. ಕಡೆಗೆ ಹೋಗುವಾಗ ಮತ್ತೆ ಬನ್ನಿ ಎಂದು ಕರೆದಿದ್ದರು. ಮೊದಲಿನಿಂದಲೂ ಅತ್ಯಾಕರ್ಷಕ ಬೊಂಬೆಗಳ ಸಂಗ್ರಹದಲ್ಲಿ ರಾಮ್‌ಸನ್ಸ್ ಕಲಾಪ್ರತಿಷ್ಠಾನ ಮುಂದಿದ್ದು, ಬೊಂಬೆ ಪ್ರಿಯರ ನೆಚ್ಚಿನ ತಾಣವಾಗಿದೆ. ನೋಡುವುದಕ್ಕೆ ಬೊಂಬೆಗಳಾದರೂ ಒಂದೊಂದು ಬೊಂಬೆಯ ಹಿಂದೆಯೂ ಒಂದೊಂದು ಕಥೆಯ ವೈಶಿಷ್ಟ್ಯತೆ ಇದೆ. ಹಾಗೆಯೇ ಅವುಗಳನ್ನು ರೂಪಿಸುವುದು ಅಷ್ಟು ಸುಲಭವಲ್ಲ. ನಮ್ಮ ದೇಶದಲ್ಲಿ ಬೊಂಬೆಗಳ ತಯಾರಿಕೆ ಹಾಗೂ ಸಂಗ್ರಹಿಸುವ ಸಂಸ್ಕೃತಿ ಈಗೀಗ ಕಡಿಮೆಯಾಗುತ್ತಿದೆ.



ಮೈಸೂರಿನ ರಾಮ್‌ಸನ್ಸ್ ಕಲಾ ಪ್ರತಿಷ್ಠಾನದ ಬೊಂಬೆ ಮನೆಯಲ್ಲಿ ಲೇಖಕಿ ಕಾವೇರಿ ಪೊನ್ನಪ್ಪ

ಮಕ್ಕಳಿಗೆ ಗ್ರಾಫಿಕ್ಸ್ ಮೂಲಕ ಬೊಂಬೆಗಳನ್ನು ತೋರಿಸುತ್ತಿದ್ದೇವೆ. ಇದರಿಂದ ಕೈಯಿಂದ ಮಾಡಿರುವ ಬೊಂಬೆಗಳ ಮಹತ್ವ ಮಕ್ಕಳಿಗೆ ತಿಳಿಯುತ್ತಿಲ್ಲ. ಈ ನಿಟ್ಟಿನಲ್ಲಿ ರಾಮ್‌ಸನ್ಸ್ ಕಲಾಪ್ರತಿಷ್ಠಾನ ಅತ್ಯುತ್ತಮ ಕಲಾ ಸೇವೆ ಮಾಡುತ್ತಿದ್ದು, ಅದ್ಭುತವಾದ ಬೊಂಬೆಗಳ ಸಂಗ್ರಹವನ್ನೇ ಮಾಡಿದೆ. ಈ ಮೂಲಕ ಸಮುದಾಯಗಳ ನಡುವಿನ ಸಂಬಂಧ ಗಟ್ಟಿಗೊಳಿಸುವ ಕೆಲಸ ಮಾಡುತ್ತಿದೆ.

ಮಿತ್ರ: ***ಕೊಡವ ನಾಡಿನ ಸಾಹಿತಿಯಾಗಿ ಕೊಡವರ ಸಂಸ್ಕೃತಿ ಕುರಿತು ಕೃತಿ ಬರೆದು ಪ್ರಕಟಿಸಿದ್ದೀರಿ. ಅದರ ಅನುಭವ ಹೇಗಿತ್ತು?***

ಕಾವೇರಿ ಪೊನ್ನಪ್ಪ: ದೇಶದ ಇತಿಹಾಸದಲ್ಲಿಯೇ ಕೊಡವರದ್ದು ವಿಶಿಷ್ಟ ಸಂಪ್ರದಾಯ. ಕೊಡವರ ಪ್ರತಿಯೊಂದು ಆಚರಣೆಯಲ್ಲಿಯೂ ವಿಶೇಷತೆಯನ್ನು ಕಾಣುತ್ತೇವೆ. ಕೊಡವರೆಂದರೆ ಎಲ್ಲರಿಗೂ ಇಷ್ಟವಾಗುವವರು. ದೇಶದ ರಕ್ಷಣೆ ವಿಚಾರದಲ್ಲಿ ಸದಾ ಮುಂದಿರುತ್ತಾರೆ. ಸೇನೆಯಲ್ಲಿ ಹಲವಾರು ಉನ್ನತ ಹುದ್ದೆಗಳನ್ನು ನಿರ್ವಹಿಸಿ, ಕೊಡವ ನಾಡಿಗೆ ಅಪಾರ ಕೀರ್ತಿ ತಂದಿದ್ದಾರೆ. ಕೊಡಗಿವನಾಗಿರುವುದೇ ನನಗೆ ಹೆಮ್ಮೆ ಎನ್ನಿಸುತ್ತದೆ. ಈ ದೃಷ್ಟಿಯಿಂದಲೇ ಕೊಡವ ಸಂಸ್ಕೃತಿ ಕುರಿತು ಕೃತಿ ಬರೆಯಬೇಕು ಎಂದುಕೊಂಡಿದ್ದೆ. ಅದನ್ನು ಈಗ ಪೂರ್ಣಗೊಳಿಸಿದ್ದೇನೆ. ಇದರಿಂದ ತೃಪ್ತಿಯೂ ಇದೆ.

ಮಿತ್ರ: ***ಕೊಡವ ಭಾಷೆಗೆ ಪ್ರತ್ಯೇಕ ಲಿಪಿ ಅಗತ್ಯವಿದೆಯೇ?***


ಕಾವೇರಿ ಪೊನ್ನಪ್ಪ: ಮೊದಲಿನಿಂದಲೂ ಮೌಖಿಕವಾಗಿ ಬೆಳೆದು ಬಂದಿರುವ ಕೊಡವ ಭಾಷೆಗೆ ಪ್ರತ್ಯೇಕ ಲಿಪಿಯ ಅಗತ್ಯವಿದೆ. ಇದರಿಂದ ನಮ್ಮ ಮುಂದಿನ ಪೀಳಿಗೆಗೆ ಅನುಕೂಲವಾಗುತ್ತದೆ. ಪ್ರಸ್ತುತ ಕನ್ನಡ ಹಾಗೂ ಇಂಗ್ಲಿಷ್ ಮೂಲಕ ಕೊಡವ ಭಾಷೆ ಬಳಕೆ ಮಾಡಲಾಗುತ್ತಿದ್ದು, ಪ್ರತ್ಯೇಕ ಲಿಪಿಯಾದರೆ ಭಾಷೆಗೆ ಗೌರವ ದೊರೆತಂತಾಗುತ್ತದೆ. ಅದರ ನಿರೀಕ್ಷೆಯಲ್ಲಿಯೂ ನಾನಿದ್ದೇನೆ. ನಾನು ಕೂಡ ವಿದೇಶದಲ್ಲಿ ಅಧ್ಯಯನ ನಡೆಸಿದ್ದು, ಬೆಂಗಳೂರಿಗೆ ಬಂದ ನಂತರವೇ ಕನ್ನಡ ಕಲಿತದ್ದು. ಬೇರೆ ದೇಶದಲ್ಲಿ ಅಧ್ಯಯನ ನಡೆಸುವವರು ಅಲ್ಲಿನ ಭಾಷೆ ಜೊತೆಗೆ ಇಲ್ಲಿಗೆ ಬಂದಾಗ ಕನ್ನಡ ಕಲಿಯುವುದು ಸಾಮಾನ್ಯ. ಆದರೆ ಇದರ ನಡುವೆ ಅವರ ಮೂಲ ಭಾಷೆ, ಸಂಸ್ಕೃತಿ ಅವರಿಂದ ದೂರವಾಗುತ್ತದೆ. ಹೆಚ್ಚಾಗಿ ಬಳಕೆಯಾಗುತ್ತಿರುವ ಸಾಮಾಜಿಕ ಜಾಲತಾಣಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಬೇರೆ ಭಾಷೆಯನ್ನೇ ಬಳಕೆ ಮಾಡಬೇಕಾದ ಅನಿವಾರ್ಯತೆ ಇದೆ. ಆದ್ದರಿಂದ ಕೊಡವ ಭಾಷೆಗೆ ಲಿಪಿ ಅತ್ಯಂತ ಅಗತ್ಯವಿದೆ.

ಮಿತ್ರ: ***ರುಚಿಕರ ಆಹಾರ ಪದಾರ್ಥಗಳ ಕುರಿತು ಸಾಕಷ್ಟು ಅಂಕಣಗಳನ್ನು ಬರೆದಿದ್ದೀರಿ. ನಿಮಗೆ ಕೊಡಗಿನ ಯಾವ ಬಗೆಯ ಊಟೋಪಚಾರ ಇಷ್ಟ?***

ಕಾವೇರಿ ಪೊನ್ನಪ್ಪ: ಕೊಡಗಿನಲ್ಲಿ ಮಾಂಸಾಹಾರ (ನಾನ್‌ವೆಜ್) ಇಷ್ಟಪಡುವವರು ಜಾಸ್ತಿ. ಆದರೆ ನನಗೆ ವೆಜ್ ಇಷ್ಟ, ಅಣಬೆ, ಬಾಳೆಕಾಯಿ, ಕುಂಬಳಕಾಯಿ, ಸೊಪ್ಪಿನಿಂದ ಮಾಡಿದ ಅಡುಗೆ ಇಷ್ಟ, ಅದರಲ್ಲೂ ಆಷಾಢ(ಕಕ್ಕಡ) ಮಾಸದಲ್ಲಿ ಕಾಡಿನಲ್ಲಿ ಬೆಳೆಯುವ 18 ಔಷಧಿಯ ಗುಣವುಳ್ಳ 'ಮದ್ದುತೊಪ್ಪು(ಔಷಧಿ ಸೊಪ್ಪು)' ಅನ್ನು ನೀರಿನಲ್ಲಿ ಬೇಯಿಸಿ, ಅದರ ರಸದಿಂದ ಮಾಡಿದ ಪಾಯಸ ತುಂಬಾ ಇಷ್ಟ, ತುಂಬಾ ಹಸಿರಿನಿಂದ ಕೂಡಿರುವ ಸೊಪ್ಪು ಇದಾಗಿದ್ದು, ಕೊಡಗಿನಲ್ಲಿ ತುಂಬಾ ಜನಪ್ರಿಯವಾಗಿದೆ.

ಮಿತ್ರ: ***ನಿಮ್ಮ ಮುಂದಿನ ಬರವಣಿಗೆಯ ಬಗ್ಗೆ ತಿಳಿಸಬಹುದೇ?***

ಕಾವೇರಿ ಪೊನ್ನಪ್ಪ: ನಾನು ಇಂತಹದ್ದೇ ವಿಷಯವನ್ನಿಟ್ಟುಕೊಂಡು ಬರೆಯುವುದಿಲ್ಲ. ಬರೆಯಬೇಕು ಎನಿಸಿದ್ದನ್ನು ಬರೆಯುವ ಹವ್ಯಾಸ ನನ್ನದಾಗಿದೆ. ಈಗ ಕೊಡಗಿಗೆ ಸಂಬಂಧಿಸಿದ ಪುಸ್ತಕ ಬರೆಯುತ್ತಿದ್ದೇನೆ. ದೇಶದಲ್ಲಿ ಕರ್ನಾಟಕ ಎಂಬುದೇ ವಿಶೇಷ. ಆದ್ದರಿಂದ ರಾಜ್ಯದ ವೈಶಿಷ್ಟ್ಯತೆ ಕುರಿತಾಗಿ ಬರೆಯಬೇಕೆಂದಿದ್ದೇನೆ.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ವಾಸ್ತವಕ್ಕೆ ಸನಿಹದ ಕನಸು ಕಾಣಬೇಕು

ನಾವೆಲ್ಲಾ ಆಗಾಗ್ಗೆ ಕನಸು ಕಾಣುತ್ತಲೇ ಇರುತ್ತೇವೆ. ಅದು ಎಚ್ಚರವಾಗಿ ಇರುವಾಗ ಹಗಲು ನನಸಾಗಿರಬಹುದು, ಇಲ್ಲವೇ ನಿದ್ರೆಯ ಕನಸು ಆಗಿರಬಹುದು. ಕನಸನ್ನು ಹಗಲುಗನಸು, ಇರುಳುಗನಸು ಎಂದು ಭಾಗ ಮಾಡಲಾಗಿದೆ. ಆಗಾಗ್ಗೆ ಎಚ್ಚರಿಸುವ ಮಾತೆಂದರೆ ಹಗಲುಗನಸು ಕಾಣಬೇಡ ಎಂದು. ರಾತ್ರಿ ನಿದ್ರೆಯಲ್ಲಿ ಬೀಳುವ ಕನಸು ನಮ್ಮ ನಿಯಂತ್ರಣದಲ್ಲಿ ಇರುವುದಿಲ್ಲ. ಆದರೆ ಹಗಲುಗನಸು ಹಾಗಲ್ಲ. ಅದು ನಾವೇ ಸೃಷ್ಟಿಸಿಕೊಳ್ಳುವ ಭ್ರಮಾಲೋಕ. ಆದ್ದರಿಂದ ಹಗಲುಗನಸು ಕಾಣಬಾರದು ಎಂದು ಹೇಳಲಾಗುತ್ತದೆ. ಹಗಲು ಕೆಲಸ ಮಾಡುವ ಸಮಯ. ಆ ಸಮಯದಲ್ಲಿ ನಾವು ಅಂದುಕೊಂಡ ಹಾಗೂ ನಾವು ನಮ್ಮ ಜೀವನಕ್ಕೆ ಸಂಬಂಧಿಸಿದಂತೆ ಕಂಡ ಕನಸನ್ನು ನನಸಾಗಿಸಿಕೊಳ್ಳಲು ಪ್ರಯತ್ನಿಸಬೇಕು. ಹಾಗೆ ಮಾಡದೆ ಮತ್ತೊಂದು ಕನಸು ಕಾಣುತ್ತಾ ಕುಳಿತುಕೊಂಡರೆ, ಮೊದಲು ಕಂಡ ಕನಸು ದಾರಿ ತಪ್ಪುತ್ತದೆ. ಹಾಗಾಗಬಾರದು ಎಂದರೆ ಹಗಲುಗನಸು ಕಾಣಬಾರದು ಎಂಬುದು ಈ ಎಚ್ಚರಿಕೆಯ ಹಿಂದಿರುವ ಆಶಯ ಎಂದು ಕಂಡುಬರುತ್ತದೆ.

ನಿಜ, ನಮಗೆಲ್ಲರಿಗೂ ಸೂಪರ್‌ಮ್ಯಾನ್, ಸ್ಪೈಡರ್ ಮ್ಯಾನ್ ರೀತಿ ಆಗಬೇಕು, ನಮಗೆ ಅತಿಮಾನುಷ ಶಕ್ತಿ ಇರಬೇಕು, ನಾವು ಚಲನಚಿತ್ರಗಳಲ್ಲಿ ತೋರಿಸುವಂತೆ ಯಾರ ಕಣ್ಣಿಗೂ ಬೀಳದಂತೆ ಅಗೋಚರ ಆಗಬೇಕು ಎಂದೆಲ್ಲಾ ಅಂದುಕೊಳ್ಳುತ್ತೇವೆ. ಇದೆಲ್ಲಾ ಹಗಲುಗನಸು. ಅಂದರೆ ಇವು ಯಾವುದೂ ಈಡೇರುವುದಿಲ್ಲ. ಅವೆಲ್ಲಾ ಕೇವಲ ಕಲ್ಪನೆಗಳು. ಆದರೆ ನಮಗೆ ಆಗಿರುವ ಅಥವಾ ಆಗುತ್ತಿರುವ ತೊಂದರೆಗೆ, ಹೀಗಾದರೆ ಪರಿಹಾರ ದೊರಕುತ್ತದೆ ಎಂಬ ಭ್ರಮೆಯಿಂದ ನಾವು ಕನಸು ಕಾಣುತ್ತೇವೆ. ಆದರೆ ಅದು ಫಲಿಸದ ಕಾರಣ ಎಚ್ಚರವಾದ ನಂತರ ನಿರಾಸೆ ಅನುಭವಿಸುತ್ತೇವೆ. ಇದಕ್ಕಾಗಿ ಅಂತಹ ಕನಸನ್ನು ಹಗಲುಗನಸು ಎಂದು ಹೇಳುವುದು. ಅದು ಈಡೇರದ ಕಾರಣ ಅಂತಹ ಕನಸು ಕಾಣಬಾರದು ಎಂದು ಹೇಳುವುದು ಉಂಟು.

ಸಮಸ್ಯೆ ಇಲ್ಲದ ವ್ಯಕ್ತಿ ಇಲ್ಲ. ಅದಕ್ಕೇ ಹೇಳುವುದು ತೊಂದರೆ ಮನುಷ್ಯನಿಗಲ್ಲದೆ ಮರಕ್ಕೆ ಬರುತ್ತದೆಯಾ? ಎಂದು. ಸಮಸ್ಯೆ ಎಲ್ಲರಿಗೂ ಇರುವಂತಹುದೇ. ಆದರೆ ಅದನ್ನು ನಿವಾರಿಸಿಕೊಳ್ಳಬೇಕಾಗಿರುವುದು ನಮಗೆ ಸಂಬಂಧಿಸಿದ ವಿಷಯ. ಅದನ್ನು ಇತರರು ಅಥವಾ ಅತಿಮಾನುಷ ಗುಣವಿದ್ದರೆ ಪರಿಹರಿಸಿಕೊಳ್ಳಬಹುದಾಗಿತ್ತು ಎಂದುಕೊಳ್ಳುವುದು ಒಂದು ರೀತಿ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲಾರದವರ ಪ್ರಯತ್ನ ಎಂಬಂತಾಗುತ್ತದೆ. ಸಮಸ್ಯೆ ಇದ್ದೆಡೆ ಪರಿಹಾರವೂ ಇದೆ ಎಂದು ಭಾವಿಸಿ, ನನಗೆ ಬಂದಿರುವ ಸಮಸ್ಯೆಗೆ ಪರಿಹಾರದ ದಾರಿ ಯಾವುದು ಎಂದು ನಾವೇ ಯೋಚಿಸಬೇಕು. ನಮ್ಮ ಸಮಸ್ಯೆಗೆ ನಾವೇ ದಾರಿ ಕಂಡುಕೊಳ್ಳಬೇಕು, ಏಕೆಂದರೆ ಸಮಸ್ಯೆ ತಂದುಕೊಂಡವರು ನಾವೇ ಆಗಿರುತ್ತೇವೆ. ನಮಗೆ ಆರೋಗ್ಯ ಕೆಟ್ಟಾಗ ಇಂತಹ ಆಲೋಚನೆ ಬರುತ್ತದೆ. ದೇವರಿಗೆ ಕೈಮುಗಿದು ನಾನು ನಿನ್ನ ಪರಮಭಕ್ತ, ನನಗೇಕೆ ಹೀಗಾಗುತ್ತಿದೆ? ಇದನ್ನು ನೀನೇ ಸರಿಪಡಿಸಬೇಕು, ನಿನ್ನನ್ನೇ ನಂಬಿದ್ದೇನೆ ಎಂದರೆ ಖಂಡಿತಾ ಸಮಸ್ಯೆ ಬಗೆಹರಿಯುವುದಿಲ್ಲ ಆರೋಗ್ಯವೂ ಸುಧಾರಿಸುವುದಿಲ್ಲ, ಬದಲಿಗೆ ಈ ರೀತಿ ಮಾಡಿಕೊಳ್ಳುವ ವಿಳಂಬದಿಂದ ಖಾಯಿಲೆ ಮತ್ತಷ್ಟು ಉಲ್ಬಣವಾಗುವುದೇ ವಿನಃ ಖಂಡಿತಾ ಪರಿಹಾರವಾಗುವುದಿಲ್ಲ. ಹಾಗೆಂದು ಈ ರೀತಿ ದೇವರ ಮೊರೆ ಹೋಗುವುದು ತಪ್ಪು ಎಂದಲ್ಲ. ಅದು ಒಂದು ವಿಶೇಷವಾದ ಶಕ್ತಿ, ಅದು ಒಲಿದರೆ ಸಮಸ್ಯೆ ಪರಿಹಾರವಾಗುತ್ತದೆ ಎಂಬ ನಂಬಿಕೆ ಸರಿಯೇ. ಆದರೆ ನಮ್ಮ ಪ್ರಯತ್ನವೇ ಇಲ್ಲದೇ ದೇವರು ಸರಿ ಮಾಡುತ್ತಾನೆ ಎಂಬುದು ಒಂದು ರೀತಿ ವಿಮುಖ ಮನೋಭಾವ ಸೂಚಿಸುತ್ತದೆ. ನನಗೆ ಆರೋಗ್ಯ ಸರಿಯಿಲ್ಲ, ದೇವರೇ ಸರಿ ಮಾಡಲಿ ಎನ್ನುವುದರಲ್ಲಿ ಅರ್ಥವಿಲ್ಲ. ನನ್ನ ಆರೋಗ್ಯ ಏಕೆ ಹೀಗಾಯಿತು? ಅದಕ್ಕೆ ಕಾರಣ ಏನು ಎಂಬುದನ್ನು ಕಂಡುಕೊಂಡು ಅದನ್ನು ಪರಿಹರಿಸಿಕೊಳ್ಳುವುದು ಬುದ್ಧಿವಂತಿಕೆ. ನಾವು ವೈದ್ಯರಲ್ಲಿಗೆ ಹೋದಾಗಲೂ ನಮ್ಮ ಖಾಯಿಲೆಯ ಬಗ್ಗೆ ಅವರಿಗೆ ಸಂಪೂರ್ಣ ಮಾಹಿತಿ ನೀಡದಿದ್ದರೆ ಅವರು ಯಾವ ಔಷಧಿ ಕೊಡಲು ಸಾಧ್ಯ? ಅಂದರೆ ನಮ್ಮ ಖಾಯಿಲೆ ಏನು? ಅದು ಹೇಗೆ ಬಂತು? ಎಂಬುದು ನಮಗೇ ಗೊತ್ತಿರುತ್ತದೆ. ಅದನ್ನು ಪೂರ್ಣವಾಗಿ ಹೇಳಿಕೊಂಡರೆ ಮಾತ್ರ ವೈದ್ಯರು ಪರಿಹಾರ ಕಂಡುಹಿಡಿಯಲು ಸಾಧ್ಯ.

> ನಿಜ, ನಮಗೆಲ್ಲರಿಗೂ ಸೂಪರ್‌ಮ್ಯಾನ್, ಸ್ಪೈಡರ್ ಮ್ಯಾನ್ ರೀತಿ ಆಗಬೇಕು, ನಮಗೆ ಅತಿಮಾನುಷ ಶಕ್ತಿ ಇರಬೇಕು, ನಾವು ಚಲನಚಿತ್ರಗಳಲ್ಲಿ ತೋರಿಸುವಂತೆ ಯಾರ ಕಣ್ಣಿಗೂ ಬೀಳದಂತೆ ಅಗೋಚರ ಆಗಬೇಕು ಎಂದೆಲ್ಲಾ ಅಂದುಕೊಳ್ಳುತ್ತೇವೆ. ಇದೆಲ್ಲಾ ಹಗಲುಗನಸು. ಅಂದರೆ ಇವು ಯಾವುದೂ ಈಡೇರುವುದಿಲ್ಲ. ಅವೆಲ್ಲಾ ಕೇವಲ ಕಲ್ಪನೆಗಳು.

ನಾವು ನಮಗೆ ಬಂದ ಸಮಸ್ಯೆ ಹೇಗೆ ಉದ್ಭವಿಸಿತು ಎಂಬುದನ್ನು ಮೊದಲು ಮನಗಾಣಬೇಕು. ಅದು ನನ್ನ ತಪ್ಪಿನಿಂದ ಆದುದೇ? ಅಥವಾ ಬೇರೆಯವರು ಮಾಡಿದ ಮೋಸದಿಂದ ಆದುದೇ? ಎಂದು ಮೊದಲು ಕಂಡುಕೊಳ್ಳಬೇಕು. ನನಗೆ ಪರಿಚಯದವರೊಬ್ಬರು ಯಾರೋ ಯಾವುದೋ ವ್ಯಾಪಾರದಲ್ಲಿ ಹೆಚ್ಚು ಲಾಭ ಗಳಿಸುತ್ತಿದ್ದರು ಎಂದು ತಿಳಿದು, ಅದೇ ರೀತಿ ನಾನೂ ಮಾಡುತ್ತೇನೆ ಎಂದು ಹೊರಟರು. ಅದರಂತೆ ಒಂದು ವ್ಯಾಪಾರಕ್ಕೆ ಕೈಹಾಕಿದರು. ಅವರಿಗೆ ಆ ಬಗ್ಗೆ ಯಾವ ಅನುಭವವೂ ಇರಲಿಲ್ಲ. ಯಾರೋ ಹೇಳಿದರು ಎಂದು ಹೊಸದಾದ ವ್ಯಾಪಾರಕ್ಕೆ ಕೈಹಾಕಿದ್ದರು. ಅವರು ಒಂದಷ್ಟು ಅಪರಿಚಿತ ಅಂಗಡಿಗಳಿಗೆ ಹೋಗಿ ತಮ್ಮ ಸರಕನ್ನು ನೀಡುತ್ತಿದ್ದರು. ಇವರಿಗೆ ತಾನು ಸರಕು ನೀಡಿದ ಕೂಡಲೇ ಅಂಗಡಿಯವರು ದುಡ್ಡು ಕೊಟ್ಟು ಬಿಡುತ್ತಾರೆ ಅಂದುಕೊಂಡಿದ್ದರು. ಆದರೆ ಆ ರೀತಿ ಯಾವ ವ್ಯಾಪಾರಿಯೂ ಒಪ್ಪಲಿಲ್ಲ. ನೀವು ವಸ್ತು ಕೊಟ್ಟು ಹೋಗಿ, ಅದು ವ್ಯಾಪಾರವಾದ ನಂತರ ನಾವು ದುಡ್ಡು ಕೊಡುತ್ತೇವೆ ಎನ್ನುತ್ತಿದ್ದರು. ಇವರಿಗೆ ಹಾಗೆ ಮಾಡುವುದು ಅನಿವಾರ್ಯವಾಯಿತು. ಅಂಗಡಿಯವರು ಕೇಳಿದಷ್ಟು ವಸ್ತು ಕೊಟ್ಟು ಬರುತ್ತಿದ್ದರು. ಇವರಿಗೆ ವ್ಯಾಪಾರದ ವಿಷಯ ಗೊತ್ತಿಲ್ಲ ಎಂದು ಅರಿತ ಆ ಅಂಗಡಿಗಳವರು, ಇವರು ಹೋದಾಗಲೆಲ್ಲಾ ಆ ವಸ್ತು ವ್ಯಾಪಾರವಾಗಿಲ್ಲ, ವ್ಯಾಪಾರವಾದ ನಂತರ ಹಣ ಕೊಡುತ್ತೇವೆ ಎನ್ನುತ್ತಿದ್ದರು. ಇವರು ಹತ್ತಾರು ಬಾರಿ ತಿರುಗಿದರೂ ಅದೇ ಉತ್ತರ. ಇವರು ಬಳಲಿದರು, ಮೊದಲೇ ಕೈಲಿದ್ದ ಬಂಡವಾಳ ಹಾಕಿ ಖರೀದಿಸಿದ್ದ ಉತ್ಪನ್ನದ ಹಣ ಹಿಂದಿರುಗಿಲ್ಲ, ಅಲ್ಲದೇ ಪದೇಪದೆ ಅಂತಹ ಅಂಗಡಿಗಳಿಗೆ ಹೋಗಲು ವಾಹನದ ಇಂಧನ, ಇತರೆ ಖರ್ಚು ಅಧಿಕವಾಗಿ ವ್ಯಾಪಾರ ಕೈಬಿಟ್ಟರು. ಹಾಕಿದ್ದ ಬಂಡವಾಳ ವಾಪಸ್ಸು ಬರಲೇ ಇಲ್ಲ. ಇದಕ್ಕಾಗಿ ಅವರು ಜ್ಯೋತಿಷಿಗಳ ಬಳಿ ಶಾಸ್ತ್ರ ಕೇಳಿದರು. ಅಲ್ಲಿ ಪರಿಹಾರ ಸಿಗದೆ, ಜ್ಯೋತಿಷಿಗಳಿಗೆ ನೀಡಿದ ಹಣವೂ ಕೈಬಿಟ್ಟಂತಾಯಿತು. ಇದು ನನ್ನ ಹಣೆಬರಹ, ಆ ದೇವರು ನನಗೇ ಏಕೆ ಇಂತಹ ಕಷ್ಟಕೊಡುತ್ತಿದ್ದಾನೆ? ಎಂದು ನೊಂದುಕೊಂಡು ಅನಾರೋಗ್ಯಕ್ಕೆ ತುತ್ತಾದರು. ಇಂತಹ ಘಟನೆ ನಾವು ಹಲವು ಕಂಡಿರುತ್ತೇವೆ. ಇಂತಹ ಸಮಸ್ಯೆ ತಾನಾಗೇ ಇತ್ಯರ್ಥವಾದಂತೆ, ಕೊನೆಗೆ ಅಂಗಡಿಯವರು ತಾವೇ ಹಣ ತಂದುಕೊಟ್ಟಂತೆ ಇವರು ಕನಸು ಕಾಣ ಹತ್ತಿದರು. ಅದು ಸಾಧ್ಯವೇ? ಇದನ್ನೇ ಹಗಲುಗನಸು ಎನ್ನುವುದು.

ನನಗೆ ಪರಿಚಿತರಿರುವ ಇನ್ನೊಬ್ಬರದು ಇನ್ನೊಂದು ಕಥೆ. ಅವರು ಒಂದಷ್ಟು ಹೆಚ್ಚಾಗೇ ಸಾಲ ಮಾಡಿಕೊಂಡಿದ್ದರು. ಆ ಸಾಲ ಕೊಟ್ಟವರು ಹಣಕ್ಕೆ ದಂಬಾಲು ಬಿದ್ದಾಗ, ಅಧಿಕ ಬಡ್ಡಿಗೆ ಬೇರೆಯವರಿಂದ ಸಾಲ ತಂದು ಇವರ ಸಾಲ ತೀರಿಸಿದ್ದರು. ಹೀಗೆ ಸಾಲ ಕೊಟ್ಟವರು ಹಣಕ್ಕೆ ಆಗ್ರಹಿಸಿದಾಗ ಮತ್ತೊಂದೆಡೆಯಿಂದ ಸಾಲ ಮಾಡಿದರು. ಕೊನೆಗೆ ಸಾಲ ತೀರಿಸಲಾಗದ ಸ್ಥಿತಿ ತಲುಪಿದರು. ಆಗ ಅವರು ಹಗಲುಗನಸು ಕಾಣತೊಡಗಿದರು. ರಸ್ತೆಯಲ್ಲಿ ಹೋಗುವಾಗ ಎಲ್ಲಾದರೂ ಹಣದ ಗಂಟು ಸಿಗಬಹುದೇ? ಎಂಬ ಯೋಚನೆ ಅವರದ್ದಾಗಿತ್ತು. ಇದೇ ಗುಂಗಿನಲ್ಲಿ ವಾಹನ ಚಲಾಯಿಸುತ್ತಿದ್ದರು, ರಸ್ತೆಯಲ್ಲಿ ಏನೇ ಕಂಡರೂ ಅದು ಹಣದ ಗಂಟು ಆಗಿರಬಹುದೇ? ಎಂದು ಯೋಚಿಸುತ್ತಿದ್ದರು. ಹೀಗೆ ಯೋಚಿಸುತ್ತಾ ಇರುವ ಸಾಲ ಹೇಗೆ ತೀರಿಸಬಹುದು? ಎಂಬುದರ ಕಡೆಗೇ ಗಮನಹರಿಸಲಿಲ್ಲ. ಕೊನೆಗೆ ಪಾಪರ್ ಎನಿಸಿಕೊಳ್ಳುವ ಹಂತಕ್ಕೆ ತಲುಪಿದರು. ಇದು ವಾಸ್ತವದ ಕಡೆ ಗಮನ ಕೊಡದೆ ಆಗದಿರುವ, ನಡೆಯದಿರುವ ವಿಷಯದ ಕನಸು ಕಂಡ ಫಲ ಎಂದು ಹೇಳಬಹುದು.

ಆದ್ದರಿಂದ ನಾವು ವಾಸ್ತವಕ್ಕೆ ಸನಿಹವಾದ ಕನಸು ಕಾಣಬೇಕು. ವಾಸ್ತವಕ್ಕೆ ಸನಿಹ ಎಂದರೆ ತಾನು ಅಂದುಕೊಂಡಿದ್ದನ್ನು ಹೇಗೆಲ್ಲಾ ಸಾಧಿಸಬಹುದು? ಎಂಬ ಬಗ್ಗೆ ಮಾಡುವ ಆಲೋಚನೆ ಎಂದು ಹೇಳಬಹುದು. ಅಂತಹ ಕನಸು ಕಾಣುವಾಗ ನಮಗೆ ಹಲವು ವಾಸ್ತವ ದಾರಿಗಳು ಗೋಚರವಾಗುತ್ತವೆ. ಇಂತಹ ಯೋಚನೆ ಮಾಡುವವರಿಗೆ ರಾತ್ರಿಯ ಕನಸಿನಲ್ಲಿಯೂ ದಾರಿಗಳು ಕಂಡುಬರುತ್ತದೆ. ಅದನ್ನು ಅನುಸರಿಸಿ ಸಾಧನೆ ಮಾಡುತ್ತಾರೆ. ಅಂತಹವರು ಯಶಸ್ಸನ್ನು ಕಾಣುತ್ತಾರೆ. ಇದು ವಾಸ್ತವಕ್ಕೆ ಹತ್ತಿರವಾದ ಕನಸು. ಅಂತಹ ಕನಸು ಕಾಣುವುದು ಅಪೇಕ್ಷಣೀಯ.

ಹಿಂದೆ ಓದಿದ್ದ ಒಂದು ಕಥೆ ನೆನಪಾಗುತ್ತದೆ. ಒಬ್ಬ ವ್ಯಕ್ತಿ ಯಾವಾಗಲೂ ಬೆನ್ನು ಬಾಗಿಸದೇ ನೇರವಾಗಿ ನಡೆಯುತ್ತಿದ್ದ. ಅಂದರೆ ನಡೆಯುವಾಗ ರಸ್ತೆ ನೋಡದೇ ನೆಟ್ಟಗೆ, ಆದರೆ ನಿಖರವಾಗಿ ನಡೆಯುತ್ತಿದ್ದ. ಒಮ್ಮೆ ಹೀಗೆ ನಡೆಯುವಾಗ ಅವನ ಚಪ್ಪಲಿ ಕಿತ್ತು ಹೋಯಿತು. ಅವನು ಚಪ್ಪಲಿಯನ್ನೇ ನೋಡುತ್ತಾ ಹೆಜ್ಜೆ ಹಾಕತೊಡಗಿದ. ಸ್ವಲ್ಪ ದೂರ ಹೋಗುತ್ತಿದ್ದಂತೆ ಅವನಿಗೆ ಹತ್ತು ರೂಪಾಯಿ ನೋಟು ರಸ್ತೆಯಲ್ಲಿ ಬಿದ್ದಿರುವುದು ಕಾಣಿಸಿತು. ಆಗ ಅವನು ನಾನು ಇಷ್ಟು ದಿನ ನೇರವಾಗಿಯೇ ನಡೆಯುತ್ತಿದ್ದುದರಿಂದ ರಸ್ತೆಯಲ್ಲಿ ಹೀಗೆ ಸಿಗಬಹುದಾಗಿದ್ದ ಹಣವನ್ನು ನೋಡಲೇ ಇಲ್ಲ. ಇನ್ನು ಮುಂದೆ ನಾನು ಬಗ್ಗಿ ರಸ್ತೆಯನ್ನೇ ನೋಡಿಕೊಂಡು ನಡೆಯುತ್ತೇನೆ, ಹಾಗೆ ಮಾಡುವುದರಿಂದ ನನಗೆ ಹೆಚ್ಚು ಹಣ ಸಿಗಬಹುದು ಎಂದುಕೊಂಡು ರಸ್ತೆ ನೋಡುತ್ತಾ ನಡೆಯಲು ಆರಂಭಿಸಿದ. ಮುಂದಿನ ಹತ್ತು ವರ್ಷದಲ್ಲಿ ಅವನಿಗೆ ಸಾವಿರಾರು ರೂಪಾಯಿಗಳು, ಟನ್‌ಗಟ್ಟಲೆ ಕಬ್ಬಿಣದ ಮೊಳೆಗಳು, ನಟ್‌ಗಳು, ಬೋಲ್ಟ್‌ಗಳು ಇನ್ನಿತರೆ ವಸ್ತುಗಳು ದೊರಕಿದವು. ಜೊತೆಗೆ ಬೆನ್ನು ಸಹಾ ಸರಿ ಹೋಯಿತು ಎಂಬುದು ಕಥೆ. ಇದರಿಂದ ನಾವು ಅವಶ್ಯಕತೆಗನುಗುಣವಾಗಿ ಬದಲಾವಣೆ ಮಾಡಿಕೊಂಡರೆ ಅದರಿಂದಲೂ ಲಾಭ ಉಂಟು ಎಂಬುದು ಮನದಟ್ಟಾಗುತ್ತದೆ.

ನಾವು ಹೀಗೇ ಮನೆ ಕಟ್ಟಲು ಹೊರಡುತ್ತೇವೆ. ನನ್ನ ಮನೆ ಹೀಗೆಲ್ಲಾ ಭವ್ಯವಾಗಿರಬೇಕು ಎಂದು ಕೊಂಡು ಕನಸು ಕಂಡಿರುತ್ತೇವೆ. ಅದು ವಾಸ್ತವವಾದರೆ ಪರವಾಗಿಲ್ಲ. ಮನೆ ಕಟ್ಟಲು ಹೊರಟಾಗ ಹಲವಾರು ಸಮಸ್ಯೆಗಳು ಎದುರಾಗುತ್ತವೆ. ಅದನ್ನು ಎದುರಿಸಿ ನಿಂತರೆ ಮನೆ ಕಟ್ಟಬಹುದೇ ವಿನಃ, ಅಂತಹ ಸಮಸ್ಯೆ ತಾನಾಗೇ ಬಗೆಹರಿದುಬಿಡುತ್ತವೆ ಎಂದು ಭಾವಿಸಿ ಕೈಕಟ್ಟಿ ಕುಳಿತುಕೊಳ್ಳುವುದು ವಾಸ್ತವ ಎನಿಸದೆ ಹಗಲುಗನಸಾಗುತ್ತದೆ. ತಾನು ಒಂದು ಹೋಟೇಲ್ ಆರಂಭಿಸಿ ಅದರಿಂದ ಬರುವ ಲಾಭದಲ್ಲಿ ಮತ್ತೊಬ್ಬರು ಮಾಡಿದಂತೆ ಇನ್ನೊಂದು, ಮಗದೊಂದು ಹೋಟೇಲ್ ಕಟ್ಟಿಬಿಡುತ್ತೇನೆ ಎಂದುಕೊಳ್ಳುವುದು ವಾಸ್ತವ ಎನಿಸುವುದಿಲ್ಲ. ಬದಲಾಗಿ ಹಾಗೆ ದೊಡ್ಡದಾಗಿ ಬೆಳೆದಿರುವವರು ಏನೆಲ್ಲಾ ಕಷ್ಟಪಟ್ಟಿರಬಹುದು ಎಂದು ಯೋಚಿಸದಿರುವುದು ಅವಾಸ್ತವವಾಗುತ್ತದೆ. ಮಾಣಿಯಾಗಿ ಕೆಲಸಕ್ಕೆ ಸೇರಿ, ಎಲ್ಲಾ ಕೆಲಸ ಕಲಿತ ನಂತರ ಅವರು ಹೋಟೇಲ್ ಆರಂಭಿಸುವ ನಿರ್ಧಾರಕ್ಕೆ ಬಂದಿರುತ್ತಾರೆ. ಇದನ್ನು ಗಮನಿಸದೆ ನಾನೂ ಒಮ್ಮೆಲೆ ಅವರಂತಾಗಿ ಬಿಡುತ್ತೇನೆ ಎಂದು ಹೊರಡುವುದು ಹಗಲುಗನಸಿನ ಉದಾಹರಣೆಯಾಗುತ್ತದೆ. ನಾವು ವಾಸ್ತವಕ್ಕೆ ಹತ್ತಿರವಾಗಬೇಕೇ ವಿನಃ, ಆಗದ್ದರ ಬಗ್ಗೆ ಕನಸು ಕಾಣುತ್ತಾ ಕುಳಿತರೆ ವಾಸ್ತವ ಜಗತ್ತಿನಿಂದ ದೂರವಾಗಿ ಯಾರಿಗೂ ಬೇಡದವರಾಗಿಬಿಡುತ್ತೇವೆ. ಈ ಬಗ್ಗೆ ಎಚ್ಚರ ವಹಿಸುವುದು ಸೂಕ್ತ. ಏನೇ ಆದರೂ ಸಾಧಿಸುವ ಮನಸ್ಸು ಹಾಗೂ ದಾರಿಯನ್ನು ನಾವೇ ಕಂಡುಕೊಳ್ಳಬೇಕು..

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ
ಶುಕ್ರವಾರ
9-9-2022

ಬೆಳ್ಳಿ ಬೆಳಕು

ಸತ್ಯಮೂರ್ತಿ ತೋಳಹುಣಸೆ



ಇಂದಿನಿಂದ ಪುನೀತ್-ಪ್ರಭುದೇವಾ ಸಂಗಮದ ಲಕ್ಕಿಮ್ಯಾನ್

ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಹಾಗೂ ಪ್ರಭುದೇವಾ ಮೊದಲ ಬಾರಿಗೆ ಒಟ್ಟಿಗೆ ಕಾಣಿಸಿಕೊಂಡಿರುವ "ಲಕ್ಕಿ ಮ್ಯಾನ್" ಚಿತ್ರ ಇಂದಿನಿಂದ ರಾಜ್ಯಾದ್ಯಂತ ಅಲ್ಲದೆ ದೇಶ- ವಿದೇಶಗಳಲ್ಲೂ ಸಹ ಅದ್ದೂರಿಯಾಗಿ ತೆರೆಕಾಣಲಿದೆ. ತನ್ನ ಕೊನೇ ಚಿತ್ರದಲ್ಲಿ ಪುನೀತ್ ರಾಜ್‌ಕುಮಾರ್ ಅವರು ಭಗವಾನ್ ಮಹಾವಿಷ್ಣು ಅವತಾರದಲ್ಲಿ ಕಾಣಿಸಿಕೊಂಡಿರುವುದು ಈ ಸಿನಿಮಾದ ವಿಶೇಷ. ಡಾರ್ಲಿಂಗ್ ಕೃಷ್ಣ, ಸಂಗೀತಾ ಶೃಂಗೇರಿ ಹಾಗೂ ರೋಶನಿ ಪ್ರಕಾಶ್ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ.

ಅಣ್ಣಾವ್ರ ಮೇಲೆ ರಚಿಸಲಾಗಿರುವ ಪುನೀತ್-ಪ್ರಭುದೇವಾ ಅಭಿನಯದ ಹಾಡಿಗೆ ಜಾನಿ ಮಾಸ್ಟರ್ ನೃತ್ಯ ನಿರ್ದೇಶನ ಮಾಡಿದ್ದಾರೆ. ಅಲ್ಲದೆ ಈ ಚಿತ್ರಕ್ಕೆ ಮೊದಲ ಬಾರಿಗೆ ಪ್ರಭುದೇವಾ ಸಹೋದರ ನಾಗೇಂದ್ರ ಪ್ರಸಾದ್ ಆಕ್ಷನ್‌ಕಟ್ ಹೇಳಿದ್ದಾರೆ. ತಮಿಳಿನ ಓಮೈ ಕಡವುಲೆ ಚಿತ್ರದ ರೀಮೇಕ್ ಆದ ಲಕ್ಕಿಮ್ಯಾನ್ ಚಿತ್ರದಲ್ಲಿ ರಂಗಾಯಣ ರಘು, ಸಾಧುಕೋಕಿಲ, ನಾಗಭೂಷಣ್, ಸುಂದರ್‌ರಾಜ್, ಸುಧಾ ಬೆಳವಾಡಿ, ಮಾಳವಿಕಾ ನಟಿಸಿದ್ದಾರೆ. ಈ ಚಿತ್ರಕ್ಕೆ ಕಾರ್ತಿಕೇಯನ್ ಕ್ರಿಯೇಟಿವ್ ಪ್ರೊಡ್ಯೂಸರ್ ಆಗಿ ಕೆಲಸ ಮಾಡಿದ್ದಾರೆ. ಚಿತ್ರದ ಹಾಡುಗಳಿಗೆ ವಿ2 ವಿಜಯ್ ಮತ್ತು ವಿಕ್ಕಿ ಅವರ ಸಂಗೀತ ಸಂಯೋಜನೆ, ಧನಂಜಯ ರಂಜನ್ ಅವರ ಸಾಹಿತ್ಯವಿದೆ, ಜೀವಾಶಂಕರ್ ಅವರ ಛಾಯಾಗ್ರಹಣ, ಬಾಲಾಜಿ ಅವರ ಸಂಕಲನ, ಅಶ್ವಥ್ ಮಾರಿಮುತ್ತು ಅವರ ಕಥೆ, ಮಂಜು ಮಾಂಡವ್ಯ, ಸಂಪತ್ ಸಿರಿಮನೆ ಹಾಗೂ ರಘು ನಂದನ್ ಕಾನಡ್ಕ ಅವರ ಸಂಭಾಷಣೆ ಈ ಚಿತ್ರಕ್ಕಿದೆ.



ಹಾಟ್‌ಲುಕ್‌ನಲ್ಲಿ ಮೌನಿ ರಾಯ್



ಕಿರೀಟಿ ಸೆಟ್‌ನಲ್ಲಿ ಶಿವಣ್ಣ

ಮಾಜಿ ಸಚಿವ ಜನಾರ್ಧನ ರೆಡ್ಡಿ ಪುತ್ರ ಕಿರೀಟಿ ಅಭಿನಯದ ಹೊಸ ಚಿತ್ರದ ಚಿತ್ರೀಕರಣ ಈಗ ಮಾನ್ಯತಾ ಟೆಕ್ ಪಾರ್ಕ್‌ನಲ್ಲಿ ನಡೆಯುತ್ತಿದೆ.

ಇನ್ನೂ ಹೆಸರಿಡದ ಈ ಚಿತ್ರವನ್ನು ವಾರಾಹಿ ಫಿಲ್ಮಂ ಪ್ರೊಡಕ್ಷನ್ ಕನ್ನಡ ಹಾಗೂ ತೆಲುಗು ಭಾಷೆಯಲ್ಲಿ ಅದ್ಧೂರಿಯಾಗಿ ನಿರ್ಮಾಣ ಮಾಡುತ್ತಿದೆ. ರಾಧಾಕೃಷ್ಣ ರೆಡ್ಡಿ ಅವರ ನಿರ್ದೇಶನದ ಈ ಚಿತ್ರ ಅದ್ಧೂರಿಯಾಗಿ ಮುಹೂರ್ತ ನೆರವೇರಿಸಿಕೊಂಡು ಶೂಟಿಂಗ್ ಅಖಾಡಕ್ಕೆ ಧುಮುಕಿ ಬ್ರೇಕ್ ತೆಗೆದುಕೊಳ್ಳದೇ ನಿರಂತರವಾಗಿ ಚಿತ್ರೀಕರಣ ನಡೆಸುತ್ತಿದೆ. ಸದ್ಯ ಬೆಂಗಳೂರಿನ ಹಾಗವಾರದ ಮ್ಯಾನತಾ ಟೆಕ್ ಪಾರ್ಕ್‌ನಲ್ಲಿ ಚಿತ್ರದ ಶೂಟಿಂಗ್ ನಡೆಯುತ್ತಿದ್ದು, ಈ ಶೂಟಿಂಗ್ ಸೆಟ್‌ಗೆ ನಟ ಶಿವಣ್ಣ ಸರ್ಪ್ರೈಸ್ ಆಗಿ ವಿಸಿಟ್ ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ಕಿರೀಟಿ ಹಾಗೂ ಜೆನಿಲಿಯಾ ಭಾಗದ ಚಿತ್ರೀಕರಣ ನಡೆಯುತ್ತಿತ್ತು. ಅಲ್ಲಿಯೇ ಕೆಲ ಸಮಯ ಕಳೆದ ಶಿವಣ್ಣ, ಇಡೀ ತಂಡಕ್ಕೆ ಒಳ್ಳೆದಾಗಲಿ ಎಂದು ಶುಭ ಹಾರೈಸಿದರು. ಇದೇ ತಿಂಗಳ 29ಕ್ಕೆ ಕಿರೀಟಿ ಹುಟ್ಟುಹಬ್ಬವಿದ್ದು, ಅಂದೇ ಚಿತ್ರದ ಟೈಟಲ್ ವಿಡಿಯೋ ಝಲಕ್ ಬಿಡುಗಡೆಯಾಗುತ್ತಿದೆ. ಈ ಚಿತ್ರಕ್ಕೆ ದೇವಿಶ್ರೀ ಪ್ರಸಾದ್ ಸಂಗೀತ ನೀಡುತ್ತಿದ್ದು, ಬಾಹುಬಲಿ ಖ್ಯಾತಿಯ ಕೆ.ಸೆಂಥಿಲ್ ಕುಮಾರ್ ಛಾಯಾಗ್ರಹಣ ಮಾಡುತ್ತಿದ್ದಾರೆ.



'ರೂಪಾಯಿ' ಹಣದ ಹಿಂದೆ ಬಿದ್ದವರ ಹಾಡು ಪಾಡು

ಹಣದ ಹಿಂದೆ ಬಿದ್ದ ಮಧ್ಯಮ ವರ್ಗದ ಯುವಕರ ಕಥೆ ಹೇಳುವ ಚಿತ್ರ ರೂಪಾಯಿ. ವಿಜಯ್ ಜಗದಾಲ್ ಅವರ ನಿರ್ದೇಶನವಿರುವ ಈ ಚಿತ್ರ ಇನ್ನೇನು ಬಿಡುಗಡೆಯ ಹಂತ ತಲುಪಿದೆ. ಈ ಚಿತ್ರಕ್ಕಾಗಿ ಅನನ್ಯಭಟ್ ಹಾಡಿದ ಗೀತೆಯೊಂದರ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನೆರವೇರಿತು, ನಿರ್ದೇಶಕ ವಿಜಯ್ ಜಗದಾಲ್ ಅವರೇ ನಾಯಕನಾಗಿ ಕಾಣಿಸಿಕೊಂಡಿರುವ ಈ ಚಿತ್ರದಲ್ಲಿ ಕೃಷಿ ತಾಪಂಡ, ಯಶ್ವಿಕ್, ಚಂದನ ರಾಘವೇಂದ್ರ, ರಾಮ್‌ಚಂದನ್, ಪ್ರಮೋದ್ ಶೆಟ್ಟಿ ಮುಂತಾದವರು ಅಭಿನಯಿಸಿದ್ದಾರೆ. ರೂಪಾಯಿ ಚಿತ್ರದಲ್ಲಿ ಒಟ್ಟು 5 ಹಾಡುಗಳಿದ್ದು, ಆನಂದರಾಜಾ ವಿಕ್ರಮ್ ಅವರು ಮ್ಯೂಸಿಕ್ ಕಂಪೋಜ್ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕ ವಿಜಯ್, ಕೋವಿಡ್‌ಗೂ ಮುನ್ನವೇ ನಮ್ಮ ಚಿತ್ರ ರಿಲೀಸ್‌ಗೆ ರೆಡಿಯಾಗಿತ್ತು ಕಾಮಿಡಿ ಲವ್, ಆಕ್ಷನ್ ಜೊತೆಗೆ ಮನರಂಜನಾತ್ಮಕ ಕಥೆ ಈ ಚಿತ್ರದಲ್ಲಿದ್ದು, ಈ ಹಾಡಿನಿಂದ ಚಿತ್ರದ ಪ್ರಚಾರವನ್ನು ಶುರು ಮಾಡುತ್ತಿದ್ದೇವೆ. ಹಣದ ಅವಶ್ಯಕತೆಯಿರುವ ಐದು ಜನರ ಜೀವನದ ಹಾದಿಯನ್ನು ಈ ಚಿತ್ರದಲ್ಲಿ ಹೇಳುವ ಪ್ರಯತ್ನ ಮಾಡಿದ್ದೇವೆ ಎಂದರು.

ಚಿತ್ರದ ಶೇ.80ರಷ್ಟು ಭಾಗದ ಕಥೆ ಹೊರಾಂಗಣದಲ್ಲೇ ನಡೆದರೆ, ಇಪ್ಪತ್ತರಷ್ಟು ಮಾತ್ರ ಮಾತ್ರ ಒಳಾಂಗಣದಲ್ಲಿ ನಡೆಯುತ್ತದೆ. ರೂಪಾಯಿ ಚಿತ್ರವನ್ನು ಮಂಜುನಾಥ್ ಎಂ. ಹಾಗೂ ಹರೀಶ್ ಸೇರಿ ನಿರ್ಮಾಣ ಮಾಡಿದ್ದಾರೆ. ಅಲ್ಲದೆ ನಟಿ ಚಂದನಾ ರಾಘವೇಂದ್ರ ಅವರು ಈ ಚಿತ್ರದಲ್ಲಿ ಒಬ್ಬ ಸೆಕ್ಸ್‌ವರ್ಕರ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.




ಒಂದೇ ಮನೆಯಲ್ಲಿ ನಡೆಯುವ ಹಾರರ್ ಕಥೆ ರಿಯಾ

ಒಂದೇ ಮನೆಯಲ್ಲಿ ನಡೆಯುವ ಹಾರರ್ ಕಥಾಹಂದರ ಒಳಗೊಂಡ "ರಿಯಾ" ಚಿತ್ರದ ಟ್ರೇಲರ್ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನೆರವೇರಿತು. ಆಂಧ್ರ ಮೂಲದ ಶಿಕ್ಷಕಿ ವಿಜಯ ನರೇಶ್ ಅವರು ಈ ಚಿತ್ರವನ್ನು ನಿರ್ದೇಶಿಸಿದ್ದು, ಅವರ ಪತಿ ಕಣಿಗೊಂಡ ನರೇಶ್ ಅವರು ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಕಾರ್ತಿಕ್ ವರ್ಣೇಕರ್ ಹಾಗೂ ಸಾವಿತ್ರಿ ಈ ಚಿತ್ರದ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಬಿಗ್ ಬಾಸ್ ಪ್ರಥಮ್ ಹಾಗೂ ಸ್ತಬ್ಧ ನಾಯಕ ಪ್ರತಾಪ್ ಸಿಂಹ ಸೇರಿ ಈ ಚಿತ್ರದ ಟ್ರೇಲರ್ ಬಿಡುಗಡೆ ಮಾಡಿದರು. ನಾಯಕ ಕಾರ್ತಿಕ್ ವರ್ಣೇಕರ್, ನಾಯಕಿ ಸಾವಿತ್ರಿ, ಕಲಾವಿದರಾದ ವಿಕಾಸ್, ಶ್ವೇತಾ, ರಾಜ್ ಉದಯ್ ಇವರೆಲ್ಲ ತಮ್ಮ ಪಾತ್ರ ಪರಿಚಯ ಮಾಡಿಕೊಂಡರು. "ರಿಯಾ" ಪಾತ್ರಧಾರಿ ಬೇಬಿ ಅನನ್ಯ ಕೂಡ ತನಗಾದ ಅನುಭವ ಹಂಚಿಕೊಂಡರು. ವಿತರಕರಾದ ಪಿ.ವಿ.ಆರ್ ಸ್ವಾಮಿ, ಚೇತನ್, ಚಿತ್ರತಂಡದ ಸದಸ್ಯರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು. ವೃತ್ತಿಯಲ್ಲಿ ಫೋಟೋಗ್ರಾಫರ್ ಆಗಿರುವ ನಿರ್ಮಾಪಕ ನರೇಶ್ ತಮ್ಮ ಪತ್ನಿಗಾಗಿ ಚಿತ್ರ ನಿರ್ಮಾಣಕ್ಕಿಳಿದಿದ್ದಾರೆ.

ಸಿನಿಪದಬಂಧ-024

ಆಜ್ಞಾದ್ ಜಿ. ಆಚಾರ್ಯ 6361429085



ಹೆಸರು ________________

ವಿಳಾಸ ________________

____

ದೂರವಾಣಿ ಸಂಖ್ಯೆ ________________

ಎಡದಿಂದ ಬಲಕ್ಕೆ

1. ಅಂಬರೀಶ್-ಪೂನಂ ದಾಸ್ ಗುಪ್ತಾ ಅಭಿನಯದ 1991ರ ಚಿತ್ರ (9)
4. ದರ್ಶನ್-ರಕ್ಷಿತಾ ಅಭಿನಯದ ಓಂ ಪ್ರಕಾಶ್ ರಾವ್ ನಿರ್ದೇಶನದ ಚಿತ್ರ (2)
6. ದರ್ಶನ್-ಅಮೃತಾ ಅಭಿನಯದ ಪಿ ಎನ್ ಸತ್ಯ ನಿರ್ದೇಶನದ ಚಿತ್ರ (2)
7. ಶಿವರಾಜ್ ಕುಮಾರ್-ಚಾರುಲತಾ-ವಿಜಯಲಕ್ಷ್ಮಿ ಅಭಿನಯದ ಚಿತ್ರ (4)
9. ರಾಜಕುಮಾರ್-ಉದಯ ಚಂದ್ರಿಕಾ ಅಭಿನಯದ ಚಿತ್ರ (5)
11. ರಾಜಕುಮಾರ್-ಜಯಂತಿ ಅಭಿನಯದ 1968ರ ಸ್ಪೈ ಥ್ರಿಲ್ಲರ್ ಚಿತ್ರ (5)
14. ರಾಜಕುಮಾರ್-ಕೃಷ್ಣ ಕುಮಾರಿ ಅಭಿನಯದ 1962ರ ಚಿತ್ರ (4)
15. ದೃಶ್ಯ ಸಿನಿಮಾದಲ್ಲಿ ರವಿಚಂದ್ರನ್ ನಾಯಕಿಯ ಹೆಸರಿನ ಪೂರ್ವಾರ್ಧ (2)
16. ವೃತ್ತಿಪರ ನಟರಲ್ಲದವರು ಅಭಿನಯಿಸಿದ ರಾಮರೆಡ್ಡಿ ನಿರ್ದೇಶನದ 2015ರ ಚಿತ್ರ (2)
17. ವಿಷ್ಣುವರ್ಧನ್-ಭವಾನಿ-ಚಂದ್ರಕಲಾ ಅಭಿನಯದ 1975ರ ಚಿತ್ರ (9)

ಮೇಲಿನಿಂದ ಕೆಳಕ್ಕೆ

1. ಕುಮಾರ್ ಬಂಗಾರಪ್ಪ-ಹೀರಾ ಅಭಿನಯದ 1993ರ ಚಿತ್ರ (5)
2. ರಾಗಿ ಹೊಲದಾಗೆ ಖಾಲಿ ಗುಡಿಸಲು-ಎಂಬ ಪ್ರಸಿದ್ಧ ಗೀತೆ ಈ ಚಿತ್ರದ್ದು (3)
3. ಅಂಬರೀಶ್-ಟೈಗರ್ ಪ್ರಭಾಕರ್-ಖುಷ್ಬೂ ಅಭಿನಯದ 1989ರ ಚಿತ್ರ (5)
5. ಇದು ಏಳು ಹೆಜ್ಜೆಗಳ ಸಂಬಂಧ (4)
8. ಜೇನಿನ ಗೂಡು ನಾವೆಲ್ಲ ಬೇರೆ ಆದರೆ ಜೇನಿಲ್ಲ ಎಂಬ ಗೀತೆ ಈ ಚಿತ್ರದ್ದು (2)
10. ರಮ್ಯಕೃಷ್ಣ-ಚಾರುಲತಾ-ಸುಮನ್ ಅಭಿನಯದ ಚಿತ್ರ-ತಲೆಕೆಳಗಾಗಿದೆ. (4)
11. ರಾಮ್ ಕುಮಾರ್-ಉದಯಭಾನು ಅಭಿನಯದ 1997ರ ಚಿತ್ರ (5)
12. ವಿಷ್ಣುವರ್ಧನ್-ಸುಮಲತಾರ ಎಚ್.ಆರ್.ಭಾರ್ಗವ ನಿರ್ದೇಶನದ ಚಿತ್ರ (2)
13. ಹರ್ಷವರ್ಧನ್-ನಿತ್ಯಾ ಅಭಿನಯದ ದ್ವಾರಕೀಶ್ ನಿರ್ದೇಶನದ ಚಿತ್ರ (5)
16. ದರ್ಶನ್-ಶೇರಿನ್ ಅಭಿನಯದ ಚಿತ್ರದ ಕೊನೆಯಕ್ಷರ ಮೊದಲಾಗಿದೆ (3)

ಸಿನಿ ಪದಬಂಧ 023ರ ಸರಿ ಉತ್ತರ

ಪ್ರೇ	ಮೋ	ತ್ಸ	ವ		ಅ	ಮೃ	ತ	ವ	ರ್ಷಿ	ಣಿ
ಮ			ಸಂ		ಮ			ರ್ಧ		
ರಾ	ಟೆ		ತ		ರ			ನ		ಅ
ಗ					ಪ್ರೇ	ಮ್				ತಿ
ಹಾ			ಮು		ಮ		ಹ	ಲೋ	ಯ	ಮ
ಡು			ಕುಂ				ಸೀ			ಧು
ಗೆ	ಜ್ಜೆ	ನಾ	ದ		ಪ		ನಾ			ರ
ಳ				ಹೀ	ರೋ					ಅ
ತಿ		ಮ			ಪ		ಬೆ		ಜಾ	ನು
		ಯೂ			ಕಾ		ಸು			ರಾ
ತ	ವ	ರಿ	ನ	ಸಿ	ರಿ		ಗೆ	ದ್ದ	ಮ	ಗ

ವಿಜೇತರು: ನಾಗರತ್ನ
ವಿಜಯನಗರ 2ನೇ ಹಂತ,
ಮೈಸೂರು ಜಿಲ್ಲೆ - 570017

ತಿಮ್ಮನ ಮೊಟ್ಟೆಗಳು ಚಿತ್ರದ ಶೀರ್ಷಿಕೆ ಬಿಡುಗಡೆ




ಯುಎಸ್‌ಎ ನಿವಾಸಿಯಾದ ಶಿವಮೊಗ್ಗ ಮೂಲದ ಆದರ್ಶ ಅಯ್ಯಂಗಾರ್ ಅವರು ತಾಯ್ನಾಡಿನ ಮೇಲಿನ ಅಭಿಮಾನದಿಂದ ಶ್ರೀಕೃಷ್ಣ ಪ್ರೊಡಕ್ಷನ್ಸ್ ಎಂಬ ನಿರ್ಮಾಣ ಸಂಸ್ಥೆಯನ್ನು ಪ್ರಾರಂಭಿಸಿ, ಕನ್ನಡ ಚಿತ್ರ ನಿರ್ಮಾಣಕ್ಕೆ ಮುಂದಾಗಿದ್ದಾರೆ. ಜೊತೆಗೆ ಗಾಯಕರೂ ಆಗಿರುವ ಆದರ್ಶ ಅವರು ಕೆಲ ಆಲ್ಬಮ್‌ಗಳನ್ನೂ ನಿರ್ಮಿಸಿದ್ದಾರೆ. ರಕ್ಷಿತ್ ತೀರ್ಥಹಳ್ಳಿ ಅವರ ನಿರ್ದೇಶನದಲ್ಲಿ 'ತಿಮ್ಮನ ಮೊಟ್ಟೆಗಳು' ಚಿತ್ರವನ್ನು ಪ್ರಾರಂಭಿಸುತ್ತಿದ್ದು, ಆ ಚಿತ್ರದ ಶೀರ್ಷಿಕೆಯ ಬಿಡುಗಡೆ ಕಾರ್ಯಕ್ರಮ ಕಲಾವಿದರ ಸಂಘದ ಆವರಣದಲ್ಲಿ ನಡೆಯಿತು. ಸಾಹಿತಿ ಕವಿರಾಜ್, ಪ್ರವೀಣ್‌ತೇಜ್, ನಿರ್ದೇಶಕ ರಾಮೇನಹಳ್ಳಿ ಜಗನ್ನಾಥ ಮುಖ್ಯ ಅತಿಥಿಗಳಾಗಿ ಆಗಮಿಸಿ ಚಿತ್ರಕ್ಕೆ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಆದರ್ಶ್ ಅಯ್ಯಂಗಾರ್, ಈ ಹಿಂದೆ ನಾನು, ರಕ್ಷಿತ್ ಹಾಗೂ ಹೇಮಂತ್ ಜೋಯಿಸ್ ಜೊತೆಗೂಡಿ ಕೆಲವು ವಿಡಿಯೋ ಹಾಡುಗಳನ್ನು ರಚಿಸಿ ಬಿಡುಗಡೆ ಮಾಡಿದ್ದೆವು. ಆ ಹಾಡುಗಳ ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಪ್ರಯತ್ನ ಕೂಡ ಮಾಡಲಾಗಿತ್ತು. ಈಗ ನಾನು ಆರಂಭಿಸಿರುವ ಶ್ರೀಕೃಷ್ಣ ಪ್ರೊಡಕ್ಷನ್ಸ್ ನಿರ್ಮಾಣ ಸಂಸ್ಥೆಯ ಮೂಲಕ ಸದಭಿರುಚಿಯ ಚಲನಚಿತ್ರಗಳನ್ನು ನಿರ್ಮಿಸಬೇಕೆಂಬ ಉದ್ದೇಶವಿದೆ. ಇದರ ಮೊದಲ ಪ್ರಯತ್ನವಾಗಿ ತಿಮ್ಮನ ಮೊಟ್ಟೆಗಳು ಚಿತ್ರವನ್ನು ನಿರ್ಮಿಸುತ್ತಿದ್ದೇನೆ, ಈ ಚಿತ್ರಕ್ಕೆ ರಕ್ಷಿತ್ ತೀರ್ಥಹಳ್ಳಿ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ ಎಂದು ಹೇಳಿದರು.

ನಂತರ ಮಾತನಾಡಿದ ರಕ್ಷಿತ್, 2016ರಲ್ಲಿ ಅರಣ್ಯ ಒತ್ತುವರಿ ಮತ್ತು ರೈತರನ್ನು ಒಕ್ಕಲೆಬ್ಬಿಸುವ ಕಥೆಯಿದ್ದ ಹೊಂಬಣ್ಣ ಎಂಬ ಚಿತ್ರವನ್ನು ನಿರ್ದೇಶಿಸಿದ್ದೆ. ಆನಂತರ ಶರಾವತಿ ನೀರನ್ನು ಬೆಂಗಳೂರಿಗೆ ತರುವ ಯೋಜನೆಯ ಕುರಿತಾದ 'ಎಂಥಾ ಕಥೆ ಮಾರಾಯ' ಎಂಬ ಚಿತ್ರವನ್ನು ನಿರ್ದೇಶಿಸಿದ್ದು, ಆ ಚಿತ್ರವೀಗ ಬಿಡುಗಡೆಗೆ ಸಿದ್ಧವಿದೆ. ಈಗ ಮೂರನೇ ಪ್ರಯತ್ನವಾಗಿ ನನ್ನ ಕಾಡಿನ ನೆಂಟರು ಕಥಾಸಂಕಲನದ ಒಂದು ಕಥೆಯನ್ನಿಟ್ಟುಕೊಂಡು 'ತಿಮ್ಮನ ಮೊಟ್ಟೆಗಳು' ಚಿತ್ರವನ್ನು ನಿರ್ದೇಶಿಸಲಿದ್ದೇನೆ. ನನ್ನ ಎಲ್ಲಾ ಚಿತ್ರಗಳಲ್ಲೂ ಪಶ್ಚಿಮ ಘಟ್ಟದ ಜನರ ಜೀವನ ಶೈಲಿಯ ಮೇಲೆ ಬೆಳಕು ಚೆಲ್ಲಲಾಗುತ್ತೆ. ಇಲ್ಲಿಯೂ ಸಹ ಒಂದಷ್ಟು ಹೊಸ ವಿಷಯಗಳನ್ನು ಹೇಳಹೊರಟಿದ್ದೇನೆ. ಸದ್ಯದಲ್ಲೇ ಚಿತ್ರದ ಚಿತ್ರೀಕರಣವನ್ನು ಆರಂಭಿಸುತ್ತಿದ್ದೇವೆ ಎಂದು ತಿಳಿಸಿದರು. ಅಲ್ಲದೆ ಈ ಚಿತ್ರದ ಹಾಡುಗಳು ಹಾಗೂ ಸಂಗೀತ ಕುರಿತಾಗಿ ಸಂಗೀತ ನಿರ್ದೇಶಕ ಹೇಮಂತ್ ಜೋಯಿಸ್ ಮಾತನಾಡಿದರು.

ಸಿನಿಮಾಸಕ್ತರಿಗಾಗಿ ಕಲಾಸಾಮ್ರಾಟ್ ಫಿಲಂ ಅಕಾಡೆಮಿ



ಕನ್ನಡ ಚಿತ್ರರಂಗಕ್ಕೆ ಸಾಕಷ್ಟು ಯಶಸ್ವಿ ಚಿತ್ರಗಳನ್ನು ಕೊಟ್ಟ ಹಿರಿಯ ನಿರ್ದೇಶಕ ಕಲಾಸಾಮ್ರಾಟ್ ಎಸ್.ನಾರಾಯಣ್ ಅವರ ಪುತ್ರ ಪವನ್ ಚಿತ್ರರಂಗದಲ್ಲಿ ತೊಡಗಿಸಿಕೊಳ್ಳಬೇಕೆಂಬ ಆಸೆಯುಳ್ಳ ಯುವಕ, ಯುವತಿಯರಿಗಾಗಿ ತರಬೇತಿ ಕೇಂದ್ರವೊಂದನ್ನು ಪ್ರಾರಂಭಿಸಿದ್ದಾರೆ. ಅದರ ಹೆಸರು ಕಲಾಸಾಮ್ರಾಟ್ ಫಿಲಂ ಅಕಾಡೆಮಿ. ಇತ್ತೀಚೆಗೆ ಹಿರಿಯ ನಿರ್ದೇಶಕ ಭಾರ್ಗವ ಅವರು ಈ ಅಕಾಡೆಮಿಯನ್ನು ಉದ್ಘಾಟಿಸಿದರು. ಹಿರಿಯ ನಟರಾದ ಮುಖ್ಯಮಂತ್ರಿ ಚಂದ್ರು, ಸುಂದರರಾಜ್, ವಿ.ಮನೋಹರ್, ಎಂ.ಎನ್. ಸುರೇಶ್, ಆದಿತ್ಯ ಹಾಗೂ ಅದಿತಿ ಪ್ರಭುದೇವ ಸೇರಿದಂತೆ ಅನೇಕ ಗಣ್ಯರು ಈ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ನಾರಾಯಣ್ ಅವರು ನನ್ನನ್ನು ಚೆನ್ನೈನಲ್ಲಿ ಭೇಟಿಯಾಗಿ, ತಮ್ಮ ವೃತ್ತಿಜೀವನ ಆರಂಭಿಸಿದರು. ಕೆಲಸದ ಮೇಲೆ ಅವರಿಗಿರುವ ಶ್ರದ್ಧೆಯಿಂದಲೇ ಅವರು ಇಷ್ಟು ಎತ್ತರಕ್ಕೆ ಬೆಳೆದಿದ್ದಾರೆ. ಈಗ ಅವರ ಮಗ ಫಿಲಂ ಅಕಾಡೆಮಿಯನ್ನು ಆರಂಭಿಸಿದ್ದಾರೆ, ಆತನ ನೂತನ ಪ್ರಯತ್ನಕ್ಕೆ ಒಳ್ಳೆಯದಾಗಲಿ ಎಂದು ನಿರ್ದೇಶಕ ಭಾರ್ಗವ ಅವರು ಹಾರೈಸಿದರು.

ಶಿಕ್ಷಕರ ದಿನಾಚರಣೆಯ ದಿನ ನನ್ನ ಗುರುಗಳಾದ ಭಾರ್ಗವ ಅವರು ನಮ್ಮ ಫಿಲಂ ಅಕಾಡೆಮಿಯನ್ನು ಉದ್ಘಾಟಿಸಿದ್ದು ನನಗೆ ತುಂಬಾ ಖುಷಿಯಾಗಿದೆ. ನನ್ನ ಮಗ ಪವನ್ ನನ್ನ ಜೊತೆಯಿದ್ದು ಚಿತ್ರರಂಗದ ಬಗ್ಗೆ ಸಾಕಷ್ಟು ಅನುಭವ ಪಡೆದುಕೊಂಡಿದ್ದಾನೆ. ಈಗ ಕಲಾಸಾಮ್ರಾಟ್ ಫಿಲಂ ಅಕಾಡೆಮಿಯನ್ನು ಆರಂಭಿಸಿದ್ದಾನೆ. ಈ ಬಗ್ಗೆ ನನ್ನ ಬಳಿ ಪವನ್ ಹೇಳಿದಾಗ, ಕಲಾಸಾಮ್ರಾಟ್ ಎಂಬ ಹೆಸರಿಟ್ಟಿರುವೆ ಆ ಹೆಸರಿಗೆ ಕಳಂಕ ಬರದಂತೆ ನೋಡಿಕೊಳ್ಳುವ ಜವಾಬ್ದಾರಿ ನಿನ್ನದು. ಏಕೆಂದರೆ ಎಸ್.ನಾರಾಯಣ್ ಎನ್ನುವುದು ನನ್ನ ತಂದೆಯಿಟ್ಟ ಹೆಸರು. ಆ ಹೆಸರಿಗೆ ಏನೂ ಆಗಬಾರದು ಎಂದು ಹೇಳಿದ್ದೇನೆ. ಪವನ್ ಸಹ ತುಂಬಾ ಶ್ರದ್ಧೆಯಿಂದ ಸಂಸ್ಥೆಯನ್ನು ನಡೆಸಿಕೊಂಡು ಹೋಗುತ್ತಾನೆ. ನಟನೆ, ನಿರ್ದೇಶನ ಹಾಗೂ ಚಲನಚಿತ್ರದ ಹಲವಾರು ವಿಭಾಗಗಳಲ್ಲಿ ತರಬೇತಿ ನೀಡಲಾಗುವುದು. ಹಲವಾರು ಅನುಭವಿ ಕಲಾವಿದರು ಹಾಗೂ ತಂತ್ರಜ್ಞರು ತಮ್ಮ ಅನುಭವಗಳನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಳ್ಳಲಿದ್ದಾರೆ. ಎಂದು ಎಸ್.ನಾರಾಯಣ್ ಹೇಳಿದರು.

ಮಂಡ್ಯ ಕಚೇರಿ : ನಂ. 1204/1, ಮಹಿಳಾ ಸಮಾಜ ರಸ್ತೆ, 3ನೇ ಕ್ರಾಸ್, ಅಶೋಕನಗರ, ಮಂಡ್ಯ-571404 ದೂ: 222026 (ಕ) ಫ್ಯಾಕ್ಸ್: 08232-222026, ಮೊ: 8762960325. E-Mail : mandya@mysurumithra.com

ಮಂಡ್ಯದ ಚಿನ್ನದ ವ್ಯಾಪಾರಿ ಜಗನ್ನಾಥ್ ಶೆಟ್ಟಿ ಹನಿಟ್ರ್ಯಾಪ್‌ಗೆ ಟ್ವಿಸ್ಟ್

ಬೆಕ್ಕು ಹಾಲು ಹುಡುಕಿಕೊಂಡು ಹೋಯ್ತಾ... ಇಲ್ಲ ಹಾಲು ಇಟ್ಟು ಬೆಕ್ಕನ್ನು ಬೋನಿಗೆ ಹಾಕಲಾಯ್ತಾ...!



ಮೈಸೂರಿನ ಹೋಟೆಲ್‌ನಲ್ಲಿ ಚಿನ್ನದ ವ್ಯಾಪಾರಿ ಜಗನ್ನಾಥ್ ಶೆಟ್ಟಿಯ ಮೇಲೆ ಹಲ್ಲೆ ನಡೆಸುತ್ತಿರುವ ದೃಶ್ಯ

ಸಾಮಾಜಿಕ ಜಾಲತಾಣದಲ್ಲಿ ರಾರಾ... ಸರಸಕೆ ಬಾರಾ ಬಯಲು

ಮಂಡ್ಯ, ಸೆ.8- ಮಂಡ್ಯದ ಚಿನ್ನದ ವ್ಯಾಪಾರಿಯೂ ಆದ ಬಿಜೆಪಿ ಧಾರ್ಮಿಕ ಪ್ರಕೋಷ್ಠದ ಗೌರವಾಧ್ಯಕ್ಷರೂ ಆದ ಜಗನ್ನಾಥ್ ಶೆಟ್ಟಿ ಅವರ ಹನಿಟ್ರ್ಯಾಪ್ ಪ್ರಕರಣಕ್ಕೆ ದೊಡ್ಡ ಟ್ವಿಸ್ಟ್ ದೊರೆತಿದ್ದು, ಅವರು ವಿದ್ಯಾರ್ಥಿನಿಯೋರ್ವಳ ಜೊತೆ ಮಾತನಾಡಿರುವ ಎರಡು ಆಡಿಯೋ ಹಾಗೂ ಆಕೆಯ ಜೊತೆ ಲಾಡ್ಜ್‌ನಲ್ಲಿ ಸಿಕ್ಕಿ ಬಿದ್ದಾಗಿನ ದೃಶ್ಯಾವಳಿಗಳುಳ್ಳ ಮೂರು ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, ಜಗನ್ನಾಥ್ ಶೆಟ್ಟಿ ಪೊಲೀಸರಿಗೆ ದೂರಿನಲ್ಲಿ ಉಲ್ಲೇಖಿಸಿರುವ ಅಂಶಗಳೇ ಒಂದಾದರೇ, ನಡೆದಿರುವುದೇ ಬೇರೆ ಎಂಬುದು ಸ್ಪಷ್ಟವಾಗಿದೆ.

ವಿದ್ಯಾರ್ಥಿನಿಯೋರ್ವಳನ್ನು ಪರಿಚಯ ಮಾಡಿಕೊಂಡಿದ್ದ ಜಗನ್ನಾಥ್ ಶೆಟ್ಟಿ ಆಕೆಗೆ ತಾನು ಹುಬ್ಬಳ್ಳಿಯ ಉಪನ್ಯಾಸಕ ಎಂದು ಪರಿಚಯಿಸಿಕೊಂಡಿದ್ದಾರೆ. ತೀರಾ ಸಲುಗೆಯಿಂದ ವಿದ್ಯಾರ್ಥಿನಿಯ ಜೊತೆ ಮಾತನಾಡಿರುವ ಅವರು ಮೈಸೂರಿನ ದರ್ಶನ್ ಪ್ಯಾಲೇಸ್ ಹೋಟೆಲ್‌ನಲ್ಲಿ 2 ದಿನ ಇಬ್ಬರೂ ಸಂತೋಷದಿಂದ ಕಾಲಕಳೆಯುವ ಬಗ್ಗೆಯೂ ಪ್ರಸ್ತಾಪಿಸಿದ್ದಾರೆ. ನಂತರ ವಿದ್ಯಾರ್ಥಿನಿಯ ಜೊತೆ ಹೋಟೆಲ್ ರೂಮ್‌ನಲ್ಲಿ ಜಗನ್ನಾಥ್ ಶೆಟ್ಟಿ ಟ್ರ್ಯಾಪ್ ಆಗಿದ್ದಾರೆ ಎಂಬುದು ಇದೀಗ ವೈರಲ್ ಆಗಿರುವ ಆಡಿಯೋ ಮತ್ತು ವಿಡಿಯೋಗಳಿಂದ ಬಯಲಾಗಿದೆ.

ಜಗನ್ನಾಥ್ ಶೆಟ್ಟಿ ದೂರು: ಫೆ26ರಂದು ತಾನು ಮೈಸೂರಿನಿಂದ ಮಂಗಳೂರಿಗೆ ಹೋಗಲು ಟಿಕೆಟ್ ಬುಕ್ ಮಾಡಿದ್ದು, ಮೈಸೂರಿಗೆ ತೆರಳಲು ಮಂಡ್ಯದ ಬಸ್ ನಿಲ್ದಾಣದಲ್ಲಿ ನಿಂತಿದ್ದಾಗ ಕಾರಿನಲ್ಲಿ ಬಂದ ಸಲ್ಮಾ ಬಾನು, ಜಯಂತ್ ಸೇರಿದಂತೆ ನಾಲ್ವರು ತನಗೆ ಪರಿಚಯವಿರುವಂತೆ ಮಾತನಾಡಿ, ಮೈಸೂರಿಗೆ ಡ್ರಾಪ್ ಮಾಡುವುದಾಗಿ ಕರೆದೊಯ್ದರು. ಮೈಸೂರು ತಲುಪಿದ ನಂತರ ತಮ್ಮ ಸ್ನೇಹಿತರು ಗೋಲ್ಡ್ ಬಿಸ್ಕತ್ ಮಾರಾಟಕ್ಕೆ ತಂದಿದ್ದಾರೆ. ಅದರ ಅಸಲಿಯತ್ತನ್ನು ನೋಡಿ ಹೇಳುವಂತೆ ತಿಳಿಸಿ, ದರ್ಶನ್ ಪ್ಯಾಲೇಸ್ ಹೋಟೇಲ್‌ಗೆ ಕರೆದೊಯ್ದರು. ಹೋಟೆಲ್‌ನ ಕೊಠಡಿ ಪ್ರವೇಶಿಸಿದಾಗ ಅಲ್ಲಿ ಓರ್ವ ಯುವತಿ ಇದ್ದಳು. ಆಗ ಹಠಾತ್ತನೇ ಸಲ್ಮಾಬಾನು, ಜಯಂತ್ ಜೊತೆ ಇನ್ನೂ ನಾಲ್ವರು ಕೊಠಡಿ ಪ್ರವೇಶಿಸಿದರು. ಅವರಲ್ಲಿ ಓರ್ವ ಯುವತಿಯನ್ನು ತನ್ನ ತಂಗಿಯೆಂದು ಹೇಳಿಕೊಂಡು ನನ್ನ ಮೇಲೆ ಹಲ್ಲೆ ಮಾಡಿ, ಯುವತಿಯೊಂದಿಗೆ ವಿಡಿಯೋ ಕವರೇಜ್ ಮಾಡಿಕೊಂಡು 4 ಕೋಟಿ ರೂ. ನೀಡುವಂತೆಯೂ ಇಲ್ಲದಿದ್ದರೆ ಕೊಲೆ ಮಾಡುವುದಾಗಿಯೂ ಬೆದರಿಕೆ ಹಾಕಿದರು. ರಾತ್ರಿ 2 ಗಂಟೆ ಸುಮಾರಿನಲ್ಲಿ ಮಾತುಕತೆ ಮುಕ್ತಾಯವಾಗಿ ಕೊನೆಗೆ 50 ಲಕ್ಷ ರೂ.ಗಳಿಗೆ ಒಪ್ಪಿಕೊಂಡರು. ತಾನು ತನ್ನ ಸ್ನೇಹಿತರ ಮುಖಾಂತರ ಅವರಿಗೆ 50 ಲಕ್ಷ ರೂ. ನೀಡಿದ ನಂತರ ಮರು ದಿನ ಬೆಳಗ್ಗೆ 11 ಗಂಟೆಗೆ ತನ್ನನ್ನು ಬಿಡುಗಡೆ ಮಾಡಿದರು ಎಂದು ಮಂಡ್ಯ ಪಶ್ಚಿಮ ಠಾಣೆಯಲ್ಲಿ ಘಟನೆ ನಡೆದ 6 ತಿಂಗಳ ನಂತರ ಅಂದರೆ, ಆ.19ರಂದು ದೂರು ಸಲ್ಲಿಸಿದ್ದರು. ಅವರ ದೂರಿನ ಮೇರೆಗೆ ಪೊಲೀಸರು ಸಲ್ಮಾಬಾನು ಹಾಗೂ ಇತರ ಮೂವರನ್ನು ಬಂಧಿಸಿದ್ದರು.

ಏನಿದು ಅಸಲಿಯತ್ತು?: ಇದೀಗ ವೈರಲ್ ಆಗಿರುವ 4.22 ನಿಮಿಷದ ಆಡಿಯೋದಲ್ಲಿ ಜಗನ್ನಾಥ್ ಶೆಟ್ಟಿ ಅವರಿಗೆ ಯುವತಿಯೋರ್ವಳು ಕರೆ ಮಾಡಿ, 'ಏನ್ ಸರ್, 8.30ರ ಸುಮಾರಿಗೆ ಫೋನ್ ಮಾಡುವುದಕ್ಕೆ ತಿಳಿಸಿದ್ದೀರಲ್ಲ, ಏನೋ ಅರ್ಜೆಂಟ್ ಇರಬೇಕು ಅನ್ಕೊಂಡಿದ್ದೆ' ಎಂದಾಗ ಶೆಟ್ಟಿ ಅವರು, 'ಏನಿಲ್ಲಾಪ್ಪ ನಿಮ್ಮ ಜೊತೆ ಲವ್ಲಿಯಾಗಿ ಮಾತನಾಡಬೇಕು ಅಂತಾ' ಎಂದು ಹೇಳಿದ ನಂತರ ಶನಿವಾರ ಆಗುತ್ತಾ ಎಂದು ಕೇಳುತ್ತಾರೆ. ಅದಕ್ಕೆ ಆಕೆ 26ನೇ ತಾರೀಖು ಎಂದು ಕೇಳಿದಾಗ ಶೆಟ್ಟಿ ಅವರು, ಹೌದು, ಶನಿವಾರ ರಾತ್ರಿ ಮೈಸೂರಿಗೆ ಬರುತ್ತೇನೆ, ಐಷಾರಾಮಿ ಹೋಟೆಲ್‌ನಲ್ಲಿ ರೂಮ್ ಮಾಡೋಣ. ಸೋಮವಾರ ಬೆಳಗ್ಗೆ ರೂಮ್ ಖಾಲಿ ಮಾಡೋಣ, ಎರಡು ರಾತ್ರಿ ಒಂದು ಹಗಲು ನೀವು ನಮ್ಮ ಜೊತೆ ಎಂದು ಹೇಳುತ್ತಾರೆ. ಆಗ ಯುವತಿಯೂ ಬುಕ್ಸ್ ತರುತ್ತೀರಾ ಸರ್ ಎಂದಾಗ ಬುಕ್ಸ್ ಬೇಕಾ? ಎಂದು ಕೇಳುತ್ತಾರೆ. ನೀವು ಪಾಠ ಮಾಡುತ್ತೇನೆ ಅಂತ ಹೇಳಿದರಲ್ಲ? ಎಂದು ಆಕೆ ಪ್ರಶ್ನಿಸಿದಾಗ, ಪಾಠ ಮಾಡುವುದಕ್ಕೆ ಬುಕ್ಸ್ ಏನಕ್ಕೆ ಹಾಗೇ ಮಾಡುತ್ತೇನೆ, ಯಾವ ಪಾಠ ಬೇಕು? ಭಾರತದ ಪಾಠ ಬೇಕಾ?, ಭಾರತ-ನೆರೆಯ ರಾಷ್ಟ್ರಗಳು ಶ್ರೀಲಂಕಾ ತರ ಬೇಕಾ?, ಭಾರತ ವಿಭಜನೆಯ ಪಾಠ ಬೇಕಾ ಎಂದು ನುಲಿಯುತ್ತಲೆ ಶೆಟ್ಟಿ ಕೇಳಲಾಗಿ ಆಕೆ ಎಲ್ಲಾ ಪಾಠನೂ ಮೈಂಡ್‌ನಲ್ಲೇ ಇದೇಯಾ? ಎಂದು ಪ್ರಶ್ನಿಸಿದಾಗ ಇಲ್ಲದೇ ಇರುತ್ತದಾ, ಪಾಠ ಮಾಡುತ್ತಲೇ ಇರುತ್ತೇವಲ್ಲಾ... ಲವ್ ಪಾಠ, ಸೆಕ್ಷುಯಲ್ ಪಾಠ ಎಲ್ಲಾ ಮಾಡುತ್ತೇನೆ... ಬೇಗ ಶನಿವಾರ ಬರಲಿ ಎಂದು ಹೇಳುತ್ತಾರೆ.

ಇದಾದ ನಂತರ ಯುವತಿಯೊಂದಿಗಿನ ಶೆಟ್ಟಿ ಅವರ 12.21 ನಿಮಿಷದ ಆಡಿಯೋದಲ್ಲಿ ಮೊದಲಿಗೆ ಯುವತಿಯೂ ಚಿಕ್ಕಪ್ಪ ಇದ್ದುದ್ದರಿಂದ ಫೋನ್ ರಿಸೀವ್ ಮಾಡಿಲ್ಲ ಎಂದು ಮಾತು ಆರಂಭಿಸುತ್ತಾಳೆ, ಆಗ ಕುಶಲೋಪರಿ ವಿಚಾರಿಸಿದ ನಂತರ ಶೆಟ್ಟಿ, ಶನಿವಾರ ರಾತ್ರಿ 9.30ಕ್ಕೆ ಮೈಸೂರು ಬಸ್ ಸ್ಟ್ಯಾಂಡಿಗೆ ಬರುವುದಾಗಿ ತಿಳಿಸುತ್ತಾರೆ, ಲೇಟ್ ಆಗುತ್ತದೆ ನಾನು ಸಂಜೆಯೇ ಮನೆ ಬಿಡುತ್ತೇನೆ ಎಂದು ಯುವತಿ ಹೇಳಿದಾಗ, ಬಸ್ ಸ್ಟ್ಯಾಂಡ್‌ನಲ್ಲಿಯೇ ಕುಳಿತಿರಿ. ನೀವು ಟೂರಿಸ್ಟ್ ಅಲ್ಲವಾ? ಎಂದು ಶೆಟ್ಟಿ ಕೇಳುತ್ತಾರೆ. ಅಲ್ಲ ಸರ್... ಚಿಕ್ಕಪ್ಪ ಏನಾದರೂ ನೋಡಿ ಬಿಟ್ಟರೆ ಎಂದು ಯುವತಿ ಹೇಳಿದ ನಂತರ ಆದಷ್ಟು ಬೇಗನೇ ಬರುತ್ತೇನೆ ಎಂದು ಶೆಟ್ಟಿ ತಿಳಿಸುತ್ತಾರೆ. ಯಾವ ಹೋಟೆಲ್‌ನಲ್ಲಿ ರೂಮ್ ಮಾಡಬೇಕು ಎಂಬುದರ ಬಗ್ಗೆಯೂ ಚರ್ಚೆ ನಡೆಯುತ್ತದೆ. ದರ್ಶನ್ ಪ್ಯಾಲೇಸ್ ಹೋಟೆಲ್ ಅನ್ನು ಶೆಟ್ಟಿ ಪ್ರಸ್ತಾಪಿಸಿದಾಗ ಆಕೆ ಒಪ್ಪುತ್ತಾಳೆ. ಈ ಸಂಭಾಷಣೆಯಲ್ಲಿ ಶೆಟ್ಟಿ ಕೆಲ ವಾಕ್ಯಗಳನ್ನು ರಸವತ್ತಾಗಿ ಮಾತನಾಡುತ್ತಾರೆ. ಅಲ್ಲದೇ ಮೈಸೂರಿನಲ್ಲಿ ಬಾಡಿಗೆ ಮನೆ ಮಾಡುವಂತೆ ಯುವತಿಗೆ ಶೆಟ್ಟಿ ಸಲಹೆ ನೀಡುತ್ತಾರೆ. ಮನೆ ಹೇಗೆ ಇರಬೇಕು? ಏನೇನು ಸೌಲಭ್ಯಗಳಿರಬೇಕು? ಎಂಬುದನ್ನು ಕೂಡ ವಿವರಿಸುವ ಅವರು, ಮನೆ ಮಾಡಿದರೆ ವಾರಕ್ಕೊಮ್ಮೆ ತಾನು ಬಂದು- ಹೋಗಬಹುದು ಎಂದು ತಿಳಿಸುತ್ತಾರೆ.

ವಿಡಿಯೋ: ಜಗನ್ನಾಥ್ ಶೆಟ್ಟಿ ಮತ್ತು ಯುವತಿ ಕೊಠಡಿಯಲ್ಲಿರುವಾಗ ಏಕಾಏಕಿ ಮೂವರು ಕೊಠಡಿ ಪ್ರವೇಶಿಸುತ್ತಾರೆ. ಆಗ ಶೆಟ್ಟಿ ಅರೆನಗ್ನಾವಸ್ಥೆಯಲ್ಲಿ ಮಂಚದ ಮೇಲೆ ಕುಳಿತಿದ್ದರೆ, ಯುವತಿ ಕುರ್ಚಿ ಮೇಲೆ ಕುಳಿತಿರುತ್ತಾಳೆ. ಹಠಾತ್ತಾನೆ ನುಗ್ಗಿದ ತಂಡದಲ್ಲಿ ಓರ್ವ ಮೊದಲಿಗೆ ಯುವತಿಯ ತಲೆ ಮೇಲೆ ಹೊಡೆದು, ನೀನು ಎಲ್ಲಿಗೆ ಹೋಗುತ್ತೇನೆ ಎಂದು ಹೇಳಿ ಬಂದೆ? ಎಂದು ಪ್ರಶ್ನಿಸಿದಾಗ ಆತನನ್ನು ಅಣ್ಣ ಎಂದು ಸಂಬೋಧಿಸಿ, ಫ್ರೆಂಡ್ ಮನೆಗೆ ಎಂದು ಹೇಳುತ್ತ ಇವರು ಪಾಠ ಹೇಳಿಕೊಡಲು ಬಂದಿದ್ದಾರೆ ಎಂದು ಹೇಳುತ್ತಾಳೆ. ಯುವತಿಯನ್ನು ಹೊಡೆದ ನಂತರ ಸದರಿ ವ್ಯಕ್ತಿ ಹಾಗೂ ಇನ್ನೋರ್ವ ಶೆಟ್ಟಿಯ ಮೇಲೂ ಹಲ್ಲೆ ನಡೆಸುತ್ತಾರೆ. ಆ ವೇಳೆ ಯುವತಿಯೂ ಚಿಕ್ಕಪ್ಪ ಎಂದು ಓರ್ವನನ್ನು ಸಂಬೋಧಿಸಿ, ತಡೆಯಲು ಹೋಗಿ ಏಟು ತಿನ್ನುತ್ತಾಳೆ. ಆಗ ಯಾವ ಕಾಲೇಜಿನ ಉಪನ್ಯಾಸಕ? ಎಂದು ಅಪರಿಚಿತರು ಪ್ರಶ್ನಿಸಿದಾಗ ಶೆಟ್ಟಿ, ಹುಬ್ಬಳ್ಳಿ ಎಂದು ಹೇಳುತ್ತಾರೆ. ಅವರಿಂದ ಏಟು ತಿನ್ನುತ್ತಾ ತಪ್ಪಾಗಿದೆ ಎಂದು ಕಾಲಿಗೆ ಬೀಳುತ್ತಾರೆ. ಒಂದು ಹಂತದಲ್ಲಿ ನೀವು ಹೀಗೆ ಮಾಡಿದರೆ, ನೇಣು ಹಾಕಿಕೊಳ್ಳುತ್ತೇನೆ ಎಂದು ಕೂಡ ಶೆಟ್ಟಿ ಹೇಳುತ್ತಾರೆ. ಆನಂತರ ಜನಪರ ವೇದಿಕೆಯ ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ಸಲ್ಮಾ ಬಾನು ಪ್ರವೇಶವಾಗುತ್ತದೆ. ಆಕೆ, ಜಗನ್ನಾಥ್ ಶೆಟ್ಟಿ ಯಾರು ಎಂಬುದನ್ನು ವಿಡಿಯೋ ಕ್ಯಾಮರಾ ಮುಂದೆ ಅನಾವರಣ ಮಾಡುತ್ತಾಳೆ. 'ಇವನು ಮಂಡ್ಯದ ಶ್ರೀನಿಧಿ ಗೋಲ್ಡ್ ಮಾಲೀಕ, ಬಿಜೆಪಿ ಲೀಡರ್. ಹುಡುಗಿಗೆ ಕೆಲಸ ಕೊಡಿಸುತ್ತೇನೆ ಎಂದು ನಂಬಿಸಿ, ರೂಮ್‌ಗೆ ಕರೆತಂದಿದ್ದಾನೆ' ಎಂದು ಆರೋಪಿಸುವ ಆಕೆ, ಶೆಟ್ಟಿ ಅವರನ್ನು ಮನಬಂದಂತೆ ನಿಂದಿಸುತ್ತಾಳೆ. ಮೀಡಿಯಾದವರನ್ನು ಕರೆಯುತ್ತೇನೆಂದು ಬೆದರಿಸುತ್ತಾಳೆ. ಶೆಟ್ಟಿ ಅವರಂತೂ ಭಯಭೀತರಾಗಿ ಆಕೆಯ ಬಳಿಯೂ ಬಿಟ್ಟುಬಿಡುವಂತೆ ಗೋಗರೆಯುತ್ತಾರೆ. ಇದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿರುವ ವಿಡಿಯೋ ಹಾಗೂ ಆಡಿಯೋ ಸಾರಾಂಶ.

ಒಂದಂತೂ ನಿಜ, ಜಗನ್ನಾಥ್ ಶೆಟ್ಟಿ ಹನಿಟ್ರ್ಯಾಪ್‌ಗೆ ಒಳಗಾಗಿದ್ದಾರೆ. ಇವರಿಗೆ ಯುವತಿಯ ಸಂಪರ್ಕ ಕೊಟ್ಟವರು ಯಾರು? ಯುವತಿ ಮತ್ತು ಶೆಟ್ಟಿ ನಡುವೆ ಎಷ್ಟು ದಿನಗಳ ಬಾಂಧವ್ಯವಿತ್ತು. ಯುವತಿಯ ಮೊದಲ ಭೇಟಿಯಲ್ಲಿಯೇ ಶೆಟ್ಟಿ ಟ್ರ್ಯಾಪ್ ಆದರಾ? ಅಥವಾ ಈ ಹಿಂದೆಯೂ ಆಕೆಯನ್ನು ಅವರು ಭೇಟಿ ಮಾಡಿದ್ದರಾ? ಎಂಬುದು ಪ್ರಶ್ನೆಗಳಾಗಿಯೇ ಉಳಿದಿವೆ.

ಮಾಜಿ ಶಾಸಕ ಕೆ.ಕೆಂಪೇಗೌಡ ನಿಧನ



- ಸಾರ್ವಜನಿಕರು, ಬೆಂಬಲಿಗರು, ಗಣ್ಯರಿಂದ ಅಂತಿಮ ದರ್ಶನ
- ಚಿನಕುರುಳಿ ಗ್ರಾಮದ ಜಮೀನಿನಲ್ಲಿ ಅಂತ್ಯಕ್ರಿಯೆ



ಮಾಜಿ ಶಾಸಕ ಕೆ.ಕೆಂಪೇಗೌಡ ಅಂತಿಮ ದರ್ಶನ ಪಡೆದ ಶಾಸಕ ಜಿ.ಟಿ.ದೇವೇಗೌಡ.

ಚಿನಕುರಳಿ, ಸೆ.8- ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ಪಾಂಡವಪುರ ತಾಲೂಕಿನ ಚಿನಕುರಳಿ ಗ್ರಾಮದ ಮಾಜಿ ಶಾಸಕ ಕೆ.ಕೆಂಪೇಗೌಡ(96) ಬುಧವಾರ ರಾತ್ರಿ ನಿಧನರಾದರು.

ಕಳೆದ ಹಲವು ವರ್ಷಗಳಿಂದ ವಯೋಸಹಜ ಅನಾರೋಗ್ಯಕ್ಕೆ ಒಳಗಾಗಿದ್ದ ಕೆ.ಕೆಂಪೇಗೌಡರು ಚಿನಕುರಳಿ ಗ್ರಾಮದ ಹೊರವಲಯದ ತಮ್ಮ ನಿವಾಸದಲ್ಲಿ ವಾಸವಿದ್ದರು. ಬುಧವಾರ ರಾತ್ರಿ ಅವರ ಆರೋಗ್ಯದಲ್ಲಿ ಏರುಪೇರು ಉಂಟಾಗಿ ತಮ್ಮ ನಿವಾಸದಲ್ಲಿಯೇ ಕೊನೆಯುಸಿರೆಳೆದಿದ್ದಾರೆ.

ಗುರುವಾರ ಮಧ್ಯಾಹ್ನ 3 ಗಂಟೆಯವರೆಗೆ ಚಿನಕುರಳಿ ನಿವಾಸದಲ್ಲಿ ಸಾರ್ವಜನಿಕ ಅಂತಿಮ ದರ್ಶನಕ್ಕೆ ಅವಕಾಶ ಮಾಡಿಕೊಡಲಾಯಿತು. ನೂರಾರು ಸಂಖ್ಯೆಯಲ್ಲಿ ವಿವಿಧ ಗಣ್ಯರು ಸೇರಿದಂತೆ ಕಾರ್ಯಕರ್ತರು, ಮುಖಂಡರು, ಸಂಬಂಧಿಕರು ಆಗಮಿಸಿ ಅಂತಿಮ ದರ್ಶನ ಪಡೆದರು. ಬಳಿಕ ತೆರೆದ ವಾಹನದಲ್ಲಿ ಚಿನಕುರಳಿ ಗ್ರಾಮದಲ್ಲಿ ಮೆರವಣಿಗೆ ನಡೆಸಿ. ಸಂಜೆ 4 ಗಂಟೆಯ ಸುಮಾರಿಗೆ ಗ್ರಾಮದ ಸ್ವಂತ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು. ಮೃತ ಕೆ.ಕೆಂಪೇಗೌಡರಿಗೆ ನಾಲ್ವರು ಪುತ್ರರು, ಐವರು ಪುತ್ರಿಯರು ಹಾಗೂ ಮೊಮ್ಮಕ್ಕಳು, ಬಂಧುಗಳಿದ್ದಾರೆ.

ಗಣ್ಯರಿಂದ ಅಂತಿಮ ದರ್ಶನ: ಮಾಜಿ ಶಾಸಕ ಕೆಕೆಂಪೇಗೌಡರು ನಿಧನರಾದ ವಿಚಾರ ತಿಳಿದು ಚಿನಕುರುಳಿಗೆ ಸಚಿವ ಕೆ.ಸಿ.ನಾರಾಯಣ್‌ಗೌಡ, ಸಂಸದೆ ಸುಮಲತಾ ಅಂಬರೀಶ್, ಶಾಸಕರಾದ ಜಿ.ಟಿ.ದೇವೇಗೌಡ, ಅಶ್ವಿನ್ ಕುಮಾರ್, ಮಾಜಿ ಶಾಸಕರಾದ ರಮೇಶ್ ಬಾಬು ಬಂಡಿಸಿದ್ದೇಗೌಡ, ಕೆ.ಬಿ.ಚಂದ್ರಶೇಖರ್, ಜಿ.ಬಿ.ಶಿವಕುಮಾರ್, ಬಿ.ಪ್ರಕಾಶ್, ಜಿಪಂ ಮಾಜಿ ಸದಸ್ಯರಾದ ಸಿ.ಅಶೋಕ್, ಹೆಚ್.ತ್ಯಾಗರಾಜು, ಹೆಚ್.ಮಂಜುನಾಥ್, ಬಿಜೆಪಿ ಮುಖಂಡ ಡಾ.ಎನ್.ಎಸ್.ಇಂದ್ರೇಶ್, ರೈತ ಮುಖಂಡರಾದ ಸುನೀತಾ ಪುಟ್ಟಣ್ಣಯ್ಯ, ಸುತ್ತೂರು ಮಠದ ಎಸ್.ಪಿ.ಷಡಕ್ಷರಿಸ್ವಾಮಿ, ಎಡಿಸಿ ಡಾ.ಹೆಚ್.ಎಲ್. ನಾಗರಾಜು, ಎಸಿ ಬಿ.ಸಿ.ಶಿವಾನಂದಮೂರ್ತಿ, ತಹಸೀಲ್ದಾರ್ ನಯನಾ ಸೇರಿದಂತೆ ಹಲವು ಗಣ್ಯರು ಭೇಟಿ ನೀಡಿ, ಅಗಲಿದ ನಾಯಕನ ಅಂತಿಮ ದರ್ಶನ ಪಡೆದರು.

ಶಾಸಕ ಸಿ.ಎಸ್.ಪುಟ್ಟರಾಜು ಅವರು ಚಿಕಿತ್ಸೆಗಾಗಿ ವಿದೇಶಕ್ಕೆ ತೆರಳಿರುವುದರಿಂದ ವಿದೇಶದಿಂದಲೇ ದೂರವಾಣಿ ಮೂಲಕ ಸೋದರ ಸಂಬಂಧಿಯೂ ಆದ ಮಾಜಿ ಶಾಸಕ ಕೆ.ಕೆಂಪೇಗೌಡರ ಅವರ ನಿಧನಕ್ಕೆ ಸಂತಾಪ ಸೂಚಿಸಿದರು. ಅಲ್ಲದೆ ಶಾಸಕ ಸಿ.ಎಸ್.ಪುಟ್ಟರಾಜು ಅವರ ಕುಟುಂಬಸ್ಥರು ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿದ್ದರು.

ಸ್ವಯಂ ಪ್ರೇರಿತ ಬಂದ್, ಶಾಲೆಗಳಿಗೆ ರಜೆ: ಮಾಜಿ ಶಾಸಕ ಕೆ.ಕೆಂಪೇಗೌಡರ ನಿಧನ ಹಿನ್ನೆಲೆಯಲ್ಲಿ ಸ್ವಗ್ರಾಮ ಚಿನಕುರಳಿಯಲ್ಲಿ ಸ್ವಯಂ ಪ್ರೇರಿತವಾಗಿ ಬಂದ್ ಆಚರಣೆ ಮಾಡಲಾಯಿತು. ಚಿನಕುರಳಿ ಗ್ರಾಮದ ಎಲ್ಲಾ ಅಂಗಡಿ-ಮುಂಗಟ್ಟುಗಳನ್ನು ಸ್ವಯಂ ಪ್ರೇರಿತವಾಗಿ ಬಂದ್ ಮಾಡಿದ್ದರು. ಚಿನಕುರಳಿ ಗ್ರಾಮದ ಪ್ರತಿಷ್ಠಿತ ಎಸ್‌ಟಿಜಿ ಶಿಕ್ಷಣ ಸಂಸ್ಥೆ ಸೇರಿದಂತೆ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಶಾಲೆಗಳಿಗೆ ರಜೆ ಘೋಷಿಸಲಾಗಿತ್ತು.

ಮೂರು ಬಾರಿ ಶಾಸಕರಾಗಿದ್ದ ಕೆಂಪೇಗೌಡರು

ಮಾಜಿ ಶಾಸಕ ಕೆ.ಕೆಂಪೇಗೌಡರು ಪಾಂಡವಪುರ ವಿಧಾನ ಸಭಾ ಕ್ಷೇತ್ರದಲ್ಲಿ ಮೂರು ಬಾರಿ ಶಾಸಕರಾಗಿ ಆಯ್ಕೆಯಾಗಿ ಕ್ಷೇತ್ರವನ್ನು ಅಭಿವೃದ್ಧಿಪಡಿಸುವ ಮೂಲಕ ಜನಮನ್ನಣೆ ಗಳಿಸಿದ್ದರು.

1978ರಲ್ಲಿ ಚಿನಕುರಳಿ ಮಂಡಲ ಪಂಚಾಯಿತಿ ಸದಸ್ಯರಾಗಿ ಆಯ್ಕೆಯಾಗಿ, ಮಂಡಲ ಪಂಚಾಯಿತಿ ಅಧ್ಯಕ್ಷರಾಗಿದ್ದರು. ಆ ಬಳಿಕ 1983ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಪಾಂಡವಪುರ ವಿಧಾನಸಭಾ ಕ್ಷೇತ್ರದಿಂದ ಜನತಾ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದರು. ನಂತರ 1985ರ ವಿಧಾನಸಭೆ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸತತ ಎರಡನೇ ಬಾರಿಯೂ ಶಾಸಕರಾಗಿ ಆಯ್ಕೆಯಾದರು. 1999ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಮೂರನೇ ಬಾರಿಗೆ ಶಾಸಕರಾಗಿ ಆಯ್ಕೆಯಾಗುತ್ತಾರೆ.

2008ರ ಮೇಲುಕೋಟೆ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋಲುಂಡರು. ಅಲ್ಲಿಂದ ಸಕ್ರಿಯ ರಾಜಕಾರಣದಿಂದ ದೂರ ಉಳಿದರು.

ಸರಳ ವ್ಯಕ್ತಿತ್ವರೂಢಿಸಿಕೊಂಡಿದ್ದ ಕೆ.ಕೆಂಪೇಗೌಡರು ಶಾಸಕರಾಗಿದ್ದ ಸಂದರ್ಭದಲ್ಲಿ ಸ್ವಂತ ಕಾರನ್ನು ಸಹ ಖರೀದಿಸದೆ ಕ್ಷೇತ್ರ ಸಂಚಾರಕ್ಕೆ ತಮ್ಮ ಸ್ನೇಹಿತರು, ಬೆಂಬಲಿಗರ, ಕಾರ್ಯಕರ್ತರ ಕಾರು ಅಥವಾ ಬೈಕ್‌ಗಳ ಮೂಲಕ ಓಡಾಡುತ್ತಿದ್ದರು. ಬೆಂಗಳೂರಿನಲ್ಲಿ ನಡೆಯುವ ವಿಧಾನಸಭೆಯ ಕಲಾಪಕ್ಕೆ ಸಾರಿಗೆ ಬಸ್‌ನಲ್ಲಿ ಹೋಗಿ ಬರುತ್ತಿದ್ದರು. ಅಲ್ಲದೆ ಅವರ ಜೀವಿತಾವಧಿಯವರೆಗೂ ಸ್ವಂತ ಕಾರನ್ನು ಖರೀದಿಸದೆ ಬಸ್‌ನಲ್ಲಿಯೇ ಓಡಾಡಿದ ಒಬ್ಬ ಧೀಮಂತ ನಾಯಕರು.

> **"** ಹಿರಿಯ ಮುತ್ಸದ್ಧಿಗಳಾದ ಕೆ.ಕೆಂಪೇಗೌಡರು ಪಾಂಡವಪುರ ಕ್ಷೇತ್ರದಲ್ಲಿ ಮೂರು ಬಾರಿ ಶಾಸಕರಾಗಿ ಆಯ್ಕೆಯಾಗುವ ಮೂಲಕ ಕ್ಷೇತ್ರವನ್ನು ಮಾದರಿಯಾಗಿ ಅಭಿವೃದ್ಧಿಪಡಿಸಿ ಕ್ಷೇತ್ರದ ಚಿತ್ರಣವನ್ನೇ ಬದಲಾಯಿಸಿದ್ದರು. ಕೆ.ಕೆಂಪೇಗೌಡರಂತಹ ನಾಯಕರು ನಮಗೆಲ್ಲ ಮಾದರಿ. ಅಂತಹ ಧೀಮಂತ ನಾಯಕರನ್ನು ಕಳೆದುಕೊಂಡು ಕ್ಷೇತ್ರಕ್ಕೆ ಹಾಗೂ ಇಡೀ ಜಿಲ್ಲೆಗೆ ತುಂಬಲಾರದ ನಷ್ಟ ಉಂಟಾಗಿದೆ. ಅವರ ಅಗಲಿಕೆಯನ್ನು ಭರಿಸುವ ಶಕ್ತಿಯನ್ನು ಭಗವಂತ ಅವರ ಕುಟುಂಬಕ್ಕೆ ನೀಡಲಿ.
>
> -ಸಿ.ಎಸ್.ಪುಟ್ಟರಾಜು, ಶಾಸಕರು.

> **"** ಕೆ.ಕೆಂಪೇಗೌಡ ಮಾದರಿ ರಾಜಕಾರಣಿಗಳು, ಸರಳ ಸಜ್ಜನಿಕೆಯ ವ್ಯಕ್ತಿಯಾಗಿದ್ದರು. ನಮ್ಮಿಬ್ಬರ ಸಂಬಂಧ ಬಹಳ ಚೆನ್ನಾಗಿತ್ತು. ಅವರು ಶಾಸಕರಾಗಿದ್ದ ಸಂದರ್ಭದಲ್ಲಿ ನಾನೊಬ್ಬ ಶಾಸಕ ಎಂಬ ಅಹಂ ಅನ್ನು ಎಂದಿಗೂ ತೋರಿಸಿದವರಲ್ಲ. ಮಾಜಿ ಶಾಸಕರಾದ ಬಳಿಕ ಅವರಿಗೆ ಮೈಸೂರಿನಲ್ಲಿ ಯಾವುದಾದರೂ ಕೆಲಸವಾಗಬೇಕಿದ್ದರೆ ನೇರವಾಗಿ ನನ್ನ ಮನೆಗೆ ಬರುತ್ತಿದ್ದರು. ಅಂತಹ ವ್ಯಕ್ತಿಯನ್ನು ಕಳೆದುಕೊಂಡು ಅಪಾರ ನೋವುಂಟಾಗಿದೆ. ಕೆಂಪೇಗೌಡರ ಅಗಲಿಕೆಯನ್ನು ಭಗವಂತ ಅವರ ಕುಟುಂಬಕ್ಕೆ ಭರಿಸುವ ಶಕ್ತಿ ನೀಡಲಿ.
>
> -ಜಿ.ಟಿ.ದೇವೇಗೌಡ, ಶಾಸಕರು.

ರಾಮಸ್ವಾಮಿ ನಿಧನ



ನಾಗಮಂಗಲ, ಸೆ.8- ತಾಲೂಕಿನ ದೇವಲಾಪುರ ಹೋಬಳಿ ಹರದನಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷ ಹಾಗೂ ಕಾರಗೆರೆ ಗ್ರಾಮದ ಕೆ.ಜಿ. ರಾಮಸ್ವಾಮಿ(75) ಗುರುವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಸ್ವಗ್ರಾಮದಲ್ಲಿ ನಡೆಯಿತು.

ಇಂದು ವಿದ್ಯುತ್ ವ್ಯತ್ಯಯ

ಮಂಡ್ಯ, ಸೆ.8- ಹಂಪಾಪುರ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ತುರ್ತು ಕಾರ್ಯನಿರ್ವಹಣೆ ಹಮ್ಮಿಕೊಂಡಿರುವುದರಿಂದ ಸೆ.9 ರಂದು ಬೆಳಗ್ಗೆ 9ರಿಂದ ಸಂಜೆ 5ಗಂಟೆಯವರೆಗೆ ಕೆರೆಗೋಡು, ದೊಡ್ಡಗರುಡನಹಳ್ಳಿ, ಬಳಿದೇಗಲು, ಮುದಗಂದೂರು, ಮಾರಗೌಡನಹಳ್ಳಿ, ಬಿ.ಹೊಸೂರು, ಹಂಪಾಪುರ, ಕಲ್ಮಂಟಿದೊಡ್ಡಿ, ಸೌದೇನಹಳ್ಳಿ, ಬೆಟ್ಟಹಳ್ಳಿ, ಬೀಚನಹಳ್ಳಿ, ಮರದಕೊಪ್ಪಲು, ಎಂ.ಹೊನ್ನೇನಹಳ್ಳಿ, ಬಿದರಕಟ್ಟೆ, ಬೆನ್ನಹಟ್ಟಿ, ಮನುಗನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್, ಕೊತ್ತತ್ತಿ ಉಪವಿಭಾಗ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆರೆ ಕೋಡಿ ಬಿದ್ದು ಕೊಚ್ಚಿ ಹೋದ ಎತ್ತಿನ ಗಾಡಿ; ಎತ್ತು ಸಾವು

ಕೆ.ಆರ್.ಪೇಟೆ, ಸೆ.8-ತಾಲೂಕಿನ ವಳಗೆರೆ-ಮೆಣಸ ಗ್ರಾಮದ ದೊಡ್ಡಕೆರೆ ಕೋಡಿ ಒಡೆದು ಪ್ರವಾಹದ ಮಾದರಿಯಲ್ಲಿ ನೀರು ಹರಿದ ಪರಿಣಾಮ ನಾಟಿಗೆ ಭತ್ತದ ಪೈರು ಸಾಗಿಸುತ್ತಿದ್ದ ಎತ್ತಿನ ಬಂಡಿಯು ರಾಸುಗಳ ಸಮೇತ ಕೊಚ್ಚಿಕೊಂಡು ಹೋಗಿದ್ದು, ಒಂದು ಎತ್ತು ಸಾವನ್ನಪ್ಪಿ ರೈತ ಹಾಗೂ ಇನ್ನೊಂದು ಎತ್ತು ಈಜಿ ದಡ ಸೇರಿ ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ನಡೆದಿದೆ.

ಗ್ರಾಮದ ಸುಬ್ಬೇಗೌಡ ಅವರ ಪುತ್ರ ರಾಘವೇಂದ್ರ ಅವರು ಗುರುವಾರ ಮಧ್ಯಾಹ್ನ 12 ಗಂಟೆ ಸಮಯದಲ್ಲಿ ತಮ್ಮ ಜಮೀನಿನಲ್ಲಿ ಭತ್ತದ ನಾಟಿ ಮಾಡಿಸಲು ಬೇರೆ ಕಡೆಯಿಂದ ಎತ್ತಿನ ಗಾಡಿಯಲ್ಲಿ ಪೈರು ತುಂಬಿಕೊಂಡು ಗದ್ದೆಗೆ ಹೋಗುತ್ತಿದ್ದಾಗ ಗ್ರಾಮದ ದೊಡ್ಡಕೆರೆಯ ಕೋಡಿಯ ನೀರು ಹೆಚ್ಚಿನ ಪ್ರಮಾಣದಲ್ಲಿ ಉಕ್ಕಿ ಹರಿದಿದೆ. ಇದನ್ನು ಗಮನಿಸಿದೇ ರೈತ ರಾಘವೇಂದ್ರ ನೀರಿನಲ್ಲಿ ಗಾಡಿಯನ್ನು ಚಲಾಯಿಸಿದಾಗ ಗಾಡಿ ಮತ್ತು ಹಸುಗಳ ಸಮೇತ ರೈತ ಕೊಚ್ಚಿಕೊಂಡು ಹೋಗಿದ್ದರು. ಈ ವೇಳೆ ರೈತ ರಾಘವೇಂದ್ರ ಮತ್ತು ಒಂದು ಎತ್ತು ಗಾಡಿಯ ನೊಗದಿಂದ ಬಿಡಿಸಿಕೊಂಡ ಈಜಿ ದಡ ಸೇರಿದೆ. ಆದರೆ, ಮತ್ತೊಂದು ಎತ್ತು ಗಾಡಿಯ ನೊಗದಲ್ಲಿ ಸಿಲುಕಿ ಹೊರಬರಲಾಗದೇ ನೀರಿನಲ್ಲಿ ಮುಳುಗಿ ಮೃತಪಟ್ಟಿದೆ ಎಂದು ಪ್ರತ್ಯಕ್ಷದರ್ಶಿಗಳು ಮಾಹಿತಿ ನೀಡಿದ್ದಾರೆ.

ಘಟನೆಯಿಂದ ರೈತ ರಾಘವೇಂದ್ರ ಅವರಿಗೆ ಲಕ್ಷಾಂತರ ರೂ. ನಷ್ಟ ಉಂಟಾಗಿದೆ. ಕೃಷಿ ಚಟುವಟಿಕೆಯಲ್ಲಿ ನಿರತನಾಗಿದ್ದ ವೇಳೆ ಸಂಭವಿಸಿದ ಈ ಅನಾಹುತದಲ್ಲಿ ಎತ್ತು ಕಳೆದುಕೊಂಡು ಸಣ್ಣಪುಟ್ಟ ಗಾಯಗಳಾಗಿ ಪ್ರಾಣಾಪಾಯದಿಂದ ಪಾರಾಗಿರುವ ರಾಘವೇಂದ್ರ ಅವರಿಗೆ ತಾಲೂಕು ಆಡಳಿತವು ಸೂಕ್ತ ಪರಿಹಾರ ನೀಡಬೇಕು ಎಂದು ಗ್ರಾಮದ ಮುಖಂಡರು ಹಾಗೂ ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ವಿ.ಎನ್.ಮಹಾದೇವೇಗೌಡ ಮತ್ತು ಗ್ರಾಮ ಪಂಚಾಯಿತಿ ಸದಸ್ಯ ಸಿ.ಆರ್.ಪಿ. ಕುಮಾರ್ ಒತ್ತಾಯಿಸಿದ್ದಾರೆ.

ಮೈಸೂರು ನಗರ ಸುದ್ದಿಗಳು...

ಬೆಂಗಳೂರು ಹಾದು ಹೋಗಲಿರುವ ಪುಣೆ-ಚೆನ್ನೈ ಹೆದ್ದಾರಿ

- ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಭರವಸೆ
- ಬೆಂಗಳೂರು ವಾಹನ ದಟ್ಟಣೆ ಸಮಸ್ಯೆ ನಿವಾರಣೆಗೂ ಪರಿಹಾರ ಸಾಧ್ಯ



ಬೆಂಗಳೂರು, ಸೆ.8(ಕೆಎಂಶಿ)-ಪುಣೆ-ಚೆನ್ನೈ ರಾಷ್ಟ್ರೀಯ ಹೆದ್ದಾರಿಯನ್ನು ಬೆಂಗಳೂರು ನಗರದ ಮೂಲಕ ಹಾದು ಹೋಗುವ ವ್ಯವಸ್ಥೆ ಮಾಡುವುದಾಗಿ ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಇಂದಿಲ್ಲಿ ಭರವಸೆ ನೀಡಿದ್ದಾರೆ.

ದಕ್ಷಿಣ ರಾಜ್ಯದ ಪ್ರಮುಖ ನಗರಗಳ ರಾಷ್ಟ್ರೀಯ ಹೆದ್ದಾರಿ ಸಂಪರ್ಕಕ್ಕೆ ಸಂಬಂಧಿಸಿದಂತೆ 3 ದಿನಗಳ ಮಂಥನ ಸಭೆ ನಡೆಸುತ್ತಿರುವ ಸಚಿವರು, ಇಂದು ರಾಜ್ಯಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿಯವರೊಟ್ಟಿಗೆ ಚರ್ಚೆ ನಡೆಸಿದ ಸಂದರ್ಭದಲ್ಲಿ ಈ ಭರವಸೆ ನೀಡಿದ್ದಾರೆ. ಪುಣೆ-ಹುಬ್ಬಳ್ಳಿ-ದಾವಣಗೆರೆ-ತುಮಕೂರು ಮೂಲಕ ಬೆಂಗಳೂರು ನಗರಕ್ಕೆ ಸಂಪರ್ಕ ಕಲ್ಪಿಸಿ, ನಂತರ ಚೆನ್ನೈಗೆ ರಸ್ತೆ ಹಾದು ಹೋಗಲಿದೆ. ಹುಬ್ಬಳ್ಳಿ-ಬೆಂಗಳೂರು ನಡುವಿನ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಲೋಪಗಳನ್ನು ಸರಿಪಡಿಸುವುದಾಗಿಯು ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ.

ಇನ್ನು ಬೆಂಗಳೂರು ನಗರದ ಸಂಚಾರ ದಟ್ಟಣೆ ನಿವಾರಣೆಗೆ ನಗರದ ಹೊರವಲಯದಲ್ಲಿ ಎರಡು ಹಂತದಲ್ಲಿ ವರ್ತುಲ ರಸ್ತೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದ್ದಾರೆ. ನಗರದ ಐಟಿ ಕಾರಿಡಾರ್‌ನಲ್ಲಿ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ಎಲಿವೇಟೆಡ್ ರಸ್ತೆಗಳನ್ನು ನಾವೇ ನಿರ್ಮಿಸಿಕೊಡುವುದಾಗಿಯು ಹೇಳಿದ್ದಾರೆ.



ಇದರಿಂದ ಭೂಸ್ವಾಧೀನದ ವೆಚ್ಚ ತಪ್ಪುವುದಲ್ಲದೆ, ಈ ರಸ್ತೆಯಲ್ಲಿ ಅಡ್ಡಾದಿಡ್ಡಿ ಸಂಚಾರ ತಡೆಯಬಹುದಾಗಿದೆ ಎಂದು ತಿಳಿಸಿದ್ದಾರೆ.

ಒಂದೇ ಫ್ಲೈಓವರ್ ಪಿಲ್ಲರ್‌ನ ಅಡಿಯಲ್ಲಿ ಮೆಟ್ರೋ,ರೈಲು ಮತ್ತು ರಸ್ತೆಯ ವ್ಯವಸ್ಥೆ ಮಾಡಬೇಕು ಎಂಬ ಪ್ಲಾನ್ ಇದೆ ಎಂದರು. ಬೈಯಪ್ಪನಹಳ್ಳಿಯಲ್ಲಿ ಈ ರೀತಿ ಮಾಡಲು ರೈಲ್ವೆ ಇಲಾಖೆ ಯೋಜನೆ ತಯಾರಿಸುತ್ತಿದೆ. ಭೂಮಿಯ ಬಳಕೆ ಕಡಿಮೆ ಮಾಡಿಕೊಂಡು ಒಂದೇ ಜಾಗದಲ್ಲಿ ಸಮರ್ಪಕವಾಗಿ ಬಳಕೆ ಮಾಡಿಕೊಳ್ಳಲು ಚಿಂತನೆ ನಡೆಸಿದ್ದೇವೆ. ಮೂರು ಫ್ಲೋರ್‌ಗಳಾಗಿ ಮಾಡಿಕೊಂಡು ಅದರ ಅಡಿಯಲ್ಲಿ ಸಾರಿಗೆ ಸಂಪರ್ಕ ಸಾಧಿಸಲು ಚಿಂತನೆಯಾಗಿದೆ ಎಂದು ಮುಖ್ಯಮಂತ್ರಿಯವರು ತಿಳಿಸಿದ್ದಾರೆ.

ಈ ಬಗ್ಗೆ ಟೆಕ್ನಿಕಲ್ ತಂಡದ ಜೊತೆ ಚರ್ಚಿಸಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ. ಎಲಿವೇಟೆಡ್ ಟ್ರಾನ್ಸ್‌ಪೋರ್ಟ್ ಬಗ್ಗೆ ಚರ್ಚೆ ನಡೆಸಿದ್ದೇವೆ. ಎಲ್ಲೆಲ್ಲಿ ರಸ್ತೆ ಮಾಡಲು ಸಾಧ್ಯವಿಲ್ಲವೊ ಅಲ್ಲೆಲ್ಲ ಎಲಿವೇಟೆಡ್ ಟ್ರಾನ್ಸ್‌ಪೋರ್ಟ್ ಮಾಡಲು ಚಿಂತನೆ ನಡೆಸಿದ್ದೇವೆ. ರೋಪ್ ವೇ ಮೂಲಕ ಸಂಚರಿಸುವ ಬಗ್ಗೆ ಚರ್ಚೆ ನಡೆದಿದೆ. ಈಗಾಗಲೇ ಅದರ ತಂತ್ರಜ್ಞಾನ ಇದೆ. ಅದನ್ನು ಬೆಂಗಳೂರಿಗೆ ಯಾವ ರೀತಿ ಬಳಸಿಕೊಳ್ಳಬಹುದು ಎಂದು ಚರ್ಚೆ ನಡೆಸಿದ್ದೇವೆ ಎಂದು ಗಡ್ಕರಿ ಅವರಿಗೆ ಮುಖ್ಯಮಂತ್ರಿ ಬೊಮ್ಮಾಯಿ ತಿಳಿಸಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಮೈಸೂರು, ಸೆ.8- ಚೆಸ್ಕಾಂನಿಂದ ಸೆ.9 ರಂದು ಬೆಳಗ್ಗೆ 10ರಿಂದ ಸಂಜೆ 5.30ರವರೆಗೆ 66/11 ಕೆ.ವಿ ಮೇಗಳಾಪುರ ವಿದ್ಯುತ್ ವಿತರಣಾ ಕೇಂದ್ರದಲ್ಲಿ 2ನೇ ತ್ರೈಮಾಸಿಕ ಅವಧಿ ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿದ್ದು, ಮೇಗಳಾಪುರ, ಕೀಳನಪುರ, ಸಿದ್ದರಾಮನಹುಂಡಿ, ಎಂ.ಸಿ.ಹುಂಡಿ, ಇನಾಂ ಉತ್ತನಹಳ್ಳಿ, ಕುಪ್ಪೆಗಾಲ, ಮುದ್ದೇಗೌಡನಹುಂಡಿ, ರಂಗನಾಥಪುರ, ಶ್ರೀನಿವಾಸಪುರ, ದೇವೆಗೌಡನಹುಂಡಿ, ಯಡಕೊಳ, ಕಡವೆಕಟ್ಟೆಹುಂಡಿ, ಹೊಸಹಳ್ಳಿ, ಗುರುಕಾರಪುರ, ದುದ್ದಗೆರೆ, ಮಹದೇವಿ ಕಾಲೋನಿ, ಲಕ್ಷ್ಮೀಪುರ, ಮಾಧವಗೆರೆ, ವರಕೋಡು ಪೇಪರ್ ಮಿಲ್, ಕುಪ್ಯ, ಬೊಮ್ಮನಾಯಕನಹಳ್ಳಿ, ಕೆ.ಪಿ. ಹುಂಡಿ ಸುತ್ತಮುತ್ತ ಹಾಗೂ ಕುಪ್ಯ ಗ್ರಾಪಂ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಧನುಜಗೆ ಪಿಹೆಚ್.ಡಿ



ಮೈಸೂರು,ಸೆ.8-ಡಾ. ಜಿ.ಟಿ.ರಾಮಚಂದ್ರಪ್ಪ ಮಾರ್ಗದರ್ಶನದಲ್ಲಿ ಧನುಜ ರಾಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಹಣಕ್ಕಿಂತ ಆರೋಗ್ಯ ಮುಖ್ಯ



ಬೆಂಗಳೂರು, ಸೆ.8(ಕೆಎಂಶಿ)-ಇಡೀ ಸಮಾಜ ಈಗ ಹಣದ ಹಿಂದೆ ಹೋಗುತ್ತಿದೆ. ಆದರೆ ಇದಕ್ಕಿಂತ ಮನೋದೈಹಿಕ ಆರೋಗ್ಯ ಮುಖ್ಯ ಎನ್ನುವ ಸತ್ಯವನ್ನು ನಾವೆಲ್ಲರೂ ಅರ್ಥ ಮಾಡಿಕೊಳ್ಳುವ ಅಗತ್ಯವಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ ಎನ್.ಅಶ್ವತ್ಥನಾರಾಯಣ ಹೇಳಿದ್ದಾರೆ.

ನಿಮ್ಹಾನ್ಸ್ ಸಂಸ್ಥೆಯು ಗುರುವಾರ ಏರ್ಪಡಿಸಿದ್ದ 'ವಿಶ್ವ ಫಿಸಿಯೋಥೆರಪಿ ದಿನಾಚರಣೆ'ಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಫಿಸಿಯೋಥೆರಪಿ ಕಾಲೇಜನ್ನು ಆರಂಭ ಮಾಡುವ ಮೂಲಕವೇ ನಾನು ಸಾರ್ವಜನಿಕ ರಂಗಕ್ಕೆ ಬಂದೆ. ಫಿಸಿಯೋಥೆರಪಿ ಕ್ಷೇತ್ರವನ್ನು ನಾವು ಜನರ ಬಳಿಗೆ ತೆಗೆದುಕೊಂಡು ಹೋಗಬೇಕು. ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಆರೋಗ್ಯ ಮತ್ತು ವೆಲ್ನೆಸ್ ವಿಚಾರಗಳಿಗೆ ಮಹತ್ತ್ವ ಕೊಡಲಾಗಿದೆ ಎಂದು ಅವರು ತಿಳಿಸಿದರು.

ಫಿಸಿಯೋಥೆರಪಿ ಸಾಧನಗಳನ್ನು ನಾವು ಸ್ಥಳೀಯ ಮಟ್ಟದಲ್ಲೇ ಉತ್ಪಾದಿಸಬೇಕಿದೆ. ಇದಕ್ಕಾಗಿ ಸೂಕ್ತ ಜನರ ಜತೆ ಸಹಭಾಗಿತ್ವ ಹೊಂದಬೇಕಾದ್ದು ಅಗತ್ಯವಾಗಿದೆ. ಆಧುನಿಕ ಬದುಕಿನಲ್ಲಿ ದೇಹ, ಮನಸ್ಸು, ವೃತ್ತಿಗಳ ನಡುವೆ ಸಮನ್ವಯ ಸಾಧಿಸಬೇಕಾಗಿದೆ. ಇದು ನನಸಾಗಬೇಕು ಎಂದರೆ, ಎಲ್ಲವೂ ಸರಳವಾಗಿ ಜನಸ್ನೇಹಿ ಆಗಬೇಕು ಎಂದು ಅಶ್ವತ್ಥ್ ನಾರಾಯಣ್ ನುಡಿದರು.

ಫಿಸಿಯೋಥೆರಪಿ ಸೇವೆಗಳನ್ನು ಜನರಿಗೆ ಕೈಗೆಟುಕುವ ಹಾಗೆ ಒದಗಿಸಬೇಕು. ಈ ವಿಚಾರದಲ್ಲಿ ದೇಶದ ಜನತೆಗೆ ನಿಮ್ಹಾನ್ಸ್ ತರಹದ ಸಂಸ್ಥೆಗಳು ಹೆಚ್ಚಿನ ಸಂಖ್ಯೆಯಲ್ಲಿ ಬೇಕಾಗಿವೆ ಎಂದು ಸಚಿವರು ಅಭಿಪ್ರಾಯಪಟ್ಟರು.

ಶಿಕ್ಷಕರ ದಿನಾಚರಣೆ; ಮಹಾಜನ ವಿದ್ಯಾಸಂಸ್ಥೆ ಸಾಧಕ ಶಿಕ್ಷಕರು, ಅಧ್ಯಾಪಕರಿಗೆ ಸನ್ಮಾನ



ಮೈಸೂರು,ಸೆ.8(ಪಿಎಂ)-ಮೈಸೂರಿನ ಪೂಜಾ ಭಾಗವತ್ ಸ್ಮಾರಕ ಮಹಾಜನ ವಿದ್ಯಾ ಕೇಂದ್ರದ ಸಭಾಂಗಣದಲ್ಲಿ ಇತ್ತೀಚೆಗೆ ನಡೆದ ಶಿಕ್ಷಕರ ದಿನಾಚರಣೆಯಲ್ಲಿ ಮಹಾಜನ ವಿದ್ಯಾಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸಾಧಕ ಶಿಕ್ಷಕರು ಹಾಗೂ ಅಧ್ಯಾಪಕರನ್ನು ಸನ್ಮಾನಿಸಲಾಯಿತು.

ಮಹಾಜನ ವಿದ್ಯಾಸಂಸ್ಥೆ ವತಿಯಿಂದ ನಡೆದ ಈ ಕಾರ್ಯಕ್ರಮದಲ್ಲಿ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ.ಹೆಚ್.ಆರ್.ತಿಮ್ಮೇಗೌಡ, ಪ್ರಾಧ್ಯಾಪಕರಾದ ಡಾ.ವಿನೋದಮ್ಮ, ಪ್ರಕಾಶ್ (ನಿವೃತ್ತ), ಡಾ.ಮಲ್ಲಿಕಾರ್ಜುನ, ಡಾ.ಪೂರ್ಣಿಮಾ, ಡಾ.ಲೆಫ್ಟಿನೆಂಟ್ ಇಂದ್ರಾಣಿ, ಮೇಜರ್ ಬಿ.ಆರ್.ನಿಖಿಲ್, ಸ್ನಾತಕೋತ್ತರ ಕೇಂದ್ರದ ಪ್ರಾಧ್ಯಾಪಕರಾದ ಸಿ.ಆರ್.ರಚನಾ, ಧನಲಕ್ಷ್ಮಿ ಅವರನ್ನು ಸನ್ಮಾನಿಸಲಾಯಿತು. ಮುಖ್ಯ ಅತಿಥಿಯಾಗಿ ಮೈಸೂರು ವಿವಿ ವಿಶ್ರಾಂತ ಕುಲಸಚಿವ ಡಾ.ವಿ.ಕೆ.ನಟರಾಜ್ ಪಾಲ್ಗೊಂಡಿದ್ದರು. ಮಹಾಜನ ವಿದ್ಯಾಸಂಸ್ಥೆ ಅಧ್ಯಕ್ಷ ಟಿ.ಮುರಳೀಧರ್ ಭಾಗವತ್, ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್, ಸಂಸ್ಥೆ ಸ್ನಾತಕೋತ್ತರ ಕೇಂದ್ರದ ಡಾ.ಸಿ.ಕೆ. ರೇಣುಕಾರ್ಯ, ಸಂಸ್ಥೆಯ ಆಡಳಿತಾಧಿಕಾರಿ ಪ್ರೊ.ಪಿ.ಸರೋಜಮ್ಮ, ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಿಇಓ ಡಾ.ಎಸ್.ಆರ್.ರಮೇಶ್ ಮತ್ತಿತರರು ಹಾಜರಿದ್ದರು.



ಮೈಸೂರಿನ ಚೈತ್ರ ಪಬ್ಲಿಕ್ ಶಾಲೆಯ ಶಿಕ್ಷಕರಿಂದ ಓಣಂ ಆಚರಿಸಲಾಯಿತು. ಶಾಲೆಯ ಅಕೌಂಟೆಂಟ್ ಪಲ್ಲವಿ ಟಿ, ಶಾಲೆ ಪ್ರಾಂಶುಪಾಲರಾದ ದೇಚಮ್ಮ, ಉಪಪ್ರಾಂಶುಪಾಲರಾದ ಕಮಲಾ ಜೆ, ಸಂಧ್ಯಾ, ನಂದಿತಾ, ಜಯಶ್ರೀ, ಗಗನ, ತೇಜಸ್ವಿನಿ, ನಮಿತಾ ಮತ್ತು ಸಿಬ್ಬಂದಿ ವರ್ಗ ಈ ವೇಳೆ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಕೊಡಗು ಕಚೇರಿ: ಪೂಜಾ ಆರ್ಕೇಡ್, ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ. ದೂರವಾಣಿ: 223517, (ಕ) ಫ್ಯಾಕ್ಸ್: 08272-223517 ಮೊ. 9731469871 E-mail: madikeri@mysurumithra.com

ಕುಶಾಲನಗರದಲ್ಲಿ ಸಂಭ್ರಮದ ಓಣಂ



ಕುಶಾಲನಗರ, ಸೆ.8- ಕುಶಾಲನಗರ ತಾಲೂಕು ವ್ಯಾಪ್ತಿಯಲ್ಲಿ ಭಾವೈಕ್ಯತೆಯ ಪ್ರತೀಕವಾದ ಓಣಂ ಹಬ್ಬವನ್ನು ಮಲೆಯಾಳಿ ಭಾಷಿಕರು ಗುರುವಾರ ಆಚರಿಸಿ, ಸಂಭ್ರಮಿಸಿದರು.

ಓಣಂ ಎಂದಾಕ್ಷಣ ಮನೆಯ ಮುಂದಿನ ಅಂಗಳದಲ್ಲಿ ಹೂವಿನ ರಂಗೋಲಿ(ಪೊಳಕಂ), ಮಧ್ಯೆ ಬೆಳಗುವ ಹಣತೆ, ಸುಣ್ಣ ಬಣ್ಣ ಬಳಿದು ಶೃಂಗರಿಸಿದ ಮನೆ, ಅಡುಗೆ ಮನೆಯಲ್ಲಿ ಘಮ್ಮೆನ್ನುವ ಭಕ್ಷ್ಯ ಭೋಜನಗಳು, ಸಾಂಪ್ರದಾಯಿಕ ಉಡುಗೆ ಧರಿಸಿದ್ದ ಮಹಿಳೆಯರ ಹೊಸ ಹುರುಪು ಹಬ್ಬದ ಸಂದರ್ಭ ಕಂಡುಬಂದ ವಿಶೇಷತೆಗಳು.

ಕುಶಾಲನಗರ ಹೋಬಳಿ ವ್ಯಾಪ್ತಿಯ ಗುಡ್ಡೆ ಹೊಸೂರು, ಏಳನೇ ಹೊಸಕೋಟೆ, ಹಾರಂಗಿ, ಚಿಕ್ಕತ್ತೂರು, ಕೂಡಿಗೆ, ಸಿದ್ಧಲಿಂಗಪುರ, ಅರಸಿಣಕುಪ್ಪೆ,ನಾಕುರು-ಶಿರಂಗಾಲ, ನಂಜರಾಯಪಟ್ಟಣ ಮತ್ತಿತರ ಗ್ರಾಮಗಳಲ್ಲಿ ಹಬ್ಬದ ಅಂಗವಾಗಿ ಮಲೆಯಾಳಿ ಭಾಷಿಕರು (ಕೇರಳಿಯನ್ನರು) ಸಾಂಪ್ರದಾಯಿಕ ಹೊಸ ಉಡುಗೆ ತೊಡುಗೆ ಧರಿಸಿ ದೇವಸ್ಥಾನಗಳಿಗೆ ತೆರಳಿ ದೇವರ ದರ್ಶನ ಪಡೆದು ಪೂಜೆ ಸಲ್ಲಿಸಿದರು.

ಮಲೆಯಾಳಿ ಭಾಷಿಕರು ಪರಸ್ಪರ ಸಿಹಿ ವಿತರಿಸುವ ಮೂಲಕ ಓಣಂ ಹಬ್ಬದ ಶುಭಾಶಯ ಹಂಚಿಕೊಂಡರು. ಸಿಂಹಮಾಸದಲ್ಲಿ ಓಣಂ ಹಬ್ಬವನ್ನು ಆಚರಿಸಲಾಗುತ್ತಿದೆ. ಕೇರಳಿಯರಿಗೆ ಈ ಸಿಂಹಮಾಸ ಚಿನ್ನದ ಮಾಸವಾಗಿದ್ದು, ಸಿಂಹ ಮಾಸದಲ್ಲಿ ಹಸ್ತ ನಕ್ಷತ್ರದಿಂದ ಹತ್ತು ದಿನಗಳ ಕಾಲ ಓಣಂ ಹಬ್ಬವನ್ನು ಆಚರಿಸಲಾಗುತ್ತದೆ. ಹಾಗೆಯೇ ಕುಶಾಲನಗರ ಪಟ್ಟಣದಲ್ಲಿ ಪ್ರತೀ ವರ್ಷದಂತೆ ಈ ಬಾರಿಯೂ ಹೋಟೆಲ್ ಉದ್ಯಮಿ ಅತಿಥಿ ಭಾಸ್ಕರ್ ಅವರ ಕುಟುಂಬ ಸದಸ್ಯರು ಮತ್ತು ಹೋಟೆಲ್ ಸಿಬ್ಬಂದಿಗಳು ಒಡಗೂಡಿ ತಮ್ಮ ಅತಿಥಿ ಕಂಫರ್ಟ್ ಪ್ರವೇಶ ದ್ವಾರದಲ್ಲಿ ಪೂಕಳಂ ರಚಿಸಿದ್ದ ಚಿತ್ರಾ ಹೋಟೆಲ್‌ಗೆ ಧಾವಿಸುವ ಪ್ರವಾಸಿಗರ ಕಣ್ಮನ ಸೆಳೆಯಿತು. ಹಾಗೆಯೇ ಬೈಚನಹಳ್ಳಿಯ ಎಂ.ಜಿ. ವಿಶ್ವನಾಥ್ ಅವರ ಕುಟುಂಬಸ್ಥರು ಹಾಗೂ ಬಂಧುಬಾಂಧವರು ಒಟ್ಟಿಗೆ ಸೇರಿ ಓಣಂ ಹಬ್ಬ ಆಚರಿಸಿದರು.

ಹಬ್ಬದ ಹಿನ್ನೆಲೆ : ಓಣಂ ಹಬ್ಬದ ಕುರಿತು ಪುರಾಣ ಕಥೆಯಿದ್ದು, ಹಿಂದೆ ರಾಜ್ಯವನ್ನಾಳುತ್ತಿದ್ದ ಬಲಿ ಚಕ್ರವರ್ತಿ ರಾಕ್ಷಸನಾಗಿದ್ದರೂ, ಪ್ರಜೆಗಳ ಬಗ್ಗೆ ವಾತ್ಸಲ್ಯವುಳ್ಳವನೂ, ಧರ್ಮಿಷ್ಠನೂ, ಮಹಾದಾನಿಯೂ, ಮಹಾಪರಾಕ್ರಮಿಯೂ ಆಗಿದ್ದನು.

ತನ್ನ ಪರಾಕ್ರಮದಿಂದ ಜಗತ್ತನ್ನೇ ಸುತ್ತುವ ದೇವವಾಹನವನ್ನು ಪಡೆದಿದ್ದನು. ನಂತರ ಅತಿ ಆಸೆ ಗತಿಕೇಡು ಎಂಬಂತೆ ಆಸೆಗೆ ಬಿದ್ದು, ಇಂದ್ರಪದವಿ ಪಡೆಯಲು ಮಹಾಯಾಗ ಕೈಗೊಂಡಾಗ ಹೆದರಿದ ದೇವಾನುದೇವತೆಗಳು ನೆರವಿಗಾಗಿ ಶ್ರೀ ವಿಷ್ಣು ಮೊರೆಹೊಕ್ಕುತ್ತಾರೆ. ಆಗ ದೇವತೆಗಳಿಗೆ ಮುಂದೆ ಬಂದೊದಗುವ ಸಂಕಷ್ಟವನ್ನು ಪರಿಹರಿಸಲು ವಿಷ್ಣು ಬಲಿ ಚಕ್ರವರ್ತಿಯನ್ನು ವಧಿಸಲು ತಂತ್ರವೊಂದನ್ನು ರೂಪಿಸುತ್ತಾನೆ. ವಿಷ್ಣು ವಾಮನ ರೂಪದಲ್ಲಿ ಬಲಿಚಕ್ರವರ್ತಿ ಬಳಿ ಬಂದು ತಪಸ್ಸು ಮಾಡಲು ಮೂರು ಅಡಿ ಜಾಗ ಕೇಳುತ್ತಾನೆ.

ತನ್ನ ಬಳಿಗೆ ಬೇಡಿ ಬಂದವರನ್ನು ಬರಿಕೈಯಲ್ಲಿ ಕಳುಹಿಸದ ಬಲಿ ಚಕ್ರವರ್ತಿ ಮಾತು ಕೊಡುತ್ತಾನೆ. ಆಗ ವಾಮನ ರೂಪದಲ್ಲಿದ್ದ ವಿಷ್ಣು ತ್ರಿವಿಕ್ರಮನಾಗಿ ಬೆಳೆದು ಒಂದು ಪಾದದಿಂದ ಭೂಮಿಯನ್ನೂ, ಮತ್ತೊಂದು ಪಾದದಿಂದ ಆಕಾಶವನ್ನೂ ಅಳೆದು ಮೂರನೇ ಹೆಜ್ಜೆಯನ್ನು ಎಲ್ಲಿಡಲಿ ಎಂದು ಕೇಳಿದಾಗ ಆಗ ಮಾತಿಗೆ ತಪ್ಪದ ಬಲಿಚಕ್ರವರ್ತಿ ತನ್ನ ತಲೆಯನ್ನೇ ಒಡ್ಡುತ್ತಾನೆ. ವಾಮನ ರೂಪದಲ್ಲಿದ್ದ ವಿಷ್ಣು ಆತನ ತಲೆಯನ್ನು ಮೆಟ್ಟುತ್ತಿದ್ದಂತೆಯೇ ಬಲಿಚಕ್ರವರ್ತಿ ಪಾತಾಳ ಸೇರುತ್ತಾನೆ.

ಪಾತಾಳ ಸೇರುವ ಮೊದಲು ಬಲಿ ಚಕ್ರವರ್ತಿ ತನ್ನ ಪ್ರಜೆಗಳನ್ನು ವರುಷಕ್ಕೊಮ್ಮೆ ನೋಡಲು ಅನುಮತಿಯನ್ನು ಬೇಡುತ್ತಾನೆ. ಅದಕ್ಕೆ ವಿಷ್ಣು ಒಪ್ಪಿಗೆ ನೀಡುತ್ತಾನೆ. ಅದರಂತೆ ಪ್ರತಿವರುಷ ತಿರುಓಣಂ ದಿನ ಬಲಿಚಕ್ರವರ್ತಿ ಪ್ರಜೆಗಳನ್ನು ನೋಡಲು ಬರುತ್ತಾನೆ ಎಂಬ ನಂಬಿಕೆ ಕೇರಳಿಗರಲ್ಲಿ ಈಗಲು ಮನೆ ಮಾಡಿದೆ. ಅದಕ್ಕಾಗಿ ಮನೆಗಳ ಅಂಗಳದಲ್ಲಿ ಹೂವಿನ ರಂಗೋಲಿ(ಪೊಳಕಂ) ಹಾಕಿ, ವಿವಿಧ ಭಕ್ಷ್ಯ ಭೋಜನಗಳನ್ನು ತಯಾರಿಸಿ ಬಲಿಚಕ್ರವರ್ತಿಗಾಗಿ ಕಾಯುವುದು ಇಂದಿಗೂ ರೂಢಿಯಲ್ಲಿದೆ. ಕೇರಳದ ನಾಡಹಬ್ಬವಾಗಿರುವ ಓಣಂಅನ್ನು ಕೇರಳದಲ್ಲಿ ಮಾತ್ರ ಆಚರಿಸದೆ ಕೇರಳಿಗರು ಎಲ್ಲೆಲ್ಲಿ ನೆಲೆಸಿದ್ದಾರೋ ಅಲ್ಲೆಲ್ಲಾ ಆಚರಿಸಲಾಗುತ್ತಿದೆ.

ನಂತರ ಓಣಂ ಅಂಗವಾಗಿ ತಯಾರಿಸಲಾದ ವಿವಿಧ ಭಕ್ಷ್ಯ ಭೋಜನಗಳನ್ನು ಬಂಧು-ಮಿತ್ರರೊಂದಿಗೆ ಒಟ್ಟಿಗೆ ಸೇರಿ ಸವಿದರು.

ಜಾತಿ, ಮತ,ಬಡವ, ಬಲ್ಲಿದ ಎಂಬ ಭೇದವಿಲ್ಲದೆ ಮಲೆಯಾಳಿ ಭಾಷಿಕರಾದ ಹಿಂದೂ, ಮುಸ್ಲಿಂ, ಕ್ರೈಸ್ತರು ಕೇರಳಿಗರ ಹೊನ್ನಿನ ಹಬ್ಬ ಓಣಂವನ್ನು ಸಂಭ್ರಮ ಸಡಗರದಿಂದ ಆಚರಿಸಿ, ಸಂಭ್ರಮಿಸಿದರು.

ಸ್ವಾತಂತ್ರ್ಯ ತಂದು ಕೊಟ್ಟವರನ್ನು ಸ್ಮರಿಸುವುದು ನಮ್ಮ ಕರ್ತವ್ಯ

ಗಣಪತಿ ಸಮಿತಿಯಿಂದ ನೃತ್ಯ ಕಾರ್ಯಕ್ರಮ, ಸಾಧಕರಿಗೆ ಸನ್ಮಾನ



ವಿರಾಜಪೇಟೆ, ಸೆ.8- ಸಾಂಸ್ಕೃತಿಕ ಕಾರ್ಯಕ್ರಮಗಳು ಎಲ್ಲರ ಮನಸಲ್ಲಿ ಸಂತೋಷವನ್ನುಂಟು ಮಾಡುವಂತದ್ದು, ಈಗಾಗಲೇ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವವನ್ನು ಎಲ್ಲರೂ ಆಚರಿಸಿದ್ದೇವೆ. ಸ್ವಾತಂತ್ರ್ಯ ತಂದು ಕೊಟ್ಟವರನ್ನು ನೆನಪಿಸುವ ಮೂಲಕ ನಮ್ಮ ಕರ್ತವ್ಯ ಮಾಡುವಂತಾಗಬೇಕು ಎಂದು ಅರಮೇರಿ ಕಳಂಚೇರಿ ಶ್ರೀ ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಕರೆ ನೀಡಿದರು.

ವಿರಾಜಪೇಟೆ ಗಾಂಧಿನಗರದ ಶ್ರೀ ಗಣಪತಿ ಸೇವಾ ಸಮಿತಿ ವತಿಯಿಂದ 30ನೇ ವರ್ಷದ ಗೌರಿ ಗಣೇಶೋತ್ಸವದ ಅಂಗವಾಗಿ ಏರ್ಪಡಿಸಿದ್ದ ನೃತ್ಯ ಕಾರ್ಯಕ್ರಮ ಹಾಗೂ ಉತ್ತಮ ಸಾಧನೆಗೈದ ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಸ್ವಾಮೀಜಿ, ಧರ್ಮ ಅಂದರೆ ಎಲ್ಲಾ ವಸ್ತುಗಳನ್ನು ಪ್ರೀತಿಯಿಂದ ಕಾಣುವಂತಾಗಬೇಕು. ಸಾಲು ಮರದ ತಿಮ್ಮಕ್ಕ ರಾಷ್ಟ್ರವೇ ಗುರುತಿಸುವಂತ ಕಾರ್ಯ ಮಾಡಿದ್ದಾರೆ. ದೇಶ ಸರ್ವ ಜನಾಂಗದ ಶಾಂತಿಯ ತೋಟ, ನಾವೆಲ್ಲರೂ ಒಗ್ಗಟ್ಟಿನಿಂದ ಬಾಳುವಂತಾಗಬೇಕು ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಸಮಾಜ ಸೇವಕ ಜನಪರ ಹೋರಾಟಗಾರ ಮೇರಿಯಂಡ ಸಂಕೇತ್ ಪೂವಯ್ಯ ಮಾತನಾಡಿ, ಗಾಂಧಿನಗರದ ಗಣಪತಿ ಸೇವಾ ಸಮಿತಿಯವರು ವಿಭಿನ್ನ ರೀತಿಯಲ್ಲಿ ಉತ್ಸವವನ್ನು ಆಚರಿಸುವ ಮೂಲಕ ಸ್ಥಳೀಯ ಗ್ರಾಮೀಣ ಪ್ರದೇಶದ ಎಲೆಮರೆಯ ಕಾಯಿಯಂತಿರುವ ಪ್ರತಿಭೆಗಳಿಗೆ ಅವಕಾಶ ನೀಡುತ್ತಿದ್ದು ಮಕ್ಕಳು ಈ ವೇದಿಕೆಯನ್ನು ಬಳಸಿಕೊಂಡು ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿಯು ಪ್ರಶಸ್ತಿ ಪಡೆಯುವಂತಾಗಲಿ ಎಂದರು.

ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳನ್ನು ಗುರುತಿಸಿ ಬಹುಮಾನ ಹಾಗೂ ಪ್ರೋತ್ಸಾಹ ನೀಡುತ್ತಿರುವುದು ಶ್ಲಾಘನೀಯ ಎಂದ ಸಂಕೇತ್ ಪೂವಯ್ಯ ಅವರು, ಪ್ರಕೃತಿ ವಿಕೋಪದ ಸಂದರ್ಭ ಪಿ.ಎ.ಮಂಜುನಾಥ್ ಅವರ ತಂಡ ಅನೇಕರಿಗೆ ಸಹಾಯಹಸ್ತ ನೀಡಿ ಸಮಾಜ ಸೇವೆ ಮಾಡುವಂತ ಉತ್ತಮ ಕಾರ್ಯಕ್ಕೆ ಸದಾ ಬೆಂಬಲ ನೀಡುವುದಾಗಿ ಹೇಳಿದರು.

ಹೈಕೋರ್ಟ್ ಹಿರಿಯ ವಕೀಲರು ಮತ್ತು ಕೆಪಿಸಿಸಿ ಕಾನೂನು ಘಟಕದ ಮುಖ್ಯಸ್ಥರಾದ ಎ.ಎಸ್.ಪೊನ್ನಣ್ಣ ಅವರು ಮಾತನಾಡಿ, ಕೊಡಗಿನಲ್ಲಿ ಕಳೆದ ಎರಡು ವರ್ಷಗಳ ಹಿಂದೆ ಪ್ರಕೃತಿ ವಿಕೋಪ ಸಂದರ್ಭ ಅನೇಕರು ಆಸ್ತಿ ಮನೆ ಕಳೆದುಕೊಂಡಿದ್ದರು. ಇನ್ನು ಮುಂದೆ ಹಾಗೆ ಆಗದಂತೆ ದೇವರಲ್ಲಿ ಎಲ್ಲರು ಪ್ರಾರ್ಥಿಸೋಣ. ಯಾರೇ ಆಗಲಿ ಕಷ್ಟದಲ್ಲಿರುವುದನ್ನು ಕಂಡಾಗ ಅವರಿಗೆ ಕೈಲಾದಷ್ಟು ಸಹಾಯ ಮಾಡುವಂತಗಬೇಕು. ಮಹಾಗಣಪತಿ ಎಲ್ಲರಿಗೂ ಸುಖ ಶಾಂತಿ ನೆಮ್ಮದಿ ನೀಡುವಂತಾಗಲಿ ಎಂದರು.

ಕಾರ್ಯಕ್ರಮದ ಮೊದಲಿಗೆ ಮೈಸೂರಿನ ಚಾಮುಂಡಿ ವಿಹಾರ್ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ರಾಷ್ಟ್ರೀಯ ಮಟ್ಟದ ಕರಾಟೆ ಚಾಂಪಿಯನ್ ಶಿಪ್‌ನಲ್ಲಿ (ವೈಯಕ್ತಿಕ ಕುಮಿತೆ) ಚಿನ್ನದ ಪದಕ ಗೆದ್ದಿರುವ ವಿ.ಎಂ. ಪ್ರಜ್ವಲ್ ಮಂಜುನಾಥ್ ಅವರಿಗೆ ಶಾಂತ ಮಲ್ಲಿಕಾರ್ಜುನ ಸ್ವಾಮಿ ಹಾಗೂ ಅತಿಥಿಗಳು ಸನ್ಮಾನಿಸಿ, ಗೌರವಿಸಿದರು. ಗಣಪತಿ ಸೇವಾ ಸಮಿತಿಯ ಅಧ್ಯಕ್ಷ ಪಿ.ನಿತಿನ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಉದ್ಯಮಿ ಅಂಜಪರವಂಡ ಅನಿಲ್, ಇಂಜಿನಿಯರ್ ಬಿ.ಎಸ್.ಪ್ರಕಾಶ್, ಕಾಫಿ ಬೆಳೆಗಾರ ಕಾಳೇಂಗಡ ಜೈನ್, ಮ್ಯಾಗ್ನೋಲಿಯ ರೆಸಾರ್ಟ್‌ನ ಪ್ರವೀಣ್ ಅರವಿಂದ ಉಪಸ್ಥಿತರಿದ್ದರು. ಗಣಪತಿ ಸಮಿತಿಯ ಪಿ.ಎ. ಮಂಜುನಾಥ್ ಸ್ವಾಗತಿಸಿದರು. ಎಂ.ಎಂ. ಶಶಿಧರನ್ ನಿರೂಪಿಸಿ, ವಂದಿಸಿದರು.

ಕಾಡಾನೆ ದಾಳಿಗೆ ಕಾರು ಜಖಂ



ಸಿದ್ದಾಪುರ, ಸೆ.8- ಮನೆ ಮುಂದೆ ನಿಲ್ಲಿಸಿದ್ದ ಕಾರಿನ ಮೇಲೆ ಕಾಡಾನೆಯೊಂದು ದಾಳಿ ಮಾಡಿದ ಪರಿಣಾಮ ಕಾರು ಜಖಂಗೊಂಡಿರುವ ಘಟನೆ ವಿರಾಜಪೇಟೆ ತಾಲೂಕಿನ ಮಾಲ್ದಾರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತಟ್ಟಳ್ಳಿಯಲ್ಲಿ ನಡೆದಿದೆ.

ಮಾಲ್ದಾರೆಯ ಕೃಷಿ ಪತ್ತಿನ ಸಹಕಾರ ಬ್ಯಾಂಕ್‌ನ ಸಿಬ್ಬಂದಿ ಮಧು ಪ್ರಕಾಶ್ ಅವರು ಎಂದಿನಂತೆ ತಮ್ಮ ಕಾರನ್ನು ಮನೆ ಮುಂದೆ ನಿಲ್ಲಿಸಿದ್ದರು.

ರಾತ್ರಿ ವೇಳೆಯಲ್ಲಿ ಬಂದ ಕಾಡಾನೆ ಕಾರಿನ ಮೇಲೆ ದಾಳಿ ಮಾಡಿ ಜಖಂಗೊಳಿಸಿದೆ. ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ.

ಶಾಲಾ ಬಸ್ಸುಗಳ ಮುಖಾ-ಮುಖಿ ಡಿಕ್ಕಿ: ಚಾಲಕನಿಗೆ ಗಾಯ

ನಾಪೋಕ್ಲು, ಸೆ.8- ಶಾಲಾ ಮಕ್ಕಳನ್ನು ಕರೆತರಲು ತೆರಳುತ್ತಿದ್ದ ಎರಡು ಖಾಸಗಿ ಶಾಲೆಗಳ ಬಸ್ಸುಗಳು ಗುರುವಾರ ಬೆಳಿಗ್ಗೆ ಮುಖಾಮುಖಿ ಡಿಕ್ಕಿಯಾಗಿ ಜಖಂಗೊಂಡಿದ್ದು, ವಿದ್ಯಾರ್ಥಿಗಳು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಇಲ್ಲಿನ ಶ್ರೀ ರಾಮ ಟ್ರಸ್ಟ್ ಶಾಲೆಯ ಬಸ್ ಕಕ್ಕಬ್ಬೆಯಿಂದ ಪಾಡಿ ಶ್ರೀ ಇಗ್ಗುತ್ತಪ್ಪ ದೇವಾಲಯದತ್ತ ತೆರಳುತ್ತಿದ್ದಾಗ ಎದುರು ಭಾಗದಿಂದ ಬಂದ ಅಂಕುರ್ ಶಾಲೆಯ ಬಸ್ಸಿಗೆ ಡಿಕ್ಕಿಯಾಗಿದೆ. ಅಂಕುರ್ ಶಾಲಾ ಬಸ್ಸಿನಲ್ಲಿ ಮೂವರು ವಿದ್ಯಾರ್ಥಿಗಳಿದ್ದು, ಬಸ್ ಚಾಲಕ ರಿಯಾಜ್ ಅವರ ಕಾಲಿಗೆ ಪೆಟ್ಟಾಗಿದ್ದು, ನಾಪೋಕ್ಲು ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಲಾಗಿದೆ.

ಶ್ರೀ ರಾಮ ಟ್ರಸ್ಟ್ ಶಾಲೆಯ ಬಸ್‌ನ್ನು ಚಾಲಕ ಹರ್ಷಾದ್ ಚಲಾಯಿಸುತ್ತಿದ್ದರು. ನಾಪೋಕ್ಲು ಠಾಣಾಧಿಕಾರಿ ಸದಾಶಿವ, ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಮುಂದಿನ ಕ್ರಮಕೈಗೊಂಡಿದ್ದಾರೆ.



ಬಸ್‌ಗಳನ್ನು ಅತಿವೇಗದಿಂದ ಚಲಾಯಿಸುತ್ತಿದ್ದುದು ಅಪಘಾತಕ್ಕೆ ಕಾರಣ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

ಶಿಕ್ಷಣ ಇಲಾಖೆ ನೌಕರ ನೇಣಿಗೆ ಶರಣು

ಮಡಿಕೇರಿ, ಸೆ.8- ಮಂಗಳೂರಿನ ಶಿಕ್ಷಣ ಇಲಾಖೆಯ ನೌಕರರೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾದ ಘಟನೆ ಮಡಿಕೇರಿಯ ಲಾಡ್ಜ್ ಒಂದರಲ್ಲಿ ನಡೆದಿದೆ.

ಮಂಗಳೂರಿನ ಶಿಕ್ಷಣ ಇಲಾಖೆಯಲ್ಲಿ ನೌಕರನಾಗಿರುವ ಶಿವಾನಂದ್(45) ಮೃತ ವ್ಯಕ್ತಿಯಾಗಿದ್ದಾರೆ. ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿಯ ಲಾಡ್ಜ್‌ನಲ್ಲಿ ಶಿವಾನಂದ್ ಮೃತದೇಹ ಪತ್ತೆಯಾಗಿದೆ. ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಮೃತರ ಸಹೋದರ ಕೃಷ್ಣಾನಂದ ನೀಡಿರುವ ದೂರನ್ನು ದಾಖಲಿಸಿಕೊಂಡಿರುವ ಮಡಿಕೇರಿ ನಗರ ಠಾಣಾ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಸೆ.12ರಂದು ಸ್ವಯಂ ಪ್ರೇರಿತ ರಕ್ತದಾನ ಶಿಬಿರ

ಸೋಮವಾರಪೇಟೆ, ಸೆ.8- ಗೌಡಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಗ್ರಾಮ ಪಂಚಾಯಿತಿ ಸಹಯೋಗದಲ್ಲಿ ಸೆ.12ರಂದು ಬೆಳಗ್ಗೆ 10ಗಂಟೆಗೆ ಕೃಷಿ ಪತ್ತಿನ ಸಹಕಾರ ಸಂಘದ ಸಭಾಂಗಣದಲ್ಲಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಆಯೋಜಿಸಲಾಗಿದೆ.

ಅಬ್ಬೂರುಕಟ್ಟೆಯಲ್ಲಿ ಮೇರಿ ಮಾತೆಯ ಹಬ್ಬ ಆಚರಣೆ

ಸೋಮವಾರಪೇಟೆ, ಸೆ.8- ಸಮೀಪದ ಅಬ್ಬೂರುಕಟ್ಟೆ ಸಂತ ಲಾರೆನ್ಸ್‌ರ ದೇವಾಲಯದ ಮೇರಿ ಮಾತೆಯ ಹಬ್ಬವನ್ನು ಕ್ರೈಸ್ತ ಬಾಂಧವರು ಹೊಸ ಭತ್ತವನ್ನು ಪಡೆಯುವ ಮೂಲಕ ಸಡಗರ ಸಂಭ್ರಮದಿಂದ ಗುರುವಾರ ಆಚರಿಸಿದರು. ಧರ್ಮ ಕೇಂದ್ರದ ಗುರುಗಳಾದ ಸ್ವಾಮಿ ಜಾನ್ ಡಿಕುನ್ಹ ಹಬ್ಬದ ಬಲಿಪೂಜೆಯನ್ನು ನೆರವೇರಿಸಿದರು. ಹೊಸ ಭತ್ತವನ್ನು ಆಶೀರ್ವದಿಸಿ ಭಕ್ತಾದಿಗಳಿಗೆ ವಿತರಿಸಲಾಯಿತು. ಮೇರಿ ಮಾತೆಗೆ ಭಕ್ತಾದಿಗಳು ಹಾಗೂ ಮಕ್ಕಳು ತಂದಂತಹ ಹೂಗಳನ್ನು ಅರ್ಪಿಸಿ, ಪೂಜಾ ವಿಧಿಯಲ್ಲಿ ಭಾಗವಹಿಸಿದ್ದರು. ಮಕ್ಕಳಿಗೆ ಕಬ್ಬನ್ನು ವಿತರಿಸಲಾಯಿತು. ಕ್ರೈಸ್ತ ಬಾಂಧವರಿಗೆ ಇದು ಹೊಸ ಅಕ್ಕಿಯನ್ನು ಊಟ ಮಾಡುವ ಪ್ರಮುಖ ಹಬ್ಬವಾಗಿದೆ.

ಬಾಲಕಿಯನ್ನು ಪೀಡಿಸಿದ ಯುವಕನ ಪೋಕ್ಸೋ ಕಾಯ್ದೆಯಡಿ ಬಂಧನ

ಕುಶಾಲನಗರ, ಸೆ.8- ಬಾಲಕಿಯನ್ನು ಪೀಡಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಯುವಕನೋರ್ವನನ್ನು ಬಂಧಿಸಿದ ಘಟನೆ ನಡೆದಿದೆ. ಹೇಮಂತ್ ಕುಮಾರ್(22) ಬಂಧಿತ ಆರೋಪಿ. ಮುಳ್ಳುಸೋಗೆಯ ಜನತಾ ಕಾಲೋನಿ ನಿವಾಸಿಗಳಾದ ಮಂಜುನಾಥ್ ಹಾಗೂ ರೇಖಾ ದಂಪತಿಗಳ ಪುತ್ರನಾದ ಹೇಮಂತ್ ಕುಮಾರ್, ಕುಶಾಲನಗರದಲ್ಲಿ ಆಟೋ ಚಾಲನೆ ಮಾಡುತ್ತಿದ್ದ. ಬುಧವಾರ ಬಾಲಕಿ ಶಾಲೆಬಿಟ್ಟು ತೆರಳುವ ಸಂದರ್ಭ, ಆರೋಪಿ ಹೇಮಂತ್ ಕುಮಾರ್ ಬಾಲಕಿಯನ್ನು ಪೀಡಿಸಿದ್ದ ಎಂದು ಬಾಲಕಿಯ ತಂದೆ ಕುಶಾಲನಗರ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ದೂರು ಸ್ವೀಕರಿಸಿದ ಪೊಲೀಸರು, ಆರೋಪಿಯನ್ನು ಬಂಧಿಸಿದ್ದಾರೆ. 2012 ರ ಪೋಕ್ಸೋ ಕಾಯ್ದೆಯಡಿ ಯುವಕನ ಮೇಲೆ ಪ್ರಕರಣ ದಾಖಲಿಸಿ, ಮುಂದಿನ ಕ್ರಮ ಕೈಗೊಂಡಿದ್ದಾರೆ. ಸದ್ಯ ಹೇಮಂತ್ ಕುಮಾರ್ 15 ದಿನಗಳ ಕಾಲ ನ್ಯಾಯಾಂಗ ಬಂಧನದಲ್ಲಿದ್ದಾನೆ.

ಇಂತಹ ವಿಕೃತಕಾಮಿಗಳಿಂದ ಮಕ್ಕಳನ್ನು ಶಾಲೆಗೆ ಕಳುಹಿಸಲು ಭಯವಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿರುವ ಸಾರ್ವಜನಿಕರು, ಆರೋಪಿಯ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಮಾತೆ ಮರಿಯಮ್ಮ ಜಯಂತಿ ಮಹೋತ್ಸವ ಆಚರಣೆ



ವಿರಾಜಪೇಟೆ, ಸೆ.8- ವಿರಾಜಪೇಟೆ ಸಂತ ಅನ್ನಮ್ಮ ದೇವಾಲಯದಲ್ಲಿ ಮಾತೆ ಮರಿಯಮ್ಮನವರ ಜಯಂತಿ ಮಹೋತ್ಸವವನ್ನು ಸಕಲ ವೈಭವದಿಂದ ಆಚರಿಸಲಾಯಿತು.

ಜಯಂತಿ ಅಂಗವಾಗಿ 9 ದಿನಗಳ ಕಾಲ ಭಕ್ತಾದಿಗಳು ಪ್ರಾರ್ಥನೆ ಹಾಗೂ ಪೂಜೆ ಸಲ್ಲಿಸಿದರು. ಇಂದು ಮಳೆಯನ್ನು ಲೆಕ್ಕಿಸದೆ ಸಾವಿರಕ್ಕೂ ಹೆಚ್ಚು ಭಕ್ತಾದಿಗಳು ಮಾತೆ ಮರಿಯಮ್ಮನವರಿಗೆ ಹೂ ಅರ್ಪಿಸುವುದರೊಂದಿಗೆ ವಿಶ್ವ ವಿಖ್ಯಾತ ಮರಿಯಮ್ಮನ ಹುಟ್ಟು ಹಬ್ಬವನ್ನು ವೈಭವದಿಂದ ಆಚರಿಸಿದರು.

ಪೂಜೆ ಹಾಗೂ ಪ್ರಾರ್ಥನೆ ಸಲ್ಲಿಸುವ ಸಂದರ್ಭ ಸಂತ ಅನ್ನಮ್ಮ ದೇವಾಲಯದ ಧರ್ಮ ಗುರುಗಳಾದ ದಯಾನಂದ ಪ್ರಭು, ಐಜಾಕ್ ರತ್ನಕರ, ಏಸು ಪ್ರಸಾದ್, ಕುಶಾಲನಗರ ತಪವನ ದೇವಾಲಯದ ಜಾನ್ ಲೋಬೊ, ಸಂತ ಅನ್ನಮ್ಮ ದೇವಾಲಯದ ಸದಸ್ಯರುಗಳು ಉಪಸ್ಥಿತರಿದ್ದರು. ವಿರಾಜಪೇಟೆ ನಗರ ಮತ್ತು ಗ್ರಾಮೀಣ ಭಾಗದಿಂದಲೂ ಭಕ್ತಾದಿಗಳು ಭಾಗವಹಿಸಿದ್ದರು. ಈ ಸಂದರ್ಭ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

ಇಂದು ವಿ.ಪೇಟೆಯಲ್ಲಿ ಗಣೇಶ ವಿಸರ್ಜನೆ ಮೆರವಣಿಗೆ

ಇಂದಿನಿಂದ ನಾಳೆ ಬೆಳಗ್ಗೆವರೆಗೆ ತಾತ್ಕಾಲಿಕ ವಾಹನ ನಿಲುಗಡೆ, ಬದಲಿ ಸಂಚಾರ ವ್ಯವಸ್ಥೆ

ಮಡಿಕೇರಿ, ಸೆ.8- ವಿರಾಜಪೇಟೆಯಲ್ಲಿ ನಾಳೆ (ಸೆ.9) ಮತ್ತು ನಾಳಿದ್ದು (ಸೆ.10) ನಡೆಯುವ ಗಣೇಶ ವಿಗ್ರಹ ವಿಸರ್ಜನೆ ಸಂಬಂಧ ಕಾನೂನು ಸುವ್ಯವಸ್ಥೆ ಕಾಪಾಡುವ ಸಲುವಾಗಿ ಹಾಗೂ ಸುಗಮ ವಾಹನ ಸಂಚಾರ ವ್ಯವಸ್ಥೆಯ ಹಿತದೃಷ್ಟಿಯಿಂದ ಸೆ.9ರ ಮಧ್ಯಾಹ್ನ 12 ಗಂಟೆಯಿಂದ ಸೆ.10ರ ಬೆಳಗ್ಗೆ 10 ಗಂಟೆಯವರೆಗೆ ವಿರಾಜಪೇಟೆ ಪಟ್ಟಣ ವ್ಯಾಪ್ತಿಯಲ್ಲಿ ತಾತ್ಕಾಲಿಕ ವಾಹನ ಸಂಚಾರ ನಿಲುಗಡೆ ವ್ಯವಸ್ಥೆ ನಿರ್ವಹಿಸಲು ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಆದೇಶಿಸಿದ್ದಾರೆ.

ಪೆರುಂಬಾಡಿ ಕಡೆಯಿಂದ ವಿರಾಜಪೇಟೆ ನಗರಕ್ಕೆ ಉತ್ಸವ ವೀಕ್ಷಣೆಗೆ ಬರುವ ವಾಹನಗಳನ್ನು ವಿರಾಜಪೇಟೆ ತಾಲೂಕು ತಹಸೀಲ್ದಾರ್‌ರವರ ಕಚೇರಿಯ ಮುಂಭಾಗದಿಂದ ಅರ್ಜಿ ಕಡೆಗೆ ಹೋಗುವ ರಸ್ತೆಯ ಎಡಭಾಗದಲ್ಲಿ ಬದಿಯಲ್ಲಿ ಮಾತ್ರ ನಿಲ್ಲಿಸುವುದು.

ಕೇರಳದ ಮಾಕುಟ್ಟ ಮಾರ್ಗವಾಗಿ ಗೋಣಿಕೊಪ್ಪದ ಕಡೆ ಅಥವಾ ಸಿದ್ದಾಪುರದ ಕಡೆಗಳಿಗೆ ಹೋಗುವ ವಾಹನಗಳಿಗೆ ಪೆರುಂಬಾಡಿ ಚೆಕ್‌ಪೋಸ್ಟ್-ಬಾಳುಗೋಡು-ಬಿಟ್ಟಂಗಾಲ ಜಂಕ್ಷನ್-ಕೈಕೇರಿ ಜಂಕ್ಷನ್-ಸಿ.ಎಂ. ಪೂಣಚ್ಚನವರ ಮನೆಯ ರಸ್ತೆ ಜಂಕ್ಷನ್ ಮಾರ್ಗವಾಗಿ ಪಾಲಿಬೆಟ್ಟ-ಸಿದ್ದಾಪುರಕ್ಕೆ ಹೋಗುವುದು.

ಅದೇ ರೀತಿ ಸಿದ್ದಾಪುರ ಕಡೆಯಿಂದ ಕೇರಳದ ಕಡೆ ಹೋಗುವ ವಾಹನಗಳು ಕೈಕೇರಿ-ಬಿಟ್ಟಂಗಾಲ-ಬಾಳುಗೋಡು - ಪೆರುಂಬಾಡಿ ಮಾರ್ಗವಾಗಿ ಕೇರಳದ ಕಡೆ ಹೋಗುವುದು. ಮಡಿಕೇರಿಯಿಂದ ಕೇರಳದ ಕಡೆ ಹೋಗುವ ವಾಹನಗಳು ಸಿದ್ದಾಪುರ-ಪಾಲಿಬೆಟ್ಟ-ಕೈಕೇರಿ-ಬಿಟ್ಟಂಗಾಲ-ಬಾಳುಗೋಡು-ಪೆರುಂಬಾಡಿ-ಮಾಕುಟ್ಟ ಮಾರ್ಗವಾಗಿ ಹೋಗುವುದು.

ಮಡಿಕೇರಿ ಕಡೆಯಿಂದ ಮೈಸೂರು-ಬೆಂಗಳೂರಿಗೆ ಹೋಗುವ ವಾಹನಗಳು ಸಿದ್ದಾಪುರ ಮಾರ್ಗವಾಗಿ ಗೋಣಿಕೊಪ್ಪ-ಮೈಸೂರು, ಬೆಂಗಳೂರಿಗೆ ಹೋಗುವುದು. ಸಿದ್ದಾಪುರ ಕಡೆಯಿಂದ ಮೆರವಣಿಗೆ ನೋಡಲು ವಿರಾಜಪೇಟೆಗೆ ಬರುವ ವಾಹನಗಳು ಮಗ್ಗುಲ ಜಂಕ್ಷನ್ (ಡೆಂಟಲ್ ಕಾಲೇಜ್ ಜಂಕ್ಷನ್) ಮತ್ತು ರವಿರಾಜ್ ಗ್ಯಾಸ್ ಏಜೆನ್ಸಿ ಕಚೇರಿಯಿಂದ ಐಮಂಗಲ ಕಡೆಗೆ ಹೋಗುವ ರಸ್ತೆಯ ಎಡಬದಿಯಲ್ಲಿ ನಿಲ್ಲಿಸತಕ್ಕದ್ದು.

ಗೋಣಿಕೊಪ್ಪ ಕಡೆಯಿಂದ ಮೆರವಣಿಗೆ ನೋಡಲು ಬರುವಂತಹ ವಾಹನಗಳನ್ನು ಪಂಜರುಪೇಟೆಯ ಸರ್ವೋದಯ ಕಾಲೇಜಿನ ಬಳಿಯಿಂದ ಕಾವೇರಿ ಕಾಲೇಜು ಕಡೆಗೆ ಎಡಬದಿಯಲ್ಲಿ ಮಾತ್ರ ನಿಲುಗಡೆ ಮಾಡುವುದು. ಬೇಟೋಳಿ, ಗುಂಡಿಗೆರೆ, ಚಿಟ್ಟಡೆ ಕಡೆಯಿಂದ ಮಹಿಳಾ ಸಮಾಜ ಮಾರ್ಗವಾಗಿ ಮೆರವಣಿಗೆ ನೋಡಲು ಬರುವಂತಹ ವಾಹನಗಳು ಮಹಿಳಾ ಸಮಾಜ ರಸ್ತೆಯ ಎಡಬದಿಯಲ್ಲಿ ನಿಲ್ಲಿಸತಕ್ಕದ್ದು. ಮೈಸೂರು-ಬೆಂಗಳೂರು ಕಡೆಯಿಂದ ಮಡಿಕೇರಿಗೆ ಹೋಗುವ ವಾಹನಗಳು ಗೋಣಿಕೊಪ್ಪ-ಸಿದ್ದಾಪುರ ಮಾರ್ಗವಾಗಿ ಮಡಿಕೇರಿ ಹೋಗುವುದು.


ಸೆ.9ರ ಮಧ್ಯಾಹ್ನ 12 ಗಂಟೆಯಿಂದ ಸೆ.10ರ ಬೆಳಗ್ಗೆ 10 ಗಂಟೆಯವರೆಗೆ ವಿರಾಜಪೇಟೆ ನಗರದ ತೆಲುಗರ ಬೀದಿ, ದೊಡ್ಡಟ್ಟಿ ವೃತ್ತ ಅಪ್ಪಯ್ಯ ಸ್ವಾಮಿ ರಸ್ತೆ ದಖ್ಖನಿ ಮೊಹಲ್ಲಾ ರಸ್ತೆ, ಅರಸು ನಗರ ರಸ್ತೆ, ಎಫ್.ಎಂ.ಸಿ. ರಸ್ತೆ, ಗಡಿಯಾರ ಕಂಬ, ಮಲಬಾರ್ ರಸ್ತೆ, ಗೌರಿಕೆರೆ ರಸ್ತೆ, ಮೀನುಪೇಟೆ ರಸ್ತೆಯ ವಿರಾಜಪೇಟೆ ತಾಲೂಕು ತಹಶೀಲ್ದಾರ್‌ರವರ ಕಚೇರಿವರೆಗೆ ಹಾಗೂ ದೊಡ್ಡಟ್ಟಿ ವೃತ್ತದಿಂದ ಪಂಜರುಪೇಟೆ ಸರ್ವೋದಯ ಕಾಲೇಜಿನವರೆಗೆ ಹಾಗೂ ಮಗ್ಗುಲ ಜಂಕ್ಷನ್‌ನಿಂದ ದಖ್ಖನಿ ಮೊಹಲ್ಲಾ ಜಂಕ್ಷನ್‌ವರೆಗೆ ಯಾವುದೇ ವಾಹನಗಳನ್ನು ನಿಲ್ಲಿಸುವುದನ್ನು ನಿಷೇಧಿಸಿದೆ.

ಇದರೊಂದಿಗೆ ಸನ್ನಿವೇಶಕ್ಕೆ ತಕ್ಕಂತೆ ಅವಶ್ಯಕತೆ ಇದ್ದರೆ, ಆರಕ್ಷಕ ಇಲಾಖೆ ವತಿಯಿಂದ ಸಣ್ಣ-ಪುಟ್ಟ ಮಾರ್ಪಾಡುಗಳನ್ನು ಮಾಡುವ ನಿಬಂಧನೆಗಳಿಗೊಳಪಟ್ಟಿರುತ್ತದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಡಾ.ಬಿ.ಸಿ.ಸತೀಶ ಅವರು ತಿಳಿಸಿದ್ದಾರೆ.

ಮೈಸೂರು ನಗರ ಸುದ್ದಿಗಳು

ರಸ್ತೆ ಬದಿಯಲ್ಲಿ ಯುಜಿಡಿ ಪೈಪ್‌ಗಳ ರಾಶಿ

ಮೈಸೂರಿನ ಹೃದಯ ಭಾಗದಲ್ಲಿ ವಾಹನ ಸಂಚಾರಕ್ಕೆ ಅಡಚಣೆ





ಮೈಸೂರು, ಸೆ.8(ಆರ್‌ಕೆ)- ಭೂಮಿಯಲ್ಲಿ ಅಳವಡಿಸಲೆಂದು ರಸ್ತೆ ಬದಿಯಲ್ಲಿ ದೊಡ್ಡ ದೊಡ್ಡ ಸಿಮೆಂಟ್ ಕಾಂಕ್ರಿಟ್ ಯುಜಿಡಿ ಪೈಪುಗಳನ್ನು ಇರಿಸಿರುವುದರಿಂದ ಮೈಸೂರಿನ ಲಷ್ಕರ್ ಮೊಹಲ್ಲಾದ ಸಬರ್ಬನ್ ಬಸ್ ಸ್ಟ್ಯಾಂಡ್ ಸಮೀಪ ಬಿ.ಎನ್.ರಸ್ತೆಯಲ್ಲಿ ವಾಹನ ಸಂಚಾರಕ್ಕೆ ತೀವ್ರ ತೊಂದರೆಯಾಗುತ್ತಿದೆ.

ಫೈವ್‌ಲೈಟ್ ಸರ್ಕಲ್‌ನಿಂದ ಕೆಎಸ್‌ಆರ್‌ಟಿಸಿ ಗ್ರಾಮಾಂತರ ಬಸ್ ನಿಲ್ದಾಣದವರೆಗೆ ರಸ್ತೆ ಬದಿಯಲ್ಲಿ ರಾಶಿ ರಾಶಿ ಯುಜಿಡಿ ಪೈಪ್‌ಗಳನ್ನು ಅಡ್ಡಲಾಗಿ ಜೋಡಿಸಿ 15 ದಿನಗಳಾಯಿತು. ಪರಿಣಾಮ ಕಿರಿದಾಗಿರುವ ರಸ್ತೆಯಲ್ಲಿ ಸಾರಿಗೆ ಬಸ್ ಸೇರಿದಂತೆ ಇತರ ವಾಹನಗಳ ಸಂಚಾರ ದುಸ್ತರವಾಗಿದೆ. ಅಷ್ಟೇ ಅಲ್ಲದೇ ಬಸ್ ಸ್ಟ್ಯಾಂಡ್‌ನಿಂದ ಫೈವ್ ಲೈಟ್ ಸರ್ಕಲ್ ಕಡೆಗೆ ಬರುವ, ಬಿ.ಎನ್. ರಸ್ತೆಗೆ ಹೊಂದಿಕೊಂಡಂತಿರುವ ಎಡ ಭಾಗದ ಅಡ್ಡ ರಸ್ತೆಗಳಲ್ಲೂ ಪೈಪ್‌ಗಳನ್ನಿಟ್ಟಿರುವುದರಿಂದ ಸಂಚಾರಕ್ಕೆ ಅಡ್ಡಿಯಾಗಿದೆ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ ವತಿಯಿಂದ ಒಳ ಚರಂಡಿ ಪೈಪ್‌ಗಳನ್ನು ಬದಲಾಯಿಸುವ ಕಾಮಗಾರಿಗಾಗಿ ಈ ಪೈಪ್‌ಗಳನ್ನು 15 ದಿನಗಳ ಹಿಂದೆಯೇ ಇರಿಸಲಾಗಿದೆಯಾದರೂ, ಕೆಲಸ ಆರಂಭಿಸಿಲ್ಲ.

ಕಿರಿದಾದ ರಸ್ತೆಗಳಲ್ಲಿ ಪೈಪ್‌ಗಳು ರಾಶಿ ಬಿದ್ದಿರುವುದರಿಂದ ಸ್ಥಳೀಯರ ವಾಹನ ಓಡಾಡಲು ಅಡ್ಡಿಯಾಗಿದ್ದು, ಬೇಗ ಗುಂಡಿ ತೆಗೆದು ಪೈಪ್ ಅಳವಡಿಸಿ ಅಥವಾ ಕೆಲಸ ಆರಂಭಿಸುವವರೆಗೆ ಕಾಂಕ್ರಿಟ್ ಯುಜಿಡಿ ಪೈಪ್‌ಗಳನ್ನು ಬೇರೆಡೆಗಾದರೂ ಸ್ಥಳಾಂತರಿಸಿ ಎಂದು ಸಂಚಾರ ಠಾಣೆ ಪೊಲೀಸರು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಪತ್ರ ಬರೆದು ಕೋರಿಕೊಂಡಿದ್ದರಾದರೂ ಯಾವುದೇ ಕ್ರಮ ವಹಿಸಿಲ್ಲವಾದ್ದರಿಂದ ವಾಹನ ಸವಾರರು ಪರಿತಪಿಸುವಂತಾಗಿದೆ.

ಅದೇ ರೀತಿ ಬಿ.ಎನ್. ರಸ್ತೆಯಲ್ಲೂ ವಾಹನ ದಟ್ಟಣೆ ಹೆಚ್ಚಾಗಿರುವ ಕಾರಣ ಸಂಚಾರಕ್ಕೆ ತೀವ್ರ ಅಡಚಣೆಯಾಗುತ್ತಿದ್ದು, ರಸ್ತೆಯಲ್ಲಿ ಗುಂಡಿಗಳೂ ಆಗಿರುವುದರಿಂದ ಅಪಘಾತಗಳು ಸಂಭವಿಸಿ ಅನಾಹುತಗಳಾಗುತ್ತಿವೆ ಎಂದು ಸಂಚಾರ ಠಾಣೆ ಪೊಲೀಸರು ಪತ್ರದಲ್ಲಿ ತಿಳಿಸಿದ್ದಾರೆ.

ಮೊದಲು ಗುಂಡಿ ತೆಗೆದು ನಂತರ ಪೈಪ್‌ಗಳನ್ನು ತಂದು ಅಳವಡಿಸಿದ್ದಲ್ಲಿ ವಾಹನ ಸಂಚಾರಕ್ಕೆ ಅಡ್ಡಿಯಾಗುವುದಿಲ್ಲ. ವಾರಗಟ್ಟಲೆ ಪೈಪ್‌ಗಳನ್ನು ರಸ್ತೆ ಬದಿ ಇರಿಸಿ, ಕೆಲಸವನ್ನೂ ಮಾಡದೇ ವಿಳಂಬ ಮಾಡುತ್ತಿರುವುದರಿಂದ ಸಮಸ್ಯೆಗಳಾಗುತ್ತಿವೆ ಎಂದು ಅವರು ಪತ್ರದಲ್ಲಿ ತಿಳಿಸಿದ್ದರಾದರೂ, ಮಂಡಳಿ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ ಎಂದು ಸಂಚಾರ ಪೊಲೀಸ್ ಅಧಿಕಾರಿಗಳು ಆರೋಪಿಸಿದ್ದಾರೆ.

ದಸರಾ ಸಮೀಪಿಸುತ್ತಿದ್ದು, ವಾಹನ ಸಂಚಾರ ದಟ್ಟಣೆ ಹೆಚ್ಚಾಗುತ್ತಿದೆ. ಈಗಾಗಲೇ ಬಿ.ಎನ್. ರಸ್ತೆಯಲ್ಲಿ ಗುಂಡಿಗಳಾಗಿವೆ. ಅದರ ಜೊತೆಗೆ ಯುಜಿಡಿ ಪೈಪ್‌ಗಳನ್ನು ಇರಿಸಿರುವುದರಿಂದ ರಸ್ತೆ ಕಿರಿದಾಗಿರುವುದರಿಂದ ವಾಹನಗಳು ಓಡಾಡಲು ಅಡಚಣೆಯಾಗುತ್ತಿದೆ. ಅದೇ ರೀತಿ ಅಶೋಕ ರಸ್ತೆಯಲ್ಲೂ ತೀವ್ರ ತೊಂದರೆಯಾಗುತ್ತಿದೆ ಎಂದು ಸಾರ್ವಜನಿಕರೂ ಆರೋಪಿಸುತ್ತಿದ್ದಾರೆ.

ಕೇಂದ್ರ ರಸ್ತೆ, ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ನೇತೃತ್ವದಲ್ಲಿ

ಬೆಂಗಳೂರಿನ ಸಂಚಾರ ದಟ್ಟಣೆಯೂ ಸೇರಿ ರಾ.ಹೆ. ಸಮಸ್ಯೆಗಳ ಬಗ್ಗೆ ಚರ್ಚೆ



ಬೆಂಗಳೂರು, ಸೆ.8- ಕೇಂದ್ರ ರಸ್ತೆ ಮತ್ತು ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು ಗುರುವಾರ ಬೆಂಗಳೂರಿನಲ್ಲಿ ಸಂಚಾರ ದಟ್ಟಣೆ ಹಾಗೂ ರಾಷ್ಟ್ರೀಯ ಹೆದ್ದಾರಿಗೆ ಸಂಬಂಧಿಸಿದಂತೆ ರಾಜ್ಯದ ಮುಖ್ಯಮಂತ್ರಿಗಳು, ಸಚಿವರು, ಸಂಸದರ ಸಭೆ ನಡೆಸಿದರು.

ಈ ವೇಳೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜ್ಯದ ಸಚಿವರು ಮತ್ತು ಸಂಸದರಿಂದ ಮಾಹಿತಿಗಳನ್ನು ಪಡೆದರು. ಬಳಿಕ ಸಮಸ್ಯೆಗಳ ಶೀಘ್ರ ಪರಿಹಾರಕ್ಕೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಸಭೆಯಲ್ಲಿ ಸಚಿವರಾದ ಸಿ.ಸಿ.ಪಾಟೀಲ್, ಅಶ್ವತ್ಥ್ ನಾರಾಯಣ, ಬಿ.ಶ್ರೀರಾಮುಲು, ಸಂಸದರಾದ ಪಿ.ಸಿ.ಮೋಹನ್, ತೇಜಸ್ವಿ ಸೂರ್ಯ, ಪ್ರತಾಪ ಸಿಂಹ ಹಾಗೂ ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದರು.

ಮದ್ದೂರು ನಿಡಘಟ್ಟ ಬಳಿ ಪ್ರವೇಶ, ನಿರ್ಗಮನ ದ್ವಾರಕ್ಕೆ ಮನವಿ

ಬೆಂಗಳೂರು-ಮೈಸೂರು ನಡುವಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಮದ್ದೂರು ಬಳಿಯ ನಿಡಘಟ್ಟ ಬಳಿ ಪ್ರವೇಶ ಮತ್ತು ನಿರ್ಗಮನ ದ್ವಾರ ನಿರ್ಮಿಸಿಕೊಡುವಂತೆ ವಿಧಾನಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ ಮತ್ತು ಮಧು ಜಿ.ಮಾದೇಗೌಡ ಅವರು ಗುರುವಾರ ಬೆಂಗಳೂರಿನಲ್ಲಿ ಕೇಂದ್ರ ಭೂ ರಸ್ತೆ ಮತ್ತು ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರಲ್ಲಿ ಮನವಿ ಮಾಡಿದರು. ಪ್ರವೇಶ ಮತ್ತು ನಿರ್ಗಮನ ದ್ವಾರದ ಜೊತೆಗೆ ಸರ್ವಿಸ್ ರಸ್ತೆಯನ್ನೂ ಉತ್ತಮವಾಗಿ ನಿರ್ಮಿಸಿಕೊಟ್ಟು ರೈತರಿಗೆ ಅನುಕೂಲ ಮಾಡಿಕೊಡುವಂತೆ ಕೋರಿದರು. ಇದಕ್ಕೆ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ತಿಳಿಸಿದ್ದಾರೆ.

ಕಲಾಕೃತಿಗಳ ಸ್ವೀಕಾರ

ಮೈಸೂರು, ಸೆ.8- 2022ರ ದಸರಾ ವಸ್ತುಪ್ರದರ್ಶನದಲ್ಲಿ ಮಹಿಳಾ ಮತ್ತು ಮಕ್ಕಳ ಉಪಸಮಿತಿಯ ವತಿಯಿಂದ ಮಹಿಳೆಯರು ಮತ್ತು ಮಕ್ಕಳು (ವಯೋಮಿತಿ 5 ರಿಂದ 14 ವರ್ಷದ ಒಳಗಿನ) ಜನವರಿ ನಂತರ ರಚಿಸಿದ ಕಲಾಕೃತಿಗಳನ್ನು ಸೆಪ್ಟೆಂಬರ್ 7 ರಿಂದ 2022ರ ಸೆಪ್ಟೆಂಬರ್ 23ರೊಳಗೆ ಬೆಳಗ್ಗೆ 11 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಸ್ವೀಕರಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಕಚೇರಿಯನ್ನು ಅಥವಾ ದೂ.ಸಂಖ್ಯೆ : 9611600103 ಮತ್ತು 9964410760 ಅನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ ವಿಳಾಸ: ನಂದಿನಿ ಗ್ರಾಫಿಕ್ಸ್, ಸಿ.ಹೆಚ್.ಆರ್ ಕಾಂಪ್ಲೆಕ್ಸ್, ಜೋಡಿ ರಸ್ತೆ, ಚಾಮರಾಜನಗರ-571313. ಫ್ಯಾಕ್ಸ್: 08226-222608, ಮೊ. 9242265657 E-mail: chamarajanagar@mysurumithra.com

ಸೆ.28ರಿಂದ ಚಾ.ನಗರದಲ್ಲಿ ದಸರಾ

ಸಿದ್ಧತೆ ಪರಿಶೀಲಿಸಿದ ಜಿಲ್ಲಾಧಿಕಾರಿ ಚಾರುಲತಾ ಸೋಮಲ್



ಚಾಮರಾಜನಗರ, ಸೆ.8– ಚಾಮರಾಜನಗರ ದಸರಾ ಮಹೋತ್ಸವ ಇದೇ ಸೆ.28 ರಿಂದ ಅಕ್ಟೋಬರ್ 1ರ ವರೆಗೆ ಒಟ್ಟು 4 ದಿನಗಳ ಕಾಲ ನಡೆಯಲಿರುವ ಹಿನ್ನೆಲೆಯಲ್ಲಿ ಕೈಗೊಳ್ಳಲಾಗಿರುವ ಪೂರ್ವ ಸಿದ್ಧತೆಗಳ ಸಂಬಂಧ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಪರಿಶೀಲನೆ ನಡೆಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಅಧಿಕಾರಿಗಳ ಸಭೆ ನಡೆಸಿದ ಜಿಲ್ಲಾಧಿಕಾರಿಗಳು ವಿವಿಧ ಸಮಿತಿಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳಿಗೆ ವಹಿಸಲಾಗಿರುವ ಕಾರ್ಯಗಳ ಬಗ್ಗೆ ವಿವರ ಪಡೆದರು.

ದಸರಾ ಪ್ರಮುಖ ಆಕರ್ಷಣೆಗಳಲ್ಲಿ ಒಂದಾಗಿರುವ ದೀಪಾಲಂಕಾರ ನಿರ್ವಹಣೆ ಬಗ್ಗೆ ಮಾಹಿತಿ ಪಡೆದ ಜಿಲ್ಲಾಧಿಕಾರಿಯವರು ಈ ನಿಟ್ಟಿನಲ್ಲಿ ಈಗಾಗಲೇ ಸೂಚಿಸಲಾಗಿರುವ ಪ್ರಮುಖ ವೃತ್ತಗಳು, ದೇವಾಲಯ, ರಸ್ತೆ, ಇನ್ನಿತರ ಕಡೆ ಸೂಕ್ತ ದೀಪಾಲಂಕಾರ ವ್ಯವಸ್ಥೆಗೆ ಅಗತ್ಯ ಕ್ರಮ ವಹಿಸುವಂತೆ ತಿಳಿಸಿದರು.

ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಮುಂಭಾಗದ ಮುಖ್ಯ ವೇದಿಕೆ, ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರ, ಜೆ.ಎಚ್. ಪಟೇಲ್ ಸಭಾಂಗಣದಲ್ಲಿ ನಾಲ್ಕು ದಿನಗಳ ಕಾಲ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಾಡು ಮಾಡುವ ಸಂಬಂಧ ಸಿದ್ಧತೆಗಳನ್ನು ಪೂರ್ಣಗೊಳಿಸಬೇಕೆಂದು ಜಿಲ್ಲಾಧಿಕಾರಿಯವರು ಸೂಚಿಸಿದರು.

ವೇದಿಕೆ ನಿರ್ಮಾಣ, ಶಾಮಿಯಾನ, ಧ್ವನಿ ಬೆಳಕು ವ್ಯವಸ್ಥೆಗೆ ಅಗತ್ಯ ಕ್ರಮಗಳನ್ನು ಆರಂಭಿಸಬೇಕು. ಮಳೆ ನೀರು ನಿಲ್ಲದಂತೆ ನೋಡಿಕೊಳ್ಳಬೇಕಿದೆ. ವೇದಿಕೆ ಅಲಂಕಾರ, ಆಸನಗಳ ವ್ಯವಸ್ಥೆ ಸೇರಿದಂತೆ ಇತರೆ ಕಾರ್ಯಗಳು ಸುಸೂತ್ರವಾಗಿ ಕೈಗೊಳ್ಳಬೇಕು ಎಂದರು.

ಸ್ವಚ್ಛತೆಗೆ ವಿಶೇಷ ಆದ್ಯತೆ ನೀಡಬೇಕಿದೆ. ವಾಹನಗಳ ನಿಲುಗಡೆ, ಸಂಚಾರ ನಿಯಂತ್ರಣಕ್ಕೆ ಸೂಕ್ತ ವ್ಯವಸ್ಥೆ ಕಲ್ಪಿಸಬೇಕು. ರೈತ ದಸರಾ, ಮಹಿಳಾ ದಸರಾ, ಮ್ಯಾರಥಾನ್, ಪಾರಂಪರಿಕ ನಡಿಗೆ ಸೇರಿದಂತೆ ಇನ್ನಿತರ ಕಾರ್ಯಕ್ರಮಗಳ ಸಂಬಂಧ ಕೈಗೊಳ್ಳಬೇಕಿರುವ ವ್ಯವಸ್ಥೆಗಳ ಬಗ್ಗೆ ಸಿದ್ಧತೆ ಆರಂಭಿಸಬೇಕೆಂದು ಜಿಲ್ಲಾಧಿಕಾರಿಯವರು ತಿಳಿಸಿದರು.

ದಸರಾ ಮಹೋತ್ಸವದ ವಿಶೇಷ ಪೂಜಾ ಕೈಂಕರ್ಯ, ಕಲಾವಿದರಿಗೆ ಉಪಹಾರ ಸೇರಿದಂತೆ ದಸರಾ ಏರ್ಪಾಡು ಸಂಬಂಧ ಈ ಹಿಂದೆಯೇ ಸೂಚಿಸಲಾಗಿರುವಂತೆ ಎಲ್ಲಾ ಸಿದ್ಧತೆಗಳನ್ನು ತ್ವರಿತವಾಗಿ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ. ಗಾಯಿತ್ರಿ, ಹೆಚ್ಚುವರಿ ಜಿಲ್ಲಾಧಿಕಾರಿ ಎಸ್. ಕಾತ್ಯಾಯಿನಿ ದೇವಿ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಮಲ್ಲಿಕಾರ್ಜುನ್, ಪಂಚಾಯತ್‌ರಾಜ್ ಎಂಜಿನಿಯರಿಂಗ್ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಇಬ್ರಾಹಿಂ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಗೀತಾಲಕ್ಷ್ಮಿ, ಜಂಟಿ ಕೃಷಿ ನಿರ್ದೇಶಕರಾದ ಮಧುಸೂದನ್, ಕೈಗಾರಿಕಾ ಇಲಾಖೆಯ ಅಧಿಕಾರಿ ರಾಜೇಂದ್ರಪ್ರಸಾದ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

ನೆರೆ ಸಂತ್ರಸ್ತರಿಗೆ ಕೂಡಲೇ ಪರಿಹಾರ ವಿತರಿಸುವಂತೆ ಒತ್ತಾಯಿಸಿ ಕಲ್ಲುಚಪ್ಪಡಿ ಹೊತ್ತು ವಿನೂತನ ಪ್ರತಿಭಟನೆ



ಚಾಮರಾಜನಗರ, ಸೆ.8– ಸರ್ಕಾರ ನೆರೆ ಸಂತ್ರಸ್ತರಿಗೆ ಕೂಡಲೇ ಪರಿಹಾರ ವಿತರಿಸುವಂತೆ ಒತ್ತಾಯಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ನಗರದ ಜಿಲ್ಲಾಡಳಿತದ ಮುಂಭಾಗದ ಗೇಟ್ ಎದುರು ತಲೆ, ಎದೆ ಮೇಲೆ ಕಲ್ಲುಚಪ್ಪಡಿ ಹೊತ್ತು ವಿನೂತನ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನಾಕಾರರು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ. ಶ್ರೀನಿವಾಸಗೌಡ ಮಾತನಾಡಿ, ರಾಜ್ಯ, ಜಿಲ್ಲೆಯಲ್ಲಿ ನಿರಂತರವಾಗಿ ಸುರಿದ ಮಹಾಮಳೆಗೆ ಜಲಾಶಯಗಳು, ಕೆರೆ–ಕಟ್ಟೆ, ನಾಲೆಗಳು ಭರ್ತಿಯಾಗಿದ್ದು, ಕೋಡಿಬಿದ್ದು, ಕೆಲವು ಗ್ರಾಮಗಳು, ಜಮೀನುಗಳು ಜಲಾವೃತವಾಗಿವೆ. ಮನೆಗಳು, ಆಸ್ತಿ–ಪಾಸ್ತಿಗಳು, ಜನ, ಜಾನುವಾರುಗಳಿಗೆ ಹಾನಿಯಾಗಿದೆ. ಜನತೆ ತುಂಬಾ ಸಂಕಷ್ಟಕ್ಕೆ ಸಿಲುಕಿ ನಲುಗಿ ಹೋಗಿದ್ದಾರೆ. ನೆರೆ ಹಾವಳಿಯಿಂದ ರಾಜ್ಯ, ಜಿಲ್ಲೆಯಲ್ಲಿ ಅಪಾರ ಪ್ರಮಾಣದಲ್ಲಿ ನಷ್ಟ ಉಂಟಾಗಿದೆ. ನೆರೆ ಹಾನಿ ಪ್ರದೇಶಗಳಿಗೆ ತೋರಿಕೆಗಾಗಿ ಭೇಟಿ ನೀಡಿ ವಾಪಸ್ ಬರುವುದು ಬಿಟ್ಟರೆ ಸಂತ್ರಸ್ತರಿಗೆ ನಯಾ ಪೈಸೆ ಪರಿಹಾರ ಸಿಕ್ಕಿಲ್ಲ. ಪರಿಹಾರ ಕೊಡುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ಆರೋಪಿಸಿದರು.

ಕೇಂದ್ರ ಸರ್ಕಾರ ಪ್ರಕೃತಿ ವಿಕೋಪ ನಿಧಿಯಡಿಯಲ್ಲಿ ರಾಜ್ಯಕ್ಕೆ ನಯಾ ಪೈಸೆ ಬಿಡುಗಡೆ ಮಾಡಿಲ್ಲ. ರಾಜ್ಯ ಸರ್ಕಾರ ತಕ್ಷಣವೇ ನೆರೆ ಪರಿಹಾರ ನೀಡಬೇಕು ಇಲ್ಲದಿದ್ದರೆ ಕಪ್ಪು ಬಾವುಟ ಪ್ರದರ್ಶನ ಮಾಡಲಾಗುವುದು ಎಂದು ಎಚ್ಚರಿಸಿದರು

ಪ್ರತಿಭಟನೆಯಲ್ಲಿ ನಿಜಧ್ವನಿ ಗೋವಿಂದರಾಜು, ಚಾ.ಸಿ.ಸೋಮನಾಯಕ ವಜ್ರ, ಚಾ.ವೆಂ.ರಾಜ್ ಗೋಪಾಲ್, ಗಡಿನಾಡ ಕನ್ನಡ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಚಾ.ರಾ. ಕುಮಾರ್, ಚಾ.ಸಿ.ಗುರುಸ್ವಾಮಿ, ಚಾ.ಸಿ. ಸಿದ್ದರಾಜು ಪ್ಯಾಡಮಂಡಿ ರಾಜು, ಆಟೋ ಆಕಾಶ್, ಸಾಗರ್ ರಾವತ್, ದೊರೆ, ಯೋಗ ನರಸಿಂಹ ಇತರರು ಭಾಗವಹಿಸಿದ್ದರು.

ಸಂಘದ ನೋಂದಣಿ ರದ್ದತಿಗೆ ಕ್ರಮ

ಚಾಮರಾಜನಗರ, ಸೆ.8–ಜಿಲ್ಲೆಯ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘವು ಉದ್ದೇಶಿತ ಕಾರ್ಯಗಳನ್ನು ನಿರ್ವಹಿಸದೇ ಸಂಪೂರ್ಣವಾಗಿ ಸ್ಥಗಿತಗೊಂಡಿರುವುದರಿಂದ ನಿಯಮಾನುಸಾರ ಸಮಾಪನೆಗೊಳಿಸಿ ಸಂಘದ ನೋಂದಣಿ ರದ್ದುಪಡಿಸಲು ಕ್ರಮ ವಹಿಸಲಾಗಿದೆ. ಸಂಘದ ಷೇರು ಹಣ ತೊಡಗಿಸುವವರು, ಠೇವಣಿ ಹಣ ನೀಡಿರುವವರು ಇನ್ನಿತರೆ ಮುಂಗಡ ಹಣ ನೀಡಿರುವವರು ಸೆ.27ರೊಳಗೆ ಸಹಕಾರ ಸಂಘಗಳ ಉಪ ನಿಬಂಧಕರ ಕಚೇರಿಯ ಸಮಾಪನಾಧಿಕಾರಿ ಹಾಗೂ ಹಿರಿಯ ನಿರೀಕ್ಷಕರ ಕಚೇರಿಗೆ ಖುದ್ದು ಹಾಜರಾಗಿ ಸಂಘಕ್ಕೆ ಹಣ ನೀಡಿರುವ ಅಧಿಕೃತ ರಶೀದಿಯನ್ನು ಅಥವಾ ದಾಖಲಾತಿ ಹಾಜರುಪಡಿಸಿ, ಷೇರು ಹಣ, ಠೇವಣಿ ಹಾಗೂ ಇನ್ನಿತರ ಮುಂಗಡ ಹಣ, ಬಾಕಿ ಹಣವನ್ನು ವಾಪಸ್ಸು ಪಡೆಯಲು ತಿಳಿಸಲಾಗಿದೆ.

ನಾಳೆ ಕುದೇರಿನಲ್ಲಿ ಸ್ವರ್ಣಗೌರಿ ವಿಸರ್ಜನೆ



ಚಾಮರಾಜನಗರ, ಸೆ.8–ಗೌರಿ ಹಬ್ಬಕ್ಕೆ ಹೆಸರುವಾಸಿಯಾದ ತಾಲೂಕಿನ ಕುದೇರು ಗ್ರಾಮದ ಸ್ವರ್ಣಗೌರಿ ಗುಡಿಯಲ್ಲಿ ಗೌರಿ ಹಬ್ಬದ ದಿನದಂದು ಪ್ರತಿಷ್ಠಾಪಿಸಿರುವ ಸ್ವರ್ಣಗೌರಿಯ ವಿಸರ್ಜನಾ ಮಹೋತ್ಸವವು ಸೆ.10 ರಂದು ನಡೆಯಲಿದೆ.

ಕುದೇರು ಗ್ರಾಮದಲ್ಲಿ ಗೌರಿಹಬ್ಬಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸಲಾಗಿದೆ. ಈ ಗ್ರಾಮದಲ್ಲಿ ಗೌರಿಗಷ್ಟೇ ಪ್ರಾಮುಖ್ಯತೆ ನೀಡಲಾಗುವುದು. ಗೌರಿ ಹಬ್ಬದಂದು ಇಲ್ಲಿನ ಸ್ವರ್ಣಗೌರಿ ಗುಡಿಯಲ್ಲಿ ಗೌರಿಯನ್ನು ಪ್ರತಿಷ್ಠಾಪಿಸಲಾಗುವುದು. 12 ದಿನಗಳವರೆಗೆ ಪೂಜೆ ಮಾಡಲಾಗುವುದು. ಈ ವೇಳೆ ಚಾಮರಾಜನಗರ ಜಿಲ್ಲೆ ಮಾತ್ರವಲ್ಲದೇ ಮೈಸೂರು ಭಾಗದಿಂದಲೂ ಸಹ ಭಕ್ತರು ಆಗಮಿಸಿ ಪೂಜೆ ಸಲ್ಲಿಸುವರು. ನಂತರ 12ನೇ ದಿನಕ್ಕೆ ಗೌರಿಯನ್ನು ವಿಸರ್ಜಿಸುವುದು ಇಲ್ಲಿನ ವಾಡಿಕೆ.

ಶನಿವಾರ ರಾತ್ರಿ 9 ಗಂಟೆಗೆ ಮೊದಲಿಗೆ ಶ್ರೀ ಮಲ್ಲಿಕಾರ್ಜುನಸ್ವಾಮಿ ಅವರ ಅಡ್ಡ ಪಲ್ಲಕ್ಕಿ ಉತ್ಸವ ಆರಂಭವಾಗಲಿದೆ. ಮಂಗಳ ವಾದ್ಯ, ವೀರಗಾಸೆ, ಪೂಜೆ ಕುಣಿತ, ಚಂಡ, ಹುಲಿವೇಷ, ನಗಾರಿ, ಬಾಣಬಿರುಸು ಮಧ್ಯೆ ಸುಮಂಗಲಿಯರೊಂದಿಗೆ ಉತ್ಸವದ ಮೆರವಣಿಗೆ ನಡೆಯಲಿದೆ. ನಂತರ ಭಾನುವಾರ ಬೆಳಗಿನ ಜಾವ 4.30 ರ ವೇಳೆಗೆ ಶ್ರೀ ಸ್ವರ್ಣಗೌರಿ ಅಮ್ಮನವರ ತೆಪ್ಪೋತ್ಸವವನ್ನು ಗೌರಿ ಕಟ್ಟೆಯಲ್ಲಿ ನಡೆಸಿದ ನಂತರ ವಿಸರ್ಜಿಸಲಾಗುವುದು.

ಸ್ವರ್ಣ ಗೌರಿ ವಿಸರ್ಜನೆಯ ಅಂಗವಾಗಿ ಗ್ರಾಮದ ಶ್ರೀ ಕಾಪಿ ಬಸವೇಶ್ವರ ಸ್ವಾಮಿ ಹಾಗೂ ಶ್ರೀ ವೀರಭದ್ರಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಹೂವಿನ ಅಲಂಕಾರ ಆಯೋಜಿಸಲಾಗಿದೆ. ಇದಲ್ಲದೆ ಬೆಳಗ್ಗೆ 11 ಗಂಟೆಯಿಂದ ಪ್ರಸಾದ ವಿನಿಯೋಗ ನಡೆಯಲಿದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಕುದೇರು ಗ್ರಾಮಸ್ಥರು ಕೋರಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವರ ಭೇಟಿ

ಚಾಮರಾಜನಗರ, ಸೆ.8– ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಸೆ.9 ಹಾಗೂ 10ರಂದು ಜಿಲ್ಲೆಗೆ ಭೇಟಿ ನೀಡುವರು. ಸೆ.9ರಂದು ಸಂಜೆ 7 ಗಂಟೆಗೆ ನಗರಕ್ಕೆ ಆಗಮಿಸಿ ವಾಸ್ತವ್ಯ ಹೂಡುವರು. ಸೆ.10ರಂದು ಬೆಳಗ್ಗೆ 9ಕ್ಕೆ ಜಿಲ್ಲಾಡಳಿತ ಭವನದ ಹೊಸ ಕೆಡಿಪಿ ಹಾಲ್‌ನಲ್ಲಿ ಜಿಲ್ಲೆಯಲ್ಲಿ ಮಳೆಹಾನಿ ಪ್ರದೇಶಗಳಲ್ಲಿ ಕೈಗೊಂಡ ಪರಿಹಾರ ಕ್ರಮಗಳ ಕುರಿತಂತೆ ಅಧಿಕಾರಿಗಳ ಸಭೆ ನಡೆಸುವರು. ಬೆಳಗ್ಗೆ 10ಕ್ಕೆ ಜಿಲ್ಲಾ ಮಟ್ಟದ ಉಸ್ತುವಾರಿ ಸಮಿತಿ ಸಭೆ ಹಾಗೂ ಜಿಲ್ಲಾ ನೂತನ ಮಾದರಿ ಗ್ರಂಥಾಲಯ ನಿರ್ಮಾಣ ಕಾಮಗಾರಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸುವರು. ಬೆಳಗ್ಗೆ 10.30ಕ್ಕೆ ಜಿಲ್ಲಾ ದಸರಾ ಉತ್ಸವ ಆಯೋಜನೆ ಸಂಬಂಧ ಸಭೆ ನಡೆಸುವರು. ಬೆಳಗ್ಗೆ 11ಕ್ಕೆ ಡಾ.ರಾಜ್‌ಕುಮಾರ್ ರಂಗಮಂದಿರದಲ್ಲಿ ಜಿಲ್ಲಾ ರಜತೋತ್ಸವದ ಅಂಗವಾಗಿ ಹೊರತರುತ್ತಿರುವ ವಿಶೇಷ ಸಂಚಿಕೆ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಬೆಳಗ್ಗೆ 11.30 ಗಂಟೆಗೆ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸುವರು.

ಮಳೆಯಿಂದ ದೊಡ್ಡರಸನಕೊಳದ ಸುತ್ತುಗೋಡೆ ಕುಸಿತ: ಶಾಸಕ ಸಿ.ಪುಟ್ಟರಂಗಶೆಟ್ಟಿ ಭೇಟಿ, ಪರಿಶೀಲನೆ



ಚಾಮರಾಜನಗರ, ಸೆ.8– ಸತತ ಮಳೆ ಹಿನ್ನೆಲೆಯಲ್ಲಿ ಚಾಮರಾಜನಗರದ ಕೊಳದ ಬೀದಿಯಲ್ಲಿರುವ ದೊಡ್ಡರಸನಕೊಳದ ಹಿಂಭಾಗದಲ್ಲಿ ಹೆಚ್ಚುವರಿ ಮಳೆ ನೀರು ಸಂಗ್ರಹವಾದ ಹಿನ್ನೆಲೆಯಲ್ಲಿ ಕೊಳದ ಸುತ್ತುಗೋಡೆ ಕುಸಿದ ಸ್ಥಳಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ಭೇಟಿ ನೀಡಿ ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರು, ಪುರಾತನವಾದ ಡೊಡ್ಡರಸನ ಕೊಳವು ಬಹು ವರ್ಷಗಳ ನಂತರ ತುಂಬಿದ್ದು ನೀರು ದೇಗುಲದ ಆವರಣಕ್ಕೂ ಬಂದಿದೆ. ಮಳೆಯ ನೀರು ಸರಾಗವಾಗಿ ಹರಿದುಹೋಗುವಂತೆ ಅಗತ್ಯ ವ್ಯವಸ್ಥೆ ಕಲ್ಪಿಸಲು ಈಗಾಗಲೇ ನಗರಸಭೆ ಅಧಿಕಾರಿಗಳಿಗೆ ಸೂಚಿಸಿದ್ದು, ಇಂದು ಕುಸಿದ ಭಾಗದಲ್ಲಿ ಸುತ್ತುಗೋಡೆ ನಿರ್ಮಿಸಿ ಮಳೆ ನೀರು ರಸ್ತೆಗೆ ಬಾರದಂತೆ ತ್ವರಿತವಾಗಿ ಕೆಲಸ ನಿರ್ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ನಿರಂತರವಾಗಿ ಮಳೆಯಾಗುತ್ತಿರುವುದರಿಂದ ನೀರಿನ ಪೈಪ್‌ಲೈನ್‌ಗಳು, ಚರಂಡಿ ನೀರು ಸರಾಗವಾಗಿ ಹರಿದು ಹೋಗುವಂತೆ ಅಧಿಕಾರಿಗಳು ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಿ ಮಳೆ ಹಾನಿಯಿಂದ ತೊಂದರೆಗೀಡಾದ ಪಟ್ಟಣದ ಬಡಾವಣೆಗಳಿಗೆ ಆಗಾಗ್ಗೆ ಭೇಟಿ ನೀಡಿ ಗಮನಹರಿಸುವಂತೆ ಶಾಸಕರು ಅಧಿಕಾರಿಗಳಿಗೆ ಸೂಚಿಸಿದರು. ಈ ಸಂದರ್ಭದಲ್ಲಿ ತಹಸೀಲ್ದಾರ್ ಬಸವರಾಜು, ನಗರಸಭೆ ಪ್ರಭಾರ ಎಇ ನಾಗರಾಜು, ಸೇರಿದಂತೆ ಇತರರು ಇದ್ದರು.

ಮಹದೇಶ್ವರ ಕಾಲೋನಿ, ಲಕ್ಷ್ಮೀಪುರ ಗ್ರಾಮಗಳಲ್ಲಿ ಹುಲಿ ಕಾಟ ತಡೆಯುವಂತೆ ಡಿಸಿಎಫ್‌ಗೆ ಮನವಿ



ಚಾಮರಾಜನಗರ, ಸೆ.8– ತಾಲೂಕಿನ ಅಮಚವಾಡಿ ಗ್ರಾಪಂ ವ್ಯಾಪ್ತಿಯ ಮಹದೇಶ್ವರ ಕಾಲೋನಿ ಹಾಗೂ ಲಕ್ಷ್ಮೀಪುರ ಗ್ರಾಮಗಳಲ್ಲಿ ಹುಲಿ ಕಾಟ ತಡೆಯುವಂತೆ ಒತ್ತಾಯಿಸಿ ಗ್ರಾಮಸ್ಥರು ಬಿಜೆಪಿ ಮುಖಂಡ ಯು.ಎಂ. ಪ್ರಭುಸ್ವಾಮಿ ಅವರ ನೇತೃತ್ವದಲ್ಲಿ ನಗರದ ಸುಲ್ತಾನ್ ಷರೀಫ್ ವೃತ್ತದ ಸಮೀಪದಲ್ಲಿರುವ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿಯಲ್ಲಿ ಪ್ರಭಾರ ಉಪ ಅರಣ್ಯ ಸಂರಕ್ಷಣಾಧಿಕಾರಿ ಸಂತೋಷ್‌ಕುಮಾರ್ ಅವರಿಗೆ ಮನವಿ ಸಲ್ಲಿಸಲಾಯಿತು.

ಮಹದೇಶ್ವರ ಕಾಲೋನಿ, ಲಕ್ಷ್ಮೀಪುರ ಸೇರಿದಂತೆ ಅಕ್ಕಪಕ್ಕದ ಗ್ರಾಮಗಳಲ್ಲಿ ಸುಮಾರು 20 ದಿನಗಳಿಂದಲ್ಲೂ ಹುಲಿ ಕಾಣಿಸಿಕೊಂಡಿದ್ದು, ಈ ಭಾಗದಲ್ಲಿ ದನ, ಕರು, ನಾಯಿ ಮುಂತಾದ ಪ್ರಾಣಿಗಳನ್ನು ಹಿಡಿದು ತಿನ್ನುತ್ತಿದ್ದು, ಇದರಿಂದ ಗ್ರಾಮಸ್ಥರು ಭಯಭೀತರಾಗಿದ್ದಾರೆ. ಜಮೀನುಗಳಲ್ಲಿ ಕೃಷಿ ಚಟುವಟಿಕೆ ಮಾಡುತ್ತಿಲ್ಲ. ಶಾಲೆಗೆ ಮಕ್ಕಳನ್ನು ಕಳುಹಿಸಲು ಹಿಂಜರಿಯುತ್ತಿದ್ದಾರೆ. ಇದನ್ನು ಗ್ರಾಮಸ್ಥರು ಇಲಾಖೆಯ ಅಧಿಕಾರಿಗಳ ಅಧಿಕಾರಿಗಳ ಗಮನಕ್ಕೂ ತರಲಾಗಿದೆ ಯಾವುದೇ ಪ್ರಯೋಜನವಾಗಿಲ್ಲ ಎಂದು ಆಪಾದಿಸಲಾಗಿದೆ.

ತಕ್ಷಣವೇ ಬೋನ್ ಇಟ್ಟು ಹುಲಿಯನ್ನು ಹಿಡಿದು ಅರಣ್ಯ ಪ್ರದೇಶ ಬಿಡುವ ಮೂಲಕ ಈ ಗ್ರಾಮಗಳಲ್ಲಿ ಹುಲಿಕಾಟ ತಡೆಯಬೇಕು ಹಾಗೂ ಅಮಚವಾಡಿ –ಉಡಿಗಾಲ ರಸ್ತೆಯನ್ನು ತಮ್ಮ ಇಲಾಖೆಯವರು ಡಾಂಬರು ಹಾಕಲು ತಡೆ ಮಾಡುತ್ತಿರುವುದು ತಿಳಿದು ಬಂದಿದೆ. ಡಾಂಬರು ರಸ್ತೆ ಮಾಡಲು ಅವಕಾಶ ಮಾಡಿಕೊಡಬೇಕು. ಇಲ್ಲದಿದ್ದರೆ ತಮ್ಮ ವಿರುದ್ಧ ಮುಂದಿನ ದಿನಗಳಲ್ಲಿ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಬಿಜೆಪಿ ಮುಖಂಡ ಯು.ಎಂ.ಪ್ರಭುಸ್ವಾಮಿ ಎಚ್ಚರಿಸಿದರು.

ಈ ಸಂದರ್ಭದಲ್ಲಿ ಮಹದೇವಶೆಟ್ಟಿ, ರವಿ, ಚಿಕ್ಕವಾದಶೆಟ್ಟಿ, ನಾಗೇಶ್, ನಂಜುಂಡಶೆಟ್ಟಿ, ಮುದ್ದಶೆಟ್ಟಿ, ಬಸವಶೆಟ್ಟಿ, ನಾಗಶೆಟ್ಟಿ, ಶಿವಣ್ಣ, ಸಿದ್ದಶೆಟ್ಟಿ, ರಂಗಸ್ವಾಮಿ, ಮಹದೇವಶೆಟ್ಟಿ, ಪುಟ್ಟಸ್ವಾಮಿಶೆಟ್ಟಿ, ಬಸವರಾಜು ಇತರರು ಹಾಜರಿದ್ದರು.

ಚಂದಕವಾಡಿಯಲ್ಲಿ ಬೃಹತ್ ಕಣ್ಣಿನ ತಪಾಸಣಾ ಶಿಬಿರ ಯಶಸ್ವಿ

ಡಾ.ಬಾಬು ಸೋಷಿಯಲ್ ವೆಲ್‌ಫೇರ್ ಟ್ರಸ್ಟ್ ಸೇವಾ ಕಾರ್ಯ ಶ್ಲಾಘನೆ



ಚಾಮರಾಜನಗರ, ಸೆ.8– ತಾಲೂಕಿನ ಚಂದಕವಾಡಿಯಲ್ಲಿ ಬೃಹತ್ ಕಣ್ಣಿನ ತಪಾಸಣಾ ಶಿಬಿರ ಬಹಳ ಯಶಸ್ವಿಯಾಗಿ ನಡೆಯಿತು.

ಗ್ರಾಮದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಜೆಎಸ್‌ಎಸ್ ಆಸ್ಪತ್ರೆ ಮೈಸೂರು, ಡಾ. ಬಾಬು ಸೋಷಿಯಲ್ ವೆಲ್‌ಫೇರ್ ಅಂಡ್ ಚಾರಿಟಬಲ್ ಟ್ರಸ್ಟ್ ಮತ್ತು ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ನಡೆದ ಬೃಹತ್ ಕಣ್ಣಿನ ತಪಾಸಣಾ ಶಿಬಿರಕ್ಕೆ ಗೌಡಿಕೆ ಶಿವನಾಂಕರಪ್ಪ ದೀಪ ಬೆಳಗಿಸುವ ಮೂಲಕ ಚಾಲನೆ ನೀಡಿದರು.

ಬಳಿಕ ಶಿವನಾಂಕರಪ್ಪ ಮಾತನಾಡಿ, ಮನುಷ್ಯ ಜೀವನದಲ್ಲಿ ಕಣ್ಣುಗಳು ಬಹು ಮುಖ್ಯ ಪಾತ್ರವಹಿಸುತ್ತವೆ. ಹೀಗಾಗಿ ಪ್ರತಿಯೊಬ್ಬರೂ ಕಾಲಕಾಲಕ್ಕೆ ತಪಾಸಣೆ ಮಾಡಿಸಿಕೊಳ್ಳುವ ಮೂಲಕ ಕಣ್ಣಿನ ಆರೋಗ್ಯ ಕಾಪಾಡಿಕೊಳ್ಳಬೇಕು. ಇಂತಹ ಶಿಬಿರವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಅಯೋಜಕ ಡಾ.ಎ.ಆರ್.ಬಾಬು ಮಾತನಾಡಿ, ಕಳೆದ ಹಲವಾರು ವರ್ಷಗಳಿಂದ ಜಿಲ್ಲೆಯಲ್ಲಿ ಕಿವಿ, ಮೂಗು, ಗಂಟಲು ವಿಭಾಗದಲ್ಲಿ ಉಚಿತ ತಪಾಸಣಾ ಶಿಬಿರವನ್ನು ನಡೆಸಿಕೊಂಡು ಬರಲಾಗಿದೆ. ಬೇರೆ ತಪಾಸಣಾ ಶಿಬಿರ ಮಾಡಬೇಕು ಎಂದು ಚಿಂತನೆ ಬಂದಾಗ ಕಣ್ಣಿನ ತಪಾಸಣೆ ಮಾಡಬೇಕು ಎಂದು ಚಿಂತನೆ ಬಂದು ಇಂದು ನೇತ್ರಾ ತಪಾಸಣೆ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಕಣ್ಣು ಎಲ್ಲರಿಗೂ ಬಹಳ ಮುಖ್ಯವಾದದ್ದು, ಕಣ್ಣುಗಳು ಕಾಣದಿದ್ದರೆ ತುಂಬಾ ಸಮಸ್ಯೆಯಾಗುತ್ತದೆ. ಕಣ್ಣಿನ ದೋಷವುಳ್ಳವರಿಗೆ ಅನುಕೂಲವಾಗಲಿ ಎಂದು ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಶಿಬಿರದಲ್ಲಿ 350ಕ್ಕೂ ಹೆಚ್ಚು ಜನರು ನೇತ್ರ ತಪಾಸಣೆ ಮಾಡಿಸಿಕೊಂಡಿದ್ದಾರೆ. 57 ಮಂದಿ ಶಸ್ತ್ರಚಿಕಿತ್ಸೆಗೆ ಆಯ್ಕೆಯಾಗಿದ್ದಾರೆ. ದೃಷ್ಟಿ ದೋಷ ಇರುವವರಿಗೆ ಉಚಿತವಾಗಿ ಔಷಧಿ, ರಿಯಾಯತಿ ದರದಲ್ಲಿ ಕನ್ನಡಕಗಳನ್ನು ವಿತರಿಸಲಾಗುವುದು ಎಂದರು.

ಉಚಿತ ಬೃಹತ್ ಕಣ್ಣಿನ ತಪಾಸಣಾ ಶಿಬಿರವನ್ನು ಚಂದಕವಾಡಿಯ ಭಾಗದಲ್ಲಿ ಹಮ್ಮಿಕೊಂಡಿರುವುದು ತುಂಬಾ ಸಂತಸವಾಗಿದೆ. ಡಾ.ಎ.ಆರ್.ಬಾಬು ಅವರ ಡಾ. ಬಾಬು ಸೋಷಿಯಲ್ ವೆಲ್‌ಫೇರ್ ಅಂಡ್ ಚಾರಿಟಬಲ್ ಟ್ರಸ್ಟ್‌ನ ಮೂಲಕ ಜಿಲ್ಲೆಯಲ್ಲಿ ಆರೋಗ್ಯ ಸೇವಾ ಕಾರ್ಯವನ್ನು ಮಾಡುತ್ತಿರುವುದು ಶ್ಲಾಘನೀಯವಾದದ್ದು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಚಂದಕವಾಡಿ ಸುತ್ತಮುತ್ತಲಿನ ಗ್ರಾಮಗಳ ನಾಗರಿಕರು ಬೆಳಗ್ಗೆ 9 ಗಂಟೆಯಿಂದಲೇ ಸರತಿ ಸಾಲಿನಲ್ಲಿ ಬಂದು ನೋಂದಣಿ ಮಾಡಿಸಿ, ನೇತ್ರ ತಪಾಸಣೆ ಮಾಡಿಸಿಕೊಂಡರು. ಇದೇ ವೇಳೆಯಲ್ಲಿ ದೃಷ್ಟಿದೋಷಯುಳ್ಳವರಿಗೆ ಉಚಿತ ಔಷಧಿ ಹಾಗೂ ರಿಂಯಾಯಿತಿ ದರದಲ್ಲಿ ಕನ್ನಡಕಗಳನ್ನು ವಿತರಿಸಲಾಯಿತು. ಶಿಬಿರದಲ್ಲಿ ಸುಮಾರು ನೂರಾರು ಮಂದಿ ತಪಾಸಣೆ ಮಾಡಿಸಿಕೊಂಡರು.

ಕಾರ್ಯಕ್ರಮದಲ್ಲಿ ಚಂದಕವಾಡಿ ಗ್ರಾಪಂ ಉಪಾಧ್ಯಕ್ಷ ರಾಜೇಂದ್ರ, ಸದಸ್ಯ ಪುಟ್ಟಸ್ವಾಮಿ, ಸಮಾಜಸೇವಕ ಡಾ.ಪರಮೇಶ್ವರಪ್ಪ, ಮುಖಂಡರಾದ ಕಪಿನಿ ನಾಯಕ, ನಂದೀಶ್, ಗಣೇಶ್, ಪ್ರವೀಣ್, ಶಿವರುದ್ರ, ರುದ್ರೇಶ್, ಬಿವಿಎಸ್ ಜಿಲ್ಲಾ ಸಂಯೋಜಕ ಪರ್ವತ್‌ರಾಜ್, ಸಂತೋಷ್, ಶಿವಕುಮಾರ್, ಆಲೂರು ಶಿವಾನಂದ ಹಾಗೂ ಜೆಎಸ್‌ಎಸ್ ಆಸ್ಪತ್ರೆ ವೈದ್ಯರು ಇತರರು ಭಾಗವಹಿಸಿದ್ದರು.

ಸೆಲ್ವರಾಜ್ ನಿಧನ

ಚಾಮರಾಜನಗರ, ಸೆ.8– ನಗರದ ಭ್ರಮರಾಂಬ ಬಡಾವಣೆ ನಿವಾಸಿ, ಗೌರಿಶಂಕರ ಬ್ಯಾಂಗಲ್ಸ್ ಮಾಲೀಕರಾದ ಸೆಲ್ವರಾಜ್ (72) ಅವರು ಗುರುವಾರ ಮಧ್ಯಾಹ್ನ ಅನಾರೋಗ್ಯದಿಂದ ನಿಧನರಾದರು.

ಮೃತರು ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ನಗರದಲ್ಲಿ ಶುಕ್ರವಾರ ಬೆಳಗ್ಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸೆ.11ರಂದು ನಗರದಲ್ಲಿ ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನ

ಚಾಮರಾಜನಗರ, ಸೆ.8– ಅರಣ್ಯ ಇಲಾಖೆಯಲ್ಲಿ ಅರಣ್ಯ ಸಂಪತ್ತನ್ನು ಕಳ್ಳಕಾಕರಿಂದ ರಕ್ಷಿಸುವ ಸಂದರ್ಭದಲ್ಲಿ ಕೆಚ್ಚೆದೆಯಿಂದ ಹೋರಾಡಿ ವೀರ ಮರಣವನ್ನಪ್ಪಿದವರನ್ನು ಸ್ಮರಿಸುವ ಸಲುವಾಗಿ 2022ನೇ ಸಾಲಿನ ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನವನ್ನು ಸೆ.11 ರಂದು ಬೆಳಗ್ಗೆ 9 ಗಂಟೆಗೆ ನಗರದ ಅರಣ್ಯ ಕೇಂದ್ರ ಸಸ್ಯಕ್ಷೇತ್ರದಲ್ಲಿರುವ ಅರಣ್ಯ ಹುತಾತ್ಮರ ಸ್ಮಾರಕದಲ್ಲಿ ಆಯೋಜಿಸಲಾಗಿದೆ ಎಂದು ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ನಗರ ಸುದ್ದಿಗಳು

28 ಅಡಿ ಎತ್ತರದ ನೇತಾಜಿ ಪ್ರತಿಮೆ, ಕರ್ತವ್ಯ ಪಥ್ ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ



ನವದೆಹಲಿ, ಸೆ.8– ದೆಹಲಿಯ ಇಂಡಿಯಾ ಗೇಟ್ ಬಳಿ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಪ್ರತಿಮೆಯನ್ನು ಪ್ರಧಾನಿ ಮೋದಿ ಗುರುವಾರ ಅನಾವರಣಗೊಳಿಸಿದರು. 28 ಅಡಿ ಎತ್ತರದ ಪ್ರತಿಮೆ ಅನಾವರಣಗೊಳಿಸಿದ ಬಳಿಕ ಪ್ರಧಾನಿ ಮೋದಿ ಪುಷ್ಪ ನಮನ ಸಲ್ಲಿಸಿದರು.

ಕರ್ತವ್ಯಪಥಕ್ಕೆ ಮೋದಿ ಚಾಲನೆ: ದೆಹಲಿಯ ಐತಿಹಾಸಿಕ ರಾಜಪಥಕ್ಕೆ 'ಕರ್ತವ್ಯಪಥ' ಎಂದು ಮರುನಾಮಕರಣ ಮಾಡಲಾಗಿದೆ.

ರಾಷ್ಟ್ರಪತಿ ಭವನದಿಂದ ಇಂಡಿಯಾ ಗೇಟ್‌ವರೆಗಿನ ಮಾರ್ಗಕ್ಕೆ ಈ ಮೊದಲು 'ರಾಜಪಥ' ಎಂದು ಹೆಸರಿಡಲಾಗಿತ್ತು. ಇದಕ್ಕೆ 'ಕರ್ತವ್ಯಪಥ' ಎಂದು ಮರುನಾಮಕರಣ ಮಾಡುವ ಕುರಿತು ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ನ್ಯೂ ಡೆಲ್ಲಿ ಮುನ್ಸಿಪಲ್ ಕೌನ್ಸಿಲ್‌ಗೆ (ಎನ್‌ಡಿಎಂಸಿ) ಪ್ರಸ್ತಾವನೆ ಸಲ್ಲಿಸಿತ್ತು. ಕೇಂದ್ರದ ವಿದೇಶಾಂಗ ವ್ಯವಹಾರ ಮತ್ತು ಸಂಸ್ಕೃತಿ ಖಾತೆ ರಾಜ್ಯ ಸಚಿವೆ ಮೀನಾಕ್ಷಿ ಲೇಖಿ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಎನ್‌ಡಿಎಂಸಿ ವಿಶೇಷ ಸಭೆಯಲ್ಲಿ ಇದನ್ನು ಅಂಗೀಕರಿಸಲಾಯಿತು.

'ಕರ್ತವ್ಯಪಥ' ರಸ್ತೆಯಲ್ಲಿನ ಪಾದಚಾರಿ ಮಾರ್ಗಗಳಿಗೆ ಕೆಂಪು ವರ್ಣದ ಗ್ರಾನೈಟ್ ಅಳವಡಿಸಲಾಗಿದ್ದು, ಕಾಲುವೆಗಳನ್ನು ನವೀಕರಿಸಲಾಗಿದೆ. ಈ ಹಾದಿಯಲ್ಲಿ ರಾಜ್ಯವಾರು ಆಹಾರದ ಮಳಿಗೆಗಳು ಹಾಗೂ ವಾಹನ ನಿಲುಗಡೆ ವ್ಯವಸ್ಥೆ ಇದೆ. ಗಡಿಯಾರದ ಮಾದರಿಯಲ್ಲಿ ಭದ್ರತಾ ವ್ಯವಸ್ಥೆಯನ್ನೂ ಮಾಡಲಾಗಿದೆ. ರಸ್ತೆ ಸುತ್ತಲಿನ ಪ್ರದೇಶವು ಹಸಿರಿನಿಂದ ಕೂಡಿದೆ. ಸಿಪಿಡಬ್ಲ್ಯುಡಿ ಈ ಮಾರ್ಗದಲ್ಲಿ ಐದು ಮಾರಾಟ ವಲಯಗಳನ್ನು ಸ್ಥಾಪಿಸಿದ್ದು, ಇಲ್ಲಿ ಮಳಿಗೆಗಳನ್ನು ಇಡಲು ತಲಾ 40 ಮಂದಿಗೆ ಅವಕಾಶ ನೀಡಲಾಗುತ್ತದೆ ಇಂಡಿಯಾ ಗೇಟ್ ಬಳಿಯ ಎರಡು ಬ್ಲಾಕ್‌ಗಳಲ್ಲಿ ತಲಾ ಎಂಟು ಮಳಿಗೆಗಳಿಗೆ ಅವಕಾಶ ಕಲ್ಪಿಸಲಾಗುತ್ತದೆ. ಸೆಂಟ್ರಲ್ ವಿಸ್ತಾ ಅಭಿವೃದ್ಧಿ ಯೋಜನೆಯಡಿ ಇಡೀ ಮಾರ್ಗಕ್ಕೆ ಹೊಸ ರೂಪ ನೀಡಲಾಗಿದೆ ಕರ್ತವ್ಯಪಥದ ಸುತ್ತಲಿನ ಪ್ರದೇಶದಲ್ಲಿ ಒಟ್ಟು 1,125 ವಾಹನಗಳ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ. ಇಂಡಿಯಾ ಗೇಟ್ ಬಳಿ 35 ಬಸ್‌ಗಳನ್ನು ನಿಲುಗಡೆ ಮಾಡಬಹುದಾಗಿದೆ. ಹೊಸದಾಗಿ 900ಕ್ಕೂ ಅಧಿಕ ವಿದ್ಯುತ್ ಕಂಬಗಳನ್ನು ಅಳವಡಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ನೀಟ್ ಫಲಿತಾಂಶ ಪ್ರಕಟ: ಟಾಪ್–10 ಪಟ್ಟಿಯಲ್ಲಿ ಕರ್ನಾಟಕದ ಮೂವರು



ಹೃಷೀಕೇಶ್



ರುಚಾ ಪಾವಶೆ

ನವದೆಹಲಿ, ಸೆ.8– ನೀಟ್ ಫಲಿತಾಂಶ ಪ್ರಕಟವಾಗಿದ್ದು, ದೇಶದಲ್ಲಿ ಪ್ರಥಮ ಸ್ಥಾನವನ್ನು ರಾಜಸ್ಥಾನದ ಅಭ್ಯರ್ಥಿ ತನಿಷ್ಕಾ ಪಡೆದಿದ್ದು, ರಾಜ್ಯದ ಮೂವರು ವಿದ್ಯಾರ್ಥಿಗಳು ಟಾಪ್–10 ಪಟ್ಟಿಯಲ್ಲಿದ್ದಾರೆ. ಕರ್ನಾಟಕದ ಹೃಷೀಕೇಶ್ ನಾಗಭೂಷಣ ಗಂಗೂಲೆ 715 ಅಂಕಗಳೊಂದಿಗೆ 3ನೇ ಸ್ಥಾನ, ಬೆಳಗಾವಿಯ ರುಚಾ ಪಾವಶೆ 715 ಅಂಕಗಳೊಂದಿಗೆ ನಾಲ್ಕನೇ ಸ್ಥಾನ ಹಾಗೂ ಎಸ್.ಆರ್.ಕೃಷ್ಣ 710 ಅಂಕಗಳೊಂದಿಗೆ ಎಂಟನೇ ಸ್ಥಾನ ಪಡೆದಿದ್ದಾರೆ.

ಭಾರತ್ ಜೋಡೋ ಯಶಸ್ಸಿಗೆ ಸಹಕರಿಸಿ

ಕಾಂಗ್ರೆಸ್ ಮುಖಂಡ ಕೆ.ಮರೀಗೌಡ ಕಾರ್ಯಕರ್ತರಲ್ಲಿ ಮನವಿ



ಮೈಸೂರು, ಸೆ.8– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲುವಿಗೆ ಸಂಕಲ್ಪ ಮಾಡಬೇಕೆಂದು ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷ, ಕಾಂಗ್ರೆಸ್ ಮುಖಂಡ ಕೆ.ಮರೀಗೌಡ ಮನವಿ ಮಾಡಿದರು.

ಕಾಂಗ್ರೆಸ್ ಸಂಘಟನೆ ನಿಟ್ಟಿನಲ್ಲಿ ರಾಹುಲ್ ಗಾಂಧಿ ನೇತೃತ್ವದಲ್ಲಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಹಮ್ಮಿಕೊಂಡಿರುವ 3,700 ಕಿ.ಮೀ. 'ಭಾರತ ಜೋಡಿಸು (ಭಾರತ್ ಜೋಡೋ) ಯಾತ್ರೆ ಅಕ್ಟೋಬರ್ 2ರಂದು ಮೈಸೂರಿಗೆ ಆಗಮಿಸಲಿರುವ ಹಿನ್ನೆಲೆಯಲ್ಲಿ ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ನಡೆದ ಚಾಮುಂಡೇಶ್ವರಿ ಕ್ಷೇತ್ರದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಬೂತ್ ಮಟ್ಟದ ಪದಾಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

ಕೇಂದ್ರ ಹಾಗೂ ರಾಜ್ಯದಲ್ಲಿ ಆಳ್ವಿಕೆ ನಡೆಸುತ್ತಿರುವ ಬಿಜೆಪಿ, ದೇಶದ ಸಂಪತ್ತನ್ನು ಲೂಟಿ ಮಾಡುತ್ತಿದೆ. ದಿನಬಳಕೆ ವಸ್ತುಗಳ ಬೆಲೆ ಗಗನಕ್ಕೇರುತ್ತಿದ್ದು ಜನರ ಬದುಕು ದುಸ್ತರವಾಗಿದೆ. ಸರ್ಕಾರದ ಆಸ್ತಿಯನ್ನು ಖಾಸಗಿಯವರಿಗೆ ಮಾರಾಟ ಮಾಡಲಾಗುತ್ತಿದೆ. ಉಳ್ಳವರ ಪರವಾಗಿರುವ ಸರ್ಕಾರಗಳಿಂದ ಜನ ರೋಸಿ ಹೋಗಿದ್ದಾರೆ. ಈ ಪರಿಸ್ಥಿತಿಯಲ್ಲಿ ಜನರ ಧ್ವನಿಯಾಗುವ ನಿಟ್ಟಿನಲ್ಲಿ ಕಾಂಗ್ರೆಸ್ ಐಕ್ಯತೆ ಯಾತ್ರೆ ಆರಂಭಿಸಲಾಗಿದೆ. ಅಕ್ಟೋಬರ್ 2ಕ್ಕೆ ಮೈಸೂರಿಗೆ ಆಗಮಿಸಲಿರುವ ಯಾತ್ರೆಯನ್ನು ಚಾಮುಂಡೇಶ್ವರಿ ಕ್ಷೇತ್ರದ ಕಡಕೊಳ ಗ್ರಾಮದಲ್ಲಿ ಸ್ವಾಗತಿಸಬೇಕು. ಆ ವೇಳೆ ಐದಾರು ಸಾವಿರ ಜನ ಭಾಗಿಯಾಗಲಿದ್ದಾರೆ ಎಂದು ತಿಳಿಸಿದರು.

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಅತ್ಯಂತ ಬಲಿಷ್ಠವಾಗಿದೆ. ಎಲ್ಲಾ ಜಾತಿ, ಜನಾಂಗದವರು ಕಾಂಗ್ರೆಸ್ ಪರವಾಗಿದ್ದಾರೆ. ಯಾವ ಭೀತಿ ಇಲ್ಲದೆ ಯುವ ಕಾರ್ಯಕರ್ತರು ಪಕ್ಷದ ಸಂಘಟನೆಗೆ ಪಣ ತೊಡಬೇಕು. ಪಕ್ಷ ಯಾರನ್ನು ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಿದರೂ ಒಗ್ಗಟ್ಟಿನಿಂದ ಕೆಲಸ ಮಾಡೋಣ. ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲದಿದ್ದರೆ ನಮಗೆ ಉಳಿಗಾಲವಿರುವುದಿಲ್ಲ. ಹಿರಿಯ ಮುತ್ಸದ್ದಿ ಸಿದ್ದರಾಮಯ್ಯನವರ ನೆರಳಿನಲ್ಲಿ ನಾವು ಪಕ್ಷ ಸಂಘಟಿಸಬೇಕು. ಇದಕ್ಕಾಗಿ ನಾವು ಕ್ಷೇತ್ರದ ಪ್ರತಿ ಗ್ರಾಮಕ್ಕೂ ಭೇಟಿ ನೀಡಿ ಜನರ ಸಹಕಾರ ಕೋರುತ್ತೇವೆ. ಒಟ್ಟಾರೆ ಚಾಮುಂಡೇಶ್ವರಿಯಲ್ಲಿ ಕಾಂಗ್ರೆಸ್ ಗೆಲ್ಲಿಸುವ ಮೂಲಕ ಸಿದ್ದರಾಮಯ್ಯನವರ ಗೌರವ ಹೆಚ್ಚಿಸೋಣ ಎಂದು ಕರೆ ನೀಡಿದರು.

ಸಭೆಯಲ್ಲಿ ಮಾಜಿ ಮೇಯರ್ ಟಿ.ಬಿ.ಚಿಕ್ಕಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜೆ.ಸತೀಶ್‌ಕುಮಾರ್, ಮುಖಂಡರಾದ ಕೃಷ್ಣಕುಮಾರ್ ಸಾಗರ್, ಎಪಿಎಂಸಿ ಮಾಜಿ ಅಧ್ಯಕ್ಷ ಹೊಸಹುಂಡಿ ರಘು, ಕೆಪಿಸಿಸಿ ಕಾರ್ಯದರ್ಶಿ ಗುರುಪಾದಸ್ವಾಮಿ, ಹಿನಕಲ್ ಹೊನ್ನಪ್ಪ, ರಾಜಣ್ಣ, ಹರೀಶ್ ಮೊಗಣ್ಣ, ಉಮಾಶಂಕರ್, ಸಿದ್ದರಾಜು, ಮಹೇಶ್, ರಘುರಾಂ, ರವಿ, ರಾಣಿ ಶಿವಣ್ಣ, ಆರೀಫ್, ಪ್ರಸಾದ್, ನಾಗರಾಜ್, ಮಹಾದೇವ್, ವಿಕ್ಕಿ ವಾಸು ಮತ್ತಿತರರು ಉಪಸ್ಥಿತರಿದ್ದರು.

ಬಿಜೆಪಿಯಿಂದ ಜೆಡಿಎಸ್ ಓಲೈಕೆ: ಕಾಂಗ್ರೆಸ್ ಪಾಳಯದಲ್ಲಿ ಕಳವಳ

ದೆಹಲಿಯಲ್ಲಿ ಬಿಡಾರ ಹೂಡಿರುವ ಮಾಜಿ ಸಿಎಂ ಕುಮಾರಸ್ವಾಮಿ ನಡೆ ನಿಗೂಢ..!



ಬೆಂಗಳೂರು, ಸೆ.8(ಕೆಎಂಶಿ)– ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದನ್ನು ತಡೆಯಲು ಬಿಜೆಪಿಯು ಜೆಡಿಎಸ್ ನೆರವಿನ ನಿರೀಕ್ಷೆಯಲ್ಲಿದೆ. ಮುಂಬರುವ ವಿಧಾನಸಭೆ ಚುನಾವಣೆ ಫಲಿತಾಂಶ ಮತ್ತೆ ಅತಂತ್ರವಾಗಲಿದೆ ಎಂಬುದನ್ನು ಹಲವು ಸಮೀಕ್ಷೆಗಳ ಮೂಲಕ ಅರಿತಿರುವ ಬಿಜೆಪಿಯ ಕೇಂದ್ರ ನಾಯಕರು, ಕಾಂಗ್ರೆಸ್ ಕಟ್ಟಿ ಹಾಕಲು ಜೆಡಿಎಸ್‌ನ ಪರೋಕ್ಷ ಬೆಂಬಲಕ್ಕೆ ಆಸಕ್ತಿ ತೋರಿದ್ದಾರೆ.

ಜೆಡಿಎಸ್ ವರಿಷ್ಠ ಹೆಚ್.ಡಿ.ದೇವೇಗೌಡರು ಹಾಗೂ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರಲ್ಲಿ ಈ ಸಂಬಂಧ ದೆಹಲಿ ಬಿಜೆಪಿ ನಾಯಕರು ಅನೌಪಚಾರಿಕವಾಗಿ ಪ್ರಸ್ತಾಪ ಮಾಡಿದ್ದಾರೆ. ಜೆಡಿಎಸ್ ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬರದಿದ್ದರೂ ಕೆಲವು ಕ್ಷೇತ್ರಗಳಲ್ಲಿ ತನ್ನ ಪ್ರಾಬಲ್ಯವನ್ನು ಉಳಿಸಿಕೊಂಡಿದೆ. ಇಲ್ಲದಿರುವ ಕಡೆ ಬಲಗೊಳ್ಳುವ ಪ್ರಯತ್ನ ಮಾಡುತ್ತಿದೆ. ಮೈತ್ರಿ ಸರ್ಕಾರದ ಪತನದ ನಂತರ ಕಾಂಗ್ರೆಸ್–ಜೆಡಿಎಸ್ ಸಂಬಂಧ ಸರಿಪಡಿಸಲಾಗದಷ್ಟು ಹಳಸಿದೆ. ಇದನ್ನು ಅಸ್ತ್ರ ಮಾಡಿಕೊಂಡು ತನ್ನ ಶತ್ರುವಾದ ಕಾಂಗ್ರೆಸ್, ಜೆಡಿಎಸ್‌ಗೂ ಶತ್ರು, ಶತ್ರುವನ್ನು ಶತ್ರುವಿನ ಮೂಲಕ ಹಣಿಯುವ ತಂತ್ರ ರೂಪಿಸಿದೆ. ಇದಕ್ಕೆ ಪುಷ್ಟಿ ನೀಡುವಂತೆ ಹೆಚ್.ಡಿ.ಕುಮಾರಸ್ವಾಮಿ ದೆಹಲಿಯಲ್ಲಿ ನಾಲ್ಕೈದು ದಿನಗಳಿಂದ ಬೀಡುಬಿಟ್ಟಿದ್ದಾರೆ. ದೆಹಲಿಯ ದೇವೇಗೌಡರ ನಿವಾಸದಲ್ಲೇ ಉಳಿದುಕೊಂಡಿರುವ ಕುಮಾರಸ್ವಾಮಿ ನಡೆ ನಿಗೂಢವಾಗಿದೆ. ಯಾರನ್ನು ಸಂಪರ್ಕಿಸಿದ್ದರು, ಯಾವ ಚುನಾವಣಾ ತಂತ್ರ ರೂಪಿಸುತ್ತಿದ್ದಾರೆ ಎಂಬುದು ರಾಜಕೀಯವಾಗಿ ತೀವ್ರ ಕುತೂಹಲ ಕೆರಳಿಸಿದೆ. ದೆಹಲಿಯಲ್ಲಿರುವ ಕುಮಾರಸ್ವಾಮಿ ಕಾರ್ಯತಂತ್ರದ ಬಗ್ಗೆ ಕಾಂಗ್ರೆಸ್‌ಗೆ ದಿಗಿಲುಂಟಾಗಿದೆ. ದೆಹಲಿಯ ಕಾಂಗ್ರೆಸ್ ಮೂಲಕ ಕುಮಾರಸ್ವಾಮಿ ಅವರ ಗೌಪ್ಯ ನಡೆ ತಿಳಿಯುವ ಯತ್ನವನ್ನು ಮಾಡಿದ್ದಾರೆ.

ಸೆ.12ಕ್ಕೆ ದ್ವಿತೀಯ ಪಿಯು ಪೂರಕ ಪರೀಕ್ಷೆ ಫಲಿತಾಂಶ ಪ್ರಕಟ

ಬೆಂಗಳೂರು, ಸೆ.8– ದ್ವಿತೀಯ ಪಿಯು ಪೂರಕ ಪರೀಕ್ಷೆ ಫಲಿತಾಂಶ ಸೆ.12ಕ್ಕೆ ಪ್ರಕಟಿಸುವುದಾಗಿ ಪಿಯುಸಿ ಬೋರ್ಡ್ ತಿಳಿಸಿದೆ. ದ್ವಿತೀಯ ಪಿಯು ಪೂರಕ ಪರೀಕ್ಷೆ ಫಲಿತಾಂಶವನ್ನು ಸೆ.12 ರಂದು ಪ್ರಕಟಿಸಲಾಗುತ್ತದೆ. ಬೆಳಗ್ಗೆ 11 ಗಂಟೆ ನಂತರ ವೆಬ್‌ಸೈಟ್‌ನಲ್ಲಿ ಫಲಿತಾಂಶ ಲಭ್ಯವಾಗಲಿದೆ ಎಂದು ಪ್ರಾಥಮಿಕ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಟ್ವೀಟ್ ಮಾಡಿದ್ದಾರೆ. ಸೆ. 12 ಬೆಳಗ್ಗೆ 11 ಗಂಟೆಗೆ ಇಲಾಖೆ ವೆಬ್ ಸೈಟ್‌ನಲ್ಲಿ ಪಿಯುಸಿ ಬೋರ್ಡ್ ಫಲಿತಾಂಶ ಪ್ರಕಟಿಸಲಿದೆ. karresults.nic.in ವೆಬ್‌ಸೈಟ್‌ನಲ್ಲಿ ಫಲಿತಾಂಶ ಲಭ್ಯವಾಗಲಿದೆ. ಆ.12 ರಿಂದ 25ರ ವರೆಗೆ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆ ನಡೆದಿತ್ತು. ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಗೆ 1,85,270 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದರು.

ಮೂರನೇ ಪುಟದಿಂದ

ಹೆದ್ದಾರಿ ಮುಳುಗಡೆ ಬಗ್ಗೆ ಪ್ರಧಾನಿ ಕಳವಳ

ಎಂದು ತಿಳಿಸಿದ್ದಾರೆ. ಸಣ್ಣಪುಟ್ಟ ವಿಷಯಗಳು ಎಷ್ಟು ದೊಡ್ಡದಾಗುತ್ತವೆ ಎಂಬುದಕ್ಕೆ ಇದೇ ಸಾಕ್ಷಿ. ಇನ್ನು ಮುಂದೆ ಇಂತಹ ಘಟನೆಗಳು ನಡೆಯದಂತೆ ನೋಡಿಕೊಳ್ಳಿ ಎಂದು ಅಧಿಕಾರಿಗಳಿಗೆ ಗಡಸು ಎಚ್ಚರಿಸಿದ್ದಾರೆ. ಬೆಂಗಳೂರು ನಗರದಲ್ಲಿ ಮಳೆಯಿಂದಾಗಿರುವ ಅನಾಹುತಗಳ ಬಗ್ಗೆ ಇಡೀ ವಿಶ್ವಮಟ್ಟದಲ್ಲೇ ಚರ್ಚೆಯಾಗುತ್ತಿದೆ. ಈ ನಗರಕ್ಕೆ ತನ್ನದೇ ಆದ ವರ್ಚಸ್ಸು ಇದೆ. ಅದಕ್ಕೆ ಕುಂದು ತರದಂತೆ ನೋಡಿಕೊಳ್ಳಿ ಎಂದು ಪ್ರಧಾನಿಯವರು ನನಗೆ ಹೇಳಿದ್ದಾರೆ. ಐಟಿ ಕಾರಿಡಾರ್‌ನಲ್ಲೇ ಮಳೆಯಿಂದ ದೊಡ್ಡ ಅನಾಹುತವಾಗಿದೆ. ಮುಂದೆ ಇಂತಹ ಸಮಸ್ಯೆಗಳು ಉದ್ಭವವಾಗದಂತೆ ನೋಡಿಕೊಳ್ಳಲು ಕೇಂದ್ರ ಭೂಸಾರಿಗೆಯಿಂದ ಎಲ್ಲ ರೀತಿಯ ಸಹಕಾರ ಕೊಡುತ್ತೇವೆ. ಕಾರಿಡಾರ್ ಪಕ್ಕದಲ್ಲೇ ಚೆನ್ನೈ ರಾಷ್ಟ್ರೀಯ ಹೆದ್ದಾರಿಯು ಹೋಗುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು, ತಕ್ಷಣವೇ ಮಳೆ ನೀರು ಸರಾಗವಾಗಿ ಹರಿದು ಹೋಗಲು ಮತ್ತು ಸುಗಮ ಸಂಚಾರಕ್ಕೆ ಏನೆಲ್ಲಾ ವ್ಯವಸ್ಥೆ ಬೇಕು ಅದನ್ನು ಯುದ್ಧೋಪಾದಿಯಲ್ಲಿ ಕೈಗೊಳ್ಳಿ ಎಂದು ಮುಖ್ಯಮಂತ್ರಿಯವರು ತಿಳಿಸಿದ್ದಾರೆ.

ಸ್ವಲ್ಪದರಲ್ಲಿ ಪ್ರವಾಸಿಗರು ಪಾರು

ಪ್ರವಾಸಿಗರು ಭಯಭೀತರಾಗಿ ಚೀರಿಕೊಂಡರು. ಚಾಲಕ ಪ್ರಕಾಶ್ ಧೈರ್ಯ ತುಂಬಿ ಸಮಯಪ್ರಜ್ಞೆಯಿಂದ ಹಿಮ್ಮುಖವಾಗಿ ಜೀಪನ್ನು ವೇಗವಾಗಿ ಚಾಲಿಸಿ ಅಪಾಯವನ್ನು ತಪ್ಪಿಸಿದ್ದಾನೆ. ಆನೆಯು ಸಫಾರಿ ವಾಹನವನ್ನು ಸುಮಾರು ಹತ್ತು ನಿಮಿಷಕ್ಕೂ ಹೆಚ್ಚು ಕಾಲ ಅಟ್ಟಿಸಿಕೊಂಡು ಬಂದು ಇದ್ದಕ್ಕಿದಂತೆ ರಸ್ತೆಯನ್ನು ಬಿಟ್ಟು ಕಾಡಿನತ್ತ ತಿರುಗಿದೆ. ಆಗ ಜೀಪಿನಲ್ಲಿದ್ದ ವನ್ಯಜೀವಿ ಪ್ರಿಯ ಪ್ರವಾಸಿಗರು ನೆಮ್ಮದಿಯ ನಿಟ್ಟುಸಿರು ಬಿಟ್ಟರು.

ಈ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಜಂಗಲ್ ಲಾಡ್ಜಸ್‌ನ ಸಫಾರಿ ವಾಹನದ ಚಾಲಕ ಪ್ರಕಾಶ್ ಸಮಯ ಪ್ರಜ್ಞೆಯಿಂದ, ನಡೆಯಬಹುದಾಗಿದ್ದ ಅನಾಹುತ ತಪ್ಪಿದೆ. ಎಲ್ಲಾ ವಾಹನ ಚಾಲಕರು ಇದೇ ರೀತಿ ಧೈರ್ಯದಿಂದ ವರ್ತಿಸಬೇಕು ಎಂದು ವನ್ಯಜೀವಿ ಛಾಯಾಗ್ರಾಹಕ ಮನೋಜ್ ಗನ್ನ ತಿಳಿಸಿದ್ದಾರೆ.

> **ಆನೆಗಳು ರೋಷಗೊಂಡ ಸಂದರ್ಭಗಳಲ್ಲಿ ವಾಹನಗಳ ಮೇಲೆ ದಾಳಿ ನಡೆಸುವುದು, ಅವುಗಳ ಅಟ್ಟಿಸಿಕೊಂಡು ಬರುವುದು ಸಹಜ. ಇಂತಹ ಸಂದರ್ಭದಲ್ಲಿ ವಾಹನ ಸವಾರರು ಗಾಬರಿಗೊಳ್ಳದೆ ಧೈರ್ಯದಿಂದ ಹಿಮ್ಮುಖವಾಗಿ ಅಥವಾ ಮುಮ್ಮುಖ ವಾಗಿ ಚಲಿಸಿ ಆನೆಯಿಂದ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡಿದರೆ ಯಾವುದೇ ಅನಾಹುತ ನಡೆಯುವುದಿಲ್ಲ. ಆನೆಗಳು ಕೆಲ ಸಮಯ ಹೆದರಿಕೆಯನ್ನುಂಟು ಮಾಡಿ ತಮ್ಮ ಪಾಡಿಗೆ ತಾವು ಹೊರಟುಹೋಗುತ್ತವೆ.**
> – ಸಿದ್ದರಾಜು, ವಲಯ ಅರಣ್ಯಾಧಿಕಾರಿ, ಅಂತರಸಂತೆ ವನ್ಯ ಜೀವಿ ವಲಯ.

‘ಭಾರತ್ ಜೋಡೋ ಯಾತ್ರೆ’ ಆರಂಭ

ಪ್ರಾರಂಭಿಸಿದರು. ದ್ವೇಷದಿಂದ ತನ್ನ ದೇಶವನ್ನು ಕಳೆದುಕೊಳ್ಳುವುದಿಲ್ಲ ಎಂಬ ಪ್ರತಿಪಾದನೆಯೊಂದಿಗೆ ಪಕ್ಷದ ಮಹತ್ವಾಕಾಂಕ್ಷೆಯ ‘ಭಾರತ್ ಜೋಡೋ’ ಯಾತ್ರೆಗೆ ರಾಹುಲ್ ಗಾಂಧಿ ಬುಧವಾರ ಚಾಲನೆ ನೀಡಿದ್ದರು ಮತ್ತು ಬಿಜೆಪಿ–ಆರ್‌ಎಸ್‌ಎಸ್ ದೇಶವನ್ನು ಧಾರ್ಮಿಕ ಆಧಾರದ ಮೇಲೆ ವಿಭಜಿಸಲು ಪ್ರಯತ್ನಿಸುತ್ತಿವೆ ಎಂದು ಆರೋಪಿಸಿದ್ದರು. 2024 ರ ಲೋಕಸಭೆ ಚುನಾವಣೆಗೆ ಮುಂಚಿತವಾಗಿ ಬಿಕ್ಕಟ್ಟಿನಿಂದ ಬಳಲುತ್ತಿರುವ ಪಕ್ಷದ ಪುನರುಜ್ಜೀವನದ ಮೇಲೆ ಕಣ್ಣಿಟ್ಟಿರುವ ಪಕ್ಷದ ಮುಖ್ಯಸ್ಥೆ ಸೋನಿಯಾ ಗಾಂಧಿ ಅವರು ಈ ಮೆರವಣಿಗೆಯನ್ನು "ಒಗ್ಗೂಡಿಸುವ ಸಂದರ್ಭ" ಎಂದು ಕರೆದಿದ್ದಾರೆ. ಈ ಮೆರವಣಿಗೆಯು ಹಳೆಯ ಪಕ್ಷವನ್ನು ಪುನರುಜ್ಜೀವನಗೊಳಿಸಲು ಸಹಾಯ ಮಾಡುತ್ತದೆ ಎಂದು ಆಶಿಸಲಾಗಿದೆ. ಮೆರವಣಿಗೆಯು ಸುಮಾರು ಐದು ತಿಂಗಳಲ್ಲಿ 12 ರಾಜ್ಯಗಳು ಮತ್ತು ಎರಡು ಕೇಂದ್ರಾಡಳಿತ ಪ್ರದೇಶಗಳಿಗೆ ಭೇಟಿ ನೀಡಲಿದೆ. ಬೆಳಿಗ್ಗೆ 7 ರಿಂದ 10:30 ರವರೆಗೆ ಮತ್ತು ಮಧ್ಯಾಹ್ನ 3:30 ರಿಂದ 6:30 ರವರೆಗೆ ಎರಡು ಬ್ಯಾಚ್‌ಗಳಲ್ಲಿ ಮೆರವಣಿಗೆ ಸಾಗಲಿದೆ. ಬೆಳಗಿನ ಅಧಿವೇಶನವು ಕಡಿಮೆ ಭಾಗವಹಿಸುವವರನ್ನು ಒಳಗೊಂಡಿರುತ್ತದೆ. ಸಂಜೆಯ ಅಧಿವೇಶನವು ಅಧಿಕ ಸಂಖ್ಯೆಯ ಜನರನ್ನು ಒಳಗೊಂಡಿರುತ್ತದೆ. ಭಾಗವಹಿಸುವವರು ಪ್ರತಿದಿನ 22–23 ಕಿ.ಮೀ ನಡೆಯುತ್ತಾರೆ. ಇದರಲ್ಲಿ 30ರಷ್ಟು ‘ಭಾರತ ಯಾತ್ರಿಗಳು’ ಮಹಿಳೆಯರಿದ್ದಾರೆ. ಭಾರತ ಯಾತ್ರಿಗಳ ಸರಾಸರಿ ವಯಸ್ಸು 38. ಸುಮಾರು 50,000 ನಾಗರಿಕರು ಯಾತ್ರೆಯಲ್ಲಿ ಭಾಗವಹಿಸಲು ನೋಂದಾಯಿಸಿಕೊಂಡಿದ್ದಾರೆ. ಸೆ. 11 ರಂದು ಕೇರಳ ತಲುಪಿದ ನಂತರ, ಯಾತ್ರೆಯು ಮುಂದಿನ 18 ದಿನಗಳ ಕಾಲ ರಾಜ್ಯದ ಮೂಲಕ ಸಂಚರಿಸಲಿದ್ದು, ಸೆ.30 ರಂದು ಕರ್ನಾಟಕವನ್ನು ತಲುಪಲಿದೆ. ಇದು ಉತ್ತರಕ್ಕೆ ಚಲಿಸುವ ಮೊದಲು 21 ದಿನಗಳ ಕಾಲ ಕರ್ನಾಟಕದಲ್ಲಿರಲಿದೆ. ತಿರುವನಂತಪುರಂ, ಕೊಚ್ಚಿ, ನಿಲಂಬೂರ್, ಮೈಸೂರು, ಬಳ್ಳಾರಿ, ರಾಯಚೂರು, ವಿಕಾರಾಬಾದ್, ನಾಂದೇಡ್, ಜಲಗಾಂವ್, ಇಂದೋರ್, ಕೋಟಾ, ದೌಸಾ, ಅಲ್ವಾರ್, ಬುಲಂದ್‌ಶಹರ್, ದೆಹಲಿ, ಅಂಬಾಲಾ, ಪಠಾಣ್‌ಕೋಟ್ ಮೂಲಕ ಸಾಗಿ ಕೊನೆಗೆ ಶ್ರೀನಗರದಲ್ಲಿ ಕೊನೆಗೊಳ್ಳಲಿದೆ. ದೇಶದಲ್ಲಿ ಅಗತ್ಯ ವಸ್ತುಗಳ ಬೆಲೆ ಏರಿಕೆ, ನಿರುದ್ಯೋಗ ಸಮಸ್ಯೆ, ಧ್ರುವೀಕರಣ ವಿಷಯಗಳನ್ನಿಟ್ಟು ಕೊಂಡು ಕಾಂಗ್ರೆಸ್ ಈ ಯಾತ್ರೆಯನ್ನು ಹಮ್ಮಿಕೊಂಡಿದ್ದು ಅ.17ರಂದು ಪಕ್ಷದ ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ನಡೆಯಲಿರುವ ಚುನಾವಣೆಗೆ ಮುನ್ನ ಪಕ್ಷದೊಳಗೆ ಆಂತರಿಕ ಭಿನ್ನಾಭಿಪ್ರಾಯದ ಹೊತ್ತಿನಲ್ಲಿ ಈ ಯಾತ್ರೆಯನ್ನು ಹಮ್ಮಿಕೊಂಡಿದೆ. 12 ರಾಜ್ಯಗಳಲ್ಲಿ 5 ತಿಂಗಳ ಕಾಲ ನಡೆಯಲಿರುವ ಈ ಯಾತ್ರೆಯ ಮೂಲಕ ದೇಶದ ಮೂಲೆ ಮೂಲೆಗಳಲ್ಲಿ ಜನರನ್ನು ತಲುಪುವುದು ಪಕ್ಷದ ಗುರಿಯಾಗಿದೆ. ದೇಶದಲ್ಲಿ ರಾಜಕೀಯ ಸ್ಥಿತಿಗತಿ ಋಣಾತ್ಮಕತೆಯತ್ತ ಸಾಗುತ್ತಿದ್ದು, ಜನರ ನೈಜ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಯುತ್ತಿಲ್ಲ, ಬೆಲೆ ಏರಿಕೆಯಂತಹ ಜನರ ಸಮಸ್ಯೆಗಳತ್ತ ಗಮನಹರಿಸುವುದರಿಂದ ಮೆರವಣಿಗೆಯಲ್ಲಿ ಪಾಲ್ಗೊಳ್ಳುವಂತೆ ಪ್ರಿಯಾಂಕಾ ವಿಡಿಯೋ ಸಂದೇಶದಲ್ಲಿ ಮನವಿ ಮಾಡಿದ್ದಾರೆ.

ಭರಿಸಲು ಸರ್ಕಾರ ನಿರ್ಧಾರ

15.79 ಕೋಟಿ ಸೇರಿ, ಒಟ್ಟು 23.18 ಕೋಟಿ ರೂ. ಮೊತ್ತವನ್ನು ಪುನರ್ ವಿನಿ ಯೋಗದ ಮೂಲಕ ಬಿಡುಗಡೆ ಮಾಡಿ ಆದೇಶಿಸಲಾಗಿದೆ. ಪಿಇಟಿ ಸ್ಕ್ಯಾನ್‌ಗೆ 10,000 ರೂ., ಅಸ್ಥಿ ಮಜ್ಜೆ ಕಸಿಗೆ ಎರಡು ವಿಧಾನಗಳಲ್ಲಿ 7 ಲಕ್ಷ ರೂ. ಹಾಗೂ 21 ಲಕ್ಷ ರೂ., ರೋಬೋ ಟಿಕ್ ಸರ್ಜರಿಗೆ 1.50 ಲಕ್ಷ ರೂ. ಸೇರಿದಂತೆ ವಿವಿಧ ಚಿಕಿತ್ಸೆಗಳಿಗೆ ವೆಚ್ಚ ನಿಗದಿ ಮಾಡಲಾಗಿದೆ ಎಂದು ಡಾ.ಸುಧಾಕರ್ ತಿಳಿಸಿದರು.

2ನೇ ಎಲಿಜಬೆತ್ ಇನ್ನಿಲ್ಲ

ಆರೋಗ್ಯ ಸ್ವಲ್ಪಮಟ್ಟಿಗೆ ಹದಗೆಟ್ಟಿತ್ತು. ವೈದ್ಯರ ನಿಗಾದಲ್ಲಿಯೇ ಇರಬೇಕು ಎಂದು ವೈದ್ಯರು ಶಿಫಾರಸು ಮಾಡಿದ್ದರು. ರಾಣಿಯ ಮಕ್ಕಳಾದ ಚಾರ್ಲ್ಸ್, ರಾಜಕುಮಾರಿ 72 ವರ್ಷದ ಆ್ಯನೆ, ರಾಜಕುಮಾರರಾದ 62 ವರ್ಷದ ಆಂಡ್ರ್ಯೂ ಮತ್ತು 58 ವರ್ಷದ ಎಡ್ವರ್ಡ್ ಅವರು ಬಾಲ್‌ಮೊರಲ್‌ನಲ್ಲಿರುವ ರಾಣಿಯ ಎಸ್ಟೇಟ್‌ಗೆ ಧಾವಿಸಿದರು. ರಾಣಿಯಾಗಿ ಅವರು ಬುಧವಾರವಷ್ಟೇ ಬ್ರಿಟನ್‌ನ 15ನೇ ಪ್ರಧಾನಿಯಾಗಿ ಲಿಜ್ ಟ್ರಸ್ ಅವರನ್ನು ನೇಮಕ ಮಾಡಿದ್ದರು. 2ನೇ ಎಲಿಜಬೆತ್ ನಿಧನಕ್ಕೆ ಪ್ರಧಾನಿ ನರೇಂದ್ರಮೋದಿ ಸಂತಾಪ ಸೂಚಿಸಿದ್ದು, ಅವರು ಧೀಮಂತ ಮಹಿಳೆ. ಬ್ರಿಟನ್ ಜನತೆಗೆ ಸ್ಫೂರ್ತಿದಾಯಕ ನಾಯಕತ್ವ ಕಲ್ಪಿಸಿದ್ದರು ಎಂದು ಬಣ್ಣಿಸಿದ್ದಾರೆ.

ಮೈಸೂರಲ್ಲಿ ಟ್ರಾನ್ಸ್‌ಲೇಷನಲ್ ರಿಸರ್ಚ್ ದಕ್ಷಿಣ ಭಾರತದ ಮೊದಲ ಅಂತಾರಾಷ್ಟ್ರೀಯ ಸಮ್ಮೇಳನ

ಕೋವಿಡ್‌ಗೆ 6 ತಿಂಗಳಲ್ಲಿ ಔಷಧ ಸಿದ್ಧಪಡಿಸಿ ನೆರವಾದ ಜೆನೆಟಿಕ್ಸ್

● ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ● ಯಾವುದೇ ದೈಹಿಕ ಸಮಸ್ಯೆ ಇಲ್ಲದೆಯೂ ಹೃದಯಾಘಾತ ಸಂಬಂಧ ಅಧ್ಯಯನ ಅವಶ್ಯ ● ಬರೀ ವಾಯುಮಾಲಿನ್ಯದಿಂದಲೇ ಪ್ರತಿವರ್ಷ 30 ಲಕ್ಷ ಜನ ಸಾವಿಗೀಡಾಗುತ್ತಿದ್ದಾರೆ

ಮೈಸೂರು, ಸೆ.8(ಆರ್‌ಕೆಬಿ)– ಅನೇಕ ರೋಗಗಳಿಗೆ ಈ ಹಿಂದೆ ಚಿಕಿತ್ಸೆಯೇ ಇರಲಿಲ್ಲ. ಜೆನೆಟಿಕ್ ಅಧ್ಯಯನವಿಲ್ಲದೆ ವೈದ್ಯಕೀಯವಾಗಿ ಯಾವ ಕ್ರಾಂತಿಯೂ ಆಗುವುದಿಲ್ಲ. ಈಗ ಚಿಕಿತ್ಸೆ ದೊರಕುತ್ತಿದೆ. ಮನುಕುಲಕ್ಕೆ ಬಹಳಷ್ಟು ನೆರವನ್ನು ಜೆನೆಟಿಕ್ಸ್ ನೀಡುತ್ತಿದೆ. ಕೋವಿಡ್‌ಗೆ ಕೇವಲ 6 ತಿಂಗಳಲ್ಲಿ ಔಷಧ ತಯಾರಿಸಲು ಜೆನೆಟಿಕ್ಸ್ ನೆರವಾಯಿತು. ಅದರ ಒಟ್ಟಾರೆ ಯಶಸ್ಸು ನಿಮಗೆ ಸಲ್ಲಬೇಕು. ಮೂಲ ವಿಜ್ಞಾನವಿಲ್ಲದೆ ಕ್ಲಿನಿಕಲ್ ಸೈನ್ಸ್ ಅಥವಾ ಮೆಡಿಕಲ್ ಸೈನ್ಸ್ ಇರುವುದಿಲ್ಲ. ಆದ್ದರಿಂದ ಮೂಲ ವಿಜ್ಞಾನಿಗಳಿಗೆ ಎಲ್ಲವೂ ಸಲ್ಲಬೇಕು. ಅವರಿಲ್ಲದೆ ಆವಿಷ್ಕಾರ ಮಾಡಲಾಗದು ಎಂದು ಜಯದೇವ ಹೃದ್ರೋಗ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ತಿಳಿಸಿದರು.

ಮೈಸೂರು ವಿವಿ ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್ ವಿಭಾಗವು ಇಂಡಿಯನ್ ಅಕಾಡೆಮಿ ಆಫ್ ಬಯೋಮೆಡಿಕಲ್ ಸೈನ್ಸ್ ಸಹಯೋಗದಲ್ಲಿ ಗುರುವಾರ ಆಯೋಜಿಸಿದ್ದ ಟ್ರಾನ್ಸ್‌ಲೇಷನಲ್ ರಿಸರ್ಚ್ ದಕ್ಷಿಣ ಭಾರತದ ಮೊದಲ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಅವರು ಮಾತನಾಡಿದರು.

ಮನುಷ್ಯನ ಜೀವನ ಶೈಲಿಯಿಂದಾಗಿ ಅನೇಕ ರೋಗಗಳು ಕಂಡುಬರುತ್ತಿವೆ. ಕೋವಿಡ್, ಮಂಕಿಪಾಕ್ಸ್ ಸೇರಿದಂತೆ ಅನೇಕ ಕಾಯಿಲೆಗಳು ಸುನಾಮಿಯಂತೆ ಅಪ್ಪಳಿಸುತ್ತಿದ್ದು, ಜೆನೆಟಿಕ್ಸ್‌ನಿಂದಾಗಿ ಇವುಗಳಿಗೆ ಚಿಕಿತ್ಸೆ ದೊರೆಯುತ್ತಿದೆ. ಇವೆಲ್ಲವೂ ಮಾನವ ನಿರ್ಮಿತ ವಿಕೋಪಗಳು. ಅನುವಂಶಿಕತೆ ಎಂಬುದು ಗುಂಡುತುಂಬಿದ ಗನ್ ಇದ್ದಂತೆ. ಆದರೆ ಅದನ್ನು ಜೀವನಶೈಲಿ ಮತ್ತು ಹವಾಮಾನಗಳು ನಿಯಂತ್ರಿಸುತ್ತಿವೆ. ಇದರಿಂದಾಗಿ ವಿಭಿನ್ನ ರೋಗಗಳು ಕಂಡುಬರುತ್ತಿವೆ. ಕೋವಿಡ್ ಮತ್ತು ಮಂಕಿಪಾಕ್ಸ್ ಮನುಷ್ಯ ನಿರ್ಮಿತ ಕಾಯಿಲೆಗಳು. ಹಿಂದೆ ಲಸಿಕೆ ಕಂಡುಹಿಡಿಯಲು 10 ರಿಂದ 20 ವರ್ಷ ಬೇಕಾಗುತ್ತಿತ್ತು. ಆದರೆ ಈಗ ವರ್ಷದೊಳಗೆ ಲಸಿಕೆ ಕಂಡು ಹಿಡಿಯಲಾಗುತ್ತಿದೆ. ಜೆನೆಟಿಕ್ಸ್ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನದಲ್ಲಾದ ಸುಧಾರಣೆ ಇದಕ್ಕೆ ಕಾರಣ. ಇಲ್ಲದಿದ್ದರೆ ಕೋವಿಡ್‌ನಿಂದ ಲಕ್ಷಾಂತರ ಮಂದಿ ಸಾವಿಗೀಡಾಗುತ್ತಿದ್ದರು ಎಂದು ತಿಳಿಸಿದರು.

ಮನುಷ್ಯನ ಜೀವನ ಶೈಲಿ ಮತ್ತು ಆಹಾರ ಸಂಸ್ಕೃತಿ ಬದಲಾಗಬೇಕು. ಈಗ ಎಲ್ಲರೂ ಒತ್ತಡಕ್ಕೆ ಸಿಲುಕುತ್ತಿದ್ದಾರೆ. ಶಿಕ್ಷಣ ವ್ಯವಸ್ಥೆಯಲ್ಲಿ ಬದಲಾವಣೆ ಆಗಬೇಕಿದೆ. ಶಾಲೆಗಳು ಬೆಳಗ್ಗೆ 10ಕ್ಕೆ ಆರಂಭವಾಗಿ 12ಕ್ಕೆ ಮುಗಿಯಬೇಕು. ವಾರದಲ್ಲಿ ನಾಲ್ಕು ದಿನ ಇರಬೇಕು. ಈಗ ಯುಕೆಜಿ ಮಗುವನ್ನು ಹೊಂದಿದ ತಾಯಿ ಒತ್ತಡಕ್ಕೆ ಒಳಗಾಗುತ್ತಾಳೆ. ಮಗು ಕಡಿಮೆ ಅಂಕ ಪಡೆದರೆ ಆಕೆಗೆ ಹೃದ್ರೋಗ ಚಿಕಿತ್ಸೆ ಬರುವಂತಾಗಿದೆ ಎಂದು ಹೇಳಿದರು.

ಹೃದ್ರೋಗ, ಕ್ಯಾನ್ಸರ್, ಪಾರ್ಶ್ವವಾಯು, ಮಧುಮೇಹ ಮೊದಲಾದ ಸಾಂಕ್ರಾಮಿಕವಲ್ಲದ ರೋಗಗಳಿಂದ ಸಾಯುವವರ ಸಂಖ್ಯೆ ಶೇ.50ರಷ್ಟಿದೆ. ಜಯದೇವ ಆಸ್ಪತ್ರೆಯಲ್ಲಿ 5 ವರ್ಷಗಳಲ್ಲಿ 16–45 ವರ್ಷದ 6 ಸಾವಿರ ಮಂದಿಗೆ ಚಿಕಿತ್ಸೆ ನೀಡಲಾಗಿದೆ. ಜೀವನಶೈಲಿ ಬದಲಾವಣೆಯಿಂದಾಗಿ ಅಕಾಲಿಕ ಹೃದಯಾಘಾತ ಆಗುತ್ತಿದೆ. 65 ವರ್ಷದವರು ಅಕಾಲಿಕ ಹೃದಯಾಘಾತಕ್ಕೆ ಒಳಗಾಗುತ್ತಿದ್ದರು. ಈಗ ಆ ವಯಸ್ಸು 45ಕ್ಕೆ ಇಳಿಕೆಯಾಗಿದೆ. ಶೇ.8ರಷ್ಟು ಮಹಿಳೆಯರು ಹೃದ್ರೋಗಕ್ಕೆ ಒಳಗಾಗುತ್ತಿದ್ದಾರೆ. ಇದನ್ನು ಗಂಭೀರವಾಗಿ ಪರಿಗಣಿಸಬೇಕಿದೆ ಎಂದರು.

ವಾಯುಮಾಲಿನ್ಯದಿಂದ ಪ್ರತಿ ವರ್ಷ 20 ಲಕ್ಷ ಜನ ಸಾವಿಗೀಡಾಗುತ್ತಿದ್ದಾರೆ. ವಾಯುಮಾಲಿನ್ಯವು ಶ್ವಾಸಕೋಶದ ಸಮಸ್ಯೆ ಜೊತೆಗೆ ಹೃದ್ರೋಗಕ್ಕೂ ಕಾರಣವಾಗುತ್ತಿದೆ. ದೇಶದಲ್ಲಿ 30ರಷ್ಟು ಸಾವು ಹೃದಯಾಘಾತಕ್ಕೆ ಸಂಬಂಧಿಸಿದ್ದಾಗಿದೆ. ಶೇ. 30ರಷ್ಟು ಮಂದಿ ಅಪಾಯಕಾರಿ ಅಂಶಗಳನ್ನು ಹೊಂದಿರುವುದಿಲ್ಲ. ಧೂಮಪಾನ, ರಕ್ತದೊತ್ತಡ, ಮಧುಮೇಹ, ಬೊಜ್ಜು ಇರದಿದ್ದರೂ ಹೃದಯಾಘಾತವಾಗುತ್ತಿದೆ. ಈ ಬಗ್ಗೆ ಹೆಚ್ಚು ಸಂಶೋಧನೆ ನಡೆಯಬೇಕು ಎಂದು ಅವರು ತಿಳಿಸಿದರು.

ಮೊದಲ ಹತ್ತು ವರ್ಷ ವಯಸ್ಸು ಕೇಳುತ್ತೇವೆ. 30 ವರ್ಷದವರೆಗೆ ಎಷ್ಟು ಅಂಕ ಎನ್ನುತ್ತೇವೆ, ಆ ನಂತರದ 30 ವರ್ಷ ವೇತನ ಕೇಳುತ್ತೇವೆ. ನಂತರ ಸಂಪಾದನೆ, ಆ ಬಳಿಕ ಬಿಪಿ, ಸಕ್ಕರೆ ಅಂಶ ಕೇಳುತ್ತೇವೆ, ಜೀವನ ಶೈಲಿಯು ಈ ಮಟ್ಟಕ್ಕೆ ತಂದಿಟ್ಟಿದೆ. ತಡವಾಗಿ ಮದುವೆ ಆಗುವುದು ಮತ್ತು ಮಕ್ಕಳಾಗುವುದೂ ಕೂಡ ಕಾಯಿಲೆಗಳಿಗೆ ಕಾರಣವಾಗುತ್ತದೆ. ಅನುವಂಶಿಕಕ್ಕೂ ಜಾತಕ ನೋಡಬೇಕಾದ ಪರಿಸ್ಥಿತಿ ಬಂದಿದೆ. ಕೆಲವು ವಿದೇಶಗಳಲ್ಲಿ ಅದು ನಡೆಯುತ್ತಿದೆ. ಹೃದಯ ಆರೋಗ್ಯವಂತವಾಗಿದೆಯೇ ಎಂದು ತಿಳಿದುಕೊಳ್ಳುವ ಪ್ರಯತ್ನ ನಡೆಯುತ್ತಿದೆ ಎಂದರು.

ಎಚ್ಚರಿಕೆ ವಹಿಸುವುದು ಅಗತ್ಯ: ಸಮ್ಮೇಳನವನ್ನು ಉದ್ಘಾಟಿಸಿದ ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್ ಮಾತನಾಡಿ, ಹೊಸ ಔಷಧಗಳು ಮತ್ತು ಚಿಕಿತ್ಸೆಗಳ ಅನ್ವೇಷಣೆಯಲ್ಲಿ ವೈಜ್ಞಾನಿಕ ಪ್ರಯೋಗ, ಅಭಿವೃದ್ಧಿ ಮತ್ತು ಮೌಲ್ಯಮಾಪನದ ವೇಳೆ ಎಚ್ಚರಿಕೆ ವಹಿಸುವ ಅಗತ್ಯವಿದೆ ಎಂದು ತಿಳಿಸಿದರು.

ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ಮಾರ್ಗಸೂಚಿಗಳನ್ನು ರೂಪಿಸುವಾಗ ಶಿಕ್ಷಣ ಮತ್ತು ವೈದ್ಯಕೀಯ ವಿಜ್ಞಾನಗಳ ನಡುವಿನ ಸಂಬಂಧವನ್ನು ತಿಳಿಸುತ್ತದೆ. ಆದ್ದರಿಂದ ನಾವು ಶಿಕ್ಷಣ ಮತ್ತು ವೈದ್ಯಕೀಯ ವಿಜ್ಞಾನಗಳ ನಡುವೆ ಸಂವಹನವನ್ನು ಹುಡುಕುವುದು ಬಹಳ ಸೂಕ್ತವಾಗಿದೆ. ಹೊಸ ಔಷಧಗಳು ಮತ್ತು ಚಿಕಿತ್ಸೆಗಳ ಅನ್ವೇಷಣೆಗೆ ಎಚ್ಚರಿಕೆಯ ವೈಜ್ಞಾನಿಕ ಪ್ರಯೋಗ, ಅಭಿವೃದ್ಧಿ ಮತ್ತು ಮೌಲ್ಯಮಾಪನದ ಅಗತ್ಯವಿದೆ ಎಂದು ಹೇಳಿದರು.

ಐಸಿಎಂಆರ್ ಸಂಸ್ಥೆಯು ಬಯೋಮೆಡಿಕಲ್ ಸಂಶೋಧನೆಯ ಸೂತ್ರೀಕರಣ, ಸಮನ್ವಯ ಮತ್ತು ಪ್ರಚಾರಕ್ಕಾಗಿ ಇರುವ ವಿಶ್ವದ ಅತ್ಯಂತ ಹಳೆಯ ವೈದ್ಯಕೀಯ ಸಂಶೋಧನಾ ಸಂಸ್ಥೆಗಳಲ್ಲಿ ಒಂದು ಉನ್ನತ ಸಂಸ್ಥೆಯಾಗಿದೆ. ಭಾಷಾಂತರ ಸಂಶೋಧನೆಯು ಪ್ರಯೋಗಾಲಯದಲ್ಲಿ ಅಥವಾ ಚಿಕಿತ್ಸಾಲಯಗಳಲ್ಲಿ ಮಾಡಿದ ವಿಜ್ಞಾನದ ಆವಿಷ್ಕಾರಗಳನ್ನು ತಿಳಿಸುತ್ತದೆ. ಜೊತೆಗೆ ಮನುಷ್ಯರಿಗೆ ನೇರವಾಗಿ ಪ್ರಯೋಜನಕಾರಿಯಾದ ವೈದ್ಯಕೀಯ ಆರೈಕೆಗೆ ಹೊಸ ಚಿಕಿತ್ಸೆಗಳು ಮತ್ತು ವಿಧಾನಗಳಾಗಿ ಮಾರ್ಪಡಿಸುತ್ತದೆ ಎಂದು ತಿಳಿಸಿದರು.

ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಮಾತನಾಡಿ, ಬೇರೆ ಬೇರೆ ವಸ್ತು ಹಾಗೂ ವ್ಯಕ್ತಿಗಳನ್ನು ಭೇಟಿ ಮಾಡುವುದೇ ಟ್ರಾನ್ಸ್‌ಲೇಷನ್ ರಿಸರ್ಚ್‌ನ ಉದ್ದೇಶ. ಮೂಲ ಸಂಶೋಧನೆ ಹಾಗೂ ಕ್ಲಿನಿಕಲ್ ರಿಸರ್ಚ್ ಬಗ್ಗೆ ಇಂದು ಮಾತನಾಡುತ್ತೇವೆ. ಹೊಸ ಹೊಸ ಚಿಕಿತ್ಸಾ ವಿಧಾನಗಳು, ಜ್ಞಾನ, ಅನ್ವಯಕಗಳು, ರೋಗಪತ್ತೆ ಯಂತ್ರಗಳು ಬರಬೇಕಿದೆ. ಈ ಬಗ್ಗೆ ಆರೋಗ್ಯ ತಜ್ಞರು ಆಲೋಚಿಸಬೇಕಿದೆ. ಕ್ಲಿನಿಕಲ್ ಡಾಟಾವನ್ನು ಸಂಶೋಧಕರು ಬಳಕೆ ಮಾಡಬೇಕಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಸಮ್ಮೇಳನದ ಕಿರುಹೊತ್ತಿಗೆಯನ್ನು ಬಿಡುಗಡೆ ಮಾಡಲಾಯಿತು. ಬೆಂಗಳೂರು ಜಯದೇವ ಹೃದಯ ರೋಗ ವಿಜ್ಞಾನ ಸಂಸ್ಥೆ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಸಮ್ಮೇಳನ ಉದ್ಘಾಟಿಸಿದರು. ಆಮ್ಸಟರ್‌ಡಾಮ್ ಯೂನಿವರ್ಸಿಟಿ ಮೆಡಿಕಲ್ ಸೆಂಟರ್‌ನ ಡಾ.ಹರಿ. ಎಸ್.ಶರ್ಮ, ಜೆನೆಟಿಕ್ಸ್ ಮತ್ತು ಜೆನೊಮಿಕ್ಸ್ ವಿಭಾಗದ ಮುಖ್ಯಸ್ಥೆ ಪ್ರೊ.ಎಸ್.ಎಸ್.ಮಾಲಿನಿ ಉಪಸ್ಥಿತರಿದ್ದರು.



ಮೈಸೂರು ವಿವಿ ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್ ವಿಭಾಗವು ಇಂಡಿಯನ್ ಅಕಾಡೆಮಿ ಆಫ್ ಬಯೋಮೆಡಿಕಲ್ ಸೈನ್ಸ್ ಸಹಯೋಗದಲ್ಲಿ ನಡೆದ ‘ಟ್ರಾನ್ಸ್‌ಲೇಷನಲ್ ರಿಸರ್ಚ್ ದಕ್ಷಿಣ ಭಾರತದ ಮೊದಲ ಅಂತಾರಾಷ್ಟ್ರೀಯ ಸಮ್ಮೇಳನ’ಕ್ಕೆ ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಚಾಲನೆ ನೀಡಿದರು. ಚಿತ್ರದಲ್ಲಿ ಜಯದೇವ ಹೃದ್ರೋಗ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ ಸಿ.ಎನ್.ಮಂಜುನಾಥ್, ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ, ಆಮ್ಸಟರ್‌ಡಾಮ್ ಯೂನಿವರ್ಸಿಟಿ ಮೆಡಿಕಲ್ ಸೆಂಟರ್‌ನ ಡಾ.ಹರಿ.ಎಸ್.ಶರ್ಮ, ಜೆನೆಟಿಕ್ಸ್ ಅಂಡ್ ಜೆನೊಮಿಕ್ಸ್ ವಿಭಾಗದ ಮುಖ್ಯಸ್ಥೆ ಪ್ರೊ.ಎಸ್.ಎಸ್.ಮಾಲಿನಿ ಅವರನ್ನು ಕಾಣಬಹುದು.

> **ಮೊದಲ ಹತ್ತು ವರ್ಷ ವಯಸ್ಸು ಕೇಳುತ್ತೇವೆ. 30 ವರ್ಷದವರೆಗೆ ಎಷ್ಟು ಅಂಕ ಎನ್ನುತ್ತೇವೆ, ಆ ನಂತರದ 30 ವರ್ಷ ವೇತನ ಕೇಳುತ್ತೇವೆ. ನಂತರ ಸಂಪಾದನೆ, ಆ ಬಳಿಕ ಬಿಪಿ, ಸಕ್ಕರೆ ಅಂಶ ಕೇಳುತ್ತೇವೆ, ಜೀವನ ಶೈಲಿಯು ಈ ಮಟ್ಟಕ್ಕೆ ತಂದಿಟ್ಟಿದೆ. ತಡವಾಗಿ ಮದುವೆ ಆಗುವುದು ಮತ್ತು ಮಕ್ಕಳಾಗುವುದೂ ಕೂಡ ಕಾಯಿಲೆಗಳಿಗೆ ಕಾರಣವಾಗುತ್ತದೆ. ಅನುವಂಶಿಕಕ್ಕೂ ಜಾತಕ ನೋಡಬೇಕಾದ ಪರಿಸ್ಥಿತಿ ಬಂದಿದೆ. ಕೆಲವು ವಿದೇಶಗಳಲ್ಲಿ ಅದು ನಡೆಯುತ್ತಿದೆ. ಹೃದಯ ಆರೋಗ್ಯವಂತವಾಗಿದೆಯೇ ಎಂದು ತಿಳಿದುಕೊಳ್ಳುವ ಪ್ರಯತ್ನ ನಡೆಯುತ್ತಿದೆ ಎಂದರು.**
> – ಡಾ.ಸಿ.ಎನ್. ಮಂಜುನಾಥ್, ಜಯದೇವ ಹೃದ್ರೋಗ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ

ನಾನಾ ಬೇಡಿಕೆ ಈಡೇರಿಸಲು ಆಗ್ರಹಿಸಿ ಮಾಜಿ ಸೈನಿಕರಿಂದ ಸೆ.12ಕ್ಕೆ ವಿಧಾನಸೌಧ ಚಲೋ

ಸೆ.13ರಂದು ಫ್ರೀಡಂ ಪಾರ್ಕ್‌ನಲ್ಲಿ ಅಹೋರಾತ್ರಿ ಧರಣಿ



ಮೈಸೂರು,ಸೆ.8(ಎಂಟಿವೈ)– ಮಾಜಿ ಸೈನಿಕರಿಗೆ ಮಂಜೂರು ಮಾಡಿರುವ ಭೂಮಿಯ ಹಕ್ಕುಪತ್ರ ನೀಡುವುದು, ಉದ್ಯೋಗದಲ್ಲಿ ಮೀಸಲಾತಿ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಸೆ.12 ಮತ್ತು 13ರಂದು ವಿಧಾನಸೌಧ ಚಲೋ ಹಾಗೂ ಫ್ರೀಡಂ ಪಾರ್ಕ್‌ನಲ್ಲಿ ಅಹೋರಾತ್ರಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ ಎಂದು ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಜಿಲ್ಲಾಧ್ಯಕ್ಷ ಕೆ.ಪಿ.ದಿವಾಕರ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯಾದ್ಯಂತ ನೆಲೆಸಿರುವ ಮಾಜಿ ಸೈನಿಕರ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ, ಮಾಜಿ ಸೈನಿಕರ ಪತ್ನಿಯರ ವೀರನಾರಿಯರ ಸಂಘದ ವತಿಯಿಂದ ವಿಧಾನಸೌಧ ಚಲೋ ಹಾಗೂ ಅಹೋರಾತ್ರಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ. ರಾಜ್ಯ ಸರ್ಕಾರ ಸುಮಾರು 30–40 ವರ್ಷಗಳ ಹಿಂದೆ ಭೂ ಕಾಯ್ದೆ ಅಡಿಯಲ್ಲಿ ಮಾಜಿ ಸೈನಿಕರಿಗೆ ಉಚಿತ ಭೂಮಿ ನೀಡಿದೆ. ಆದರೆ ಇದುವರೆಗೂ ಸಾಗುವಳಿ ಚೀಟಿ ನೀಡಿಲ್ಲ. ಹಲವರಿಗೆ ಇಂದಿಗೂ ಭೂಮಿ ಮಂಜೂರಾತಿ ಮಾಡಿಲ್ಲ. ಸಾಕಷ್ಟು ಪ್ರಮಾಣದ ಸರ್ಕಾರಿ ಜಮೀನು ಇದ್ದರೂ ಜಿಲ್ಲಾಡಳಿತ ಅನ್ಯಾಯ ಮಾಡುತ್ತಿದೆ ಎಂದು ಆರೋಪಿಸಿದರು.

ಮಾಜಿ ಸೈನಿಕರ ಕೋಟಾದಲ್ಲಿ ಶೇ. 20 ರಷ್ಟು ಉದ್ಯೋಗ ನೀಡಬೇಕು. ಸರ್ಕಾರಿ ಹುದ್ದೆಗೆ ಸೇರಿರುವವರ ವೇತನ ಪರಿಷ್ಕರಣೆ ಆಗಬೇಕು. ತಮ್ಮ ಪತ್ನಿ, ಮಕ್ಕಳೊಂದಿಗೆ ಜೀವನ ನಡೆಸಲು ಹೋಂ ಪೋಸ್ಟಿಂಗ್ ಆಗಬೇಕು. ಮಾಜಿ ಸೈನಿಕರ ನಿಗಮ, ಮಂಡಳಿ ರಚನೆ ಆಗಬೇಕು. ಮಾಜಿ ಸೈನಿಕರ ಸಂಘಗಳಿಗೆ ಉಚಿತವಾಗಿ ಸಿಎ ನಿವೇಶನ ಮಂಜೂರು ಮಾಡಬೇಕು. ಎಲ್ಲೆಡೆ ಸೈನಿಕ–ಮಾಜಿ ಸೈನಿಕರಿಗಾಗಿ ಸಮುದಾಯ ಭವನ ನಿರ್ಮಿಸಬೇಕು. ಸೈನಿಕರು ಹುತಾತ್ಮರಾದರೆ ಕುಟುಂಬದ ಸದಸ್ಯರಿಗೆ 1 ಕೋಟಿ ರೂ.ಪರಿಹಾರ ನೀಡಬೇಕು. ಮಾಜಿ ಸೈನಿಕರು ಮರಣ ಹೊಂದಿದರೆ 5 ಲಕ್ಷ ರೂ. ಆರ್ಥಿಕ ನೆರವು ನೀಡುವುದು ಸೇರಿದಂತೆ ಕೆಲವು ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ವಿಧಾನಸೌಧ ಚಲೋ ಹಾಗೂ ಸತ್ಯಾಗ್ರಹ ನಡೆಸಲಾಗುತ್ತಿದೆ. ನಮ್ಮ ಹೋರಾಟಕ್ಕೆ ಸರ್ಕಾರ ಸ್ಪಂದಿಸದಿದ್ದರೆ ಪ್ರಧಾನಿಗಳ ಗಮನ ಸೆಳೆದು ಹೋರಾಟ ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಸೈನಿಕರ ಸಂಘದ ಪದಾಧಿಕಾರಿಗಳಾದ ಹೆಚ್.ಎಸ್. ನಂಜುಂಡಸ್ವಾಮಿ, ಅಣ್ಣೇಗೌಡ, ರಜನಿ ಸುಬ್ಬಯ್ಯ, ನಟರಾಜ್ ಇದ್ದರು.

ಏಷ್ಯಾಕಪ್: ಆಫ್ಘಾನ್ ವಿರುದ್ಧ ಭಾರತಕ್ಕೆ ಗೆಲುವು



ದುಬೈ, ಸೆ.8– ವಿರಾಟ್ ಕೊಹ್ಲಿ ಭರ್ಜರಿ ಶತಕದ ನೆರವಿನಿಂದ ಆಫ್ಘಾನಿಸ್ತಾನ ವಿರುದ್ಧ ಭಾರತ 101 ರನ್‌ಗಳ ಗೆಲುವು ದಾಖಲಿಸಿತು. ಈ ಮೂಲಕ ಗೆಲುವಿನೊಂದಿಗೆ ಏಷ್ಯಾ ಕಪ್ ಟೂರ್ನಿಯಿಂದ ರೋಹಿತ್ ಪಡೆ ಹೊರ ನಡೆಯಿತು.

ಇಲ್ಲಿನ ಅಂತರ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಔಪಚಾರಿಕ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ ನಿಗದಿತ 20 ಓವರ್‌ಗಳಲ್ಲಿ 2 ವಿಕೆಟ್ ಕಳೆದುಕೊಂಡು 212 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ಇನ್ನಿಂಗ್ಸ್ ಆರಂಭಿಸಿದ ನಾಯಕ ಕೆ.ಎಲ್.ರಾಹುಲ್ ಹಾಗೂ ವಿರಾಟ್‌ಕೊಹ್ಲಿ ಮೊದಲ ವಿಕೆಟ್‌ಗೆ 119 ರನ್‌ಗಳ ಭರ್ಜರಿ ಆರಂಭ ನೀಡಿದರು. ಈ ವೇಳೆ 62ರನ್ ಗಳಿಸಿದ ರಾಹುಲ್ ವಿಕೆಟ್ ಒಪ್ಪಿಸಿದರು. ನಂತರ ಬಂದ ಸೂರ್ಯಕುಮಾರ್ ಯಾದವ್ ಕೇವಲ 6 ರನ್ ಗಳಿಸಿ ನಿರಾಶೆ ಮೂಡಿಸಿದರು.

ಮತ್ತೊಂದು ತುದಿಯಲ್ಲಿ ಭರ್ಜರಿ ಬ್ಯಾಟಿಂಗ್ ಮಾಡಿದ ವಿರಾಟ್‌ಕೊಹ್ಲಿ 61 ಎಸೆತಗಳಲ್ಲಿ 12 ಬೌಂಡರಿ ಹಾಗೂ 6 ಭರ್ಜರಿ ಸಿಕ್ಸರ್‌ನೊಂದಿಗೆ ಅಜೇಯ 122 ರನ್ ಗಳಿಸಿ, 3 ವರ್ಷಗಳ ಬಳಿಕ ಅಂತರ ರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಹಾಗೂ ಅಂತರ ರಾಷ್ಟ್ರೀಯ ಟಿ20 ಟೂರ್ನಿಯಲ್ಲಿ ಮೊದಲ ಶತಕ ಬಾರಿಸಿದರು. ಉಳಿದಂತೆ ರಿಷಬ್‌ಪಂತ್ 20 ರನ್ ಗಳಿಸಿದರು. ಆಫ್ಘಾನಿಸ್ತಾನದ ಪರವಾಗಿ ಫರೀದ್ ಅಹ್ಮದ್ ಮಲಿಕ್ 2 ವಿಕೆಟ್ ಪಡೆದರು. 213 ರನ್‌ಗಳ ಬೃಹತ್ ಗುರಿ ಬೆನ್ನತ್ತಿದ್ದ ಆಫ್ಘಾನಿಸ್ತಾನ 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 111ರನ್ ಗಳಿಸಿ ಸೋಲನ್ನೊಪ್ಪಿಕೊಂಡಿತ್ತು. ತಂಡದ ಪರವಾಗಿ ಇಬ್ರಾಹಿಂ ಜದ್ರಾನ್ 64 ರನ್ ಗಳಿಸಿದರು. ಉಳಿದಂತೆ ಆಫ್ಘಾನ್ ಎಲ್ಲಾ ಬ್ಯಾಟ್ಸ್‌ಮನ್‌ಗಳು ರನ್ ಗಳಿಸಲು ಪರದಾಡಿದರು.

ಬೋಗಾದಿ ಗ್ರಾಮದ ಆಶ್ರಯ ಬಡಾವಣೆಯಲ್ಲಿ ನಿವೇಶನಗಳಿಗೆ ಮಾಡಿರುವ

ಅಕ್ರಮ ಖಾತೆ ರದ್ದುಗೊಳಿಸಲು ಆಗ್ರಹಿಸಿ ಗ್ರಾಮಸ್ಥರ ಪ್ರತಿಭಟನೆ

ಬೋಗಾದಿ ಪಟ್ಟಣ ಪಂಚಾಯಿತಿ ಕಾರ್ಯಾಲಯದ ಎದುರು ಧರಣಿ

ಮೈಸೂರು,ಸೆ.8(ಪಿಎಂ)– ತಾಲೂಕಿನ ಬೋಗಾದಿ ಗ್ರಾಮದ ಸರ್ವೆ ನಂ.319ರ ಆಶ್ರಯ ಬಡಾವಣೆಯಲ್ಲಿ ನಕಲಿ ದಾಖಲೆ ಸೃಷ್ಟಿಸಿ 100ಕ್ಕೂ ಹೆಚ್ಚು ನಿವೇಶನಗಳಿಗೆ ಅಕ್ರಮ ಖಾತೆಗಳನ್ನು ಮಾಡಲಾಗಿದೆ ಎಂದು ಆರೋಪಿಸಿ ಹಾಗೂ ಈ ಅಕ್ರಮ ಖಾತೆಗಳನ್ನು ರದ್ದುಪಡಿಸಬೇಕೆಂದು ಒತ್ತಾಯಿಸಿ ಗ್ರಾಮಸ್ಥರು ಗುರುವಾರ ಪ್ರತಿಭಟನೆ ನಡೆಸಿದರು.

ಗ್ರಾಮದಲ್ಲಿರುವ ಬೋಗಾದಿ ಪಟ್ಟಣ ಪಂಚಾಯಿತಿ ಕಾರ್ಯಾಲಯದ ಎದುರು ಜಮಾಯಿಸಿದ ನೂರಾರು ಗ್ರಾಮಸ್ಥರು, ಅಕ್ರಮ ನಿವೇಶನಗಳನ್ನು ರದ್ದುಪಡಿಸುವ ಮೂಲಕ ಅವುಗಳನ್ನು ಗ್ರಾಮದ ಬಡವರಿಗೆ ಹಂಚಿಕೆ ಮಾಡಬೇಕು. ಅಕ್ರಮ ನಡೆಸುವ ಮೂಲಕ ಯೋಜನೆಯ ಮೂಲ ಉದ್ದೇಶವನ್ನೇ ಮಣ್ಣು ಪಾಲು ಮಾಡಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರದ ಆಶ್ರಯ ಯೋಜನೆಯಡಿಯ ಈ ಬಡಾವಣೆಯಲ್ಲಿ ಕಾನೂನುಬದ್ಧವಾಗಿ ಒಟ್ಟು 357 ನಿವೇಶನಗಳನ್ನು 2002ರಲ್ಲಿ ಹಂಚಿಕೆ ಮಾಡಲಾಗಿದೆ. ಅಲ್ಲದೆ, ಈ ಫಲಾನುಭವಿಗಳಿಗೆ ಹಕ್ಕುಪತ್ರಗಳನ್ನು ವಿತರಣೆ ಮಾಡಲಾಗಿದೆ. ನಂತರದಲ್ಲಿ ಕೆಲವು ಅಧಿಕಾರಿಗಳು ಹಾಗೂ ಪಟ್ಟಭದ್ರ ಹಿತಾಸಕ್ತಿಗಳ ಅಕ್ರಮದ ಫಲವಾಗಿ ಇಲ್ಲಿ 100ಕ್ಕೂ ಹೆಚ್ಚು ನಿವೇಶನಗಳಿಗೆ ನಕಲಿ ಹಕ್ಕುಪತ್ರ ಸೃಷ್ಟಿಸಿ ಕಾನೂನುಬಾಹಿರವಾಗಿ ಎ, ಬಿ ಎಂದು ನಮೂದಿಸಲಾಗಿದೆ. ಈ ಪೈಕಿ 50ಕ್ಕೂ ಹೆಚ್ಚು ನಿವೇಶನಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡಲಾಗಿದೆ ಎಂದು ಆರೋಪಿಸಿದರು.

ಇದರಲ್ಲಿ ಅಂದಿನ ಬೋಗಾದಿ ಗ್ರಾಪಂನ ಕೆಲ ಸದಸ್ಯರು ತಮ್ಮ ಅಧಿಕಾರ ದುರ್ಬಳಕೆ ಮಾಡಿಕೊಂಡಿದ್ದಾರೆ. ತಮ್ಮ ರಾಜಕೀಯ ಪ್ರಭಾವ ಬಳಸಿ ಕೆಲ ಅಧಿಕಾರಿಗಳೊಂದಿಗೆ ಶಾಮೀಲಾಗಿ ಅಕ್ರಮವಾಗಿ ಉಳಿಕೆ ನಿವೇಶನಗಳಿಗೆ ನಕಲಿ ದಾಖಲೆಗಳನ್ನು ಸೃಷ್ಟಿ ಮಾಡಿದ್ದಾರೆ. ಆ ಮೂಲಕ ಲಕ್ಷಾಂತರ ರೂ.ಗಳಿಗೆ ನಿವೇಶನಗಳನ್ನು ಮಾರಾಟ ಮಾಡಿದ್ದಾರೆ. ಹಾಗಾಗಿ ಎಲ್ಲಾ ಅಕ್ರಮ ನಿವೇಶನಗಳ ಖಾತೆ ರದ್ದು ಮಾಡಬೇಕು ಎಂದು ಆಗ್ರಹಿಸಿದರು.

ಇದೀಗ ಈ ಅಕ್ರಮ ನಿವೇಶನಗಳಲ್ಲಿ ಕಟ್ಟಡ ನಿರ್ಮಿಸಲಾಗುತ್ತಿದ್ದು, ಕೂಡಲೇ ಈ ನಿರ್ಮಾಣ ಕಾಮಗಾರಿಗಳನ್ನು ಸ್ಥಗಿತಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು. ಈ ಸಂಬಂಧ ಶೀಘ್ರವೇ ನೋಟಿಸ್ ನೀಡಬೇಕು. ಆದಾಗ್ಯೂ ಅಕ್ರಮ ಕಾಮಗಾರಿ ಮುಂದುವರೆಸಿದರೆ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಈ ಅಕ್ರಮವನ್ನು ಸರ್ಕಾರದ ಗಮನಕ್ಕೆ ತಂದು ನಿಜವಾದ ಅರ್ಹರಿಗೆ ನ್ಯಾಯ ದೊರಕಿಸಿಕೊಡಬೇಕು ಎಂದು ಒತ್ತಾಯಿಸಿದರು.

ಇದೇ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಮಾಜಿ ಅಧ್ಯಕ್ಷ ಅರುಣ್‌ಕುಮಾರ್‌ಗೌಡ, ಸರ್ಕಾರ ಅಂದು ಬಡವರಿಗೆ ನಿವೇಶನ ಕಲ್ಪಿಸಲು ಬೋಗಾದಿ ಗ್ರಾಮದ ಸರ್ವೆ ನಂ.319ರಲ್ಲಿ ಆಶ್ರಯ ಯೋಜನೆಯಡಿ ಭೂಮಿ ಮೀಸಲಿಟ್ಟಿತ್ತು. ಅದರ ಪ್ರಕಾರ 357 ನಿವೇಶನಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಿತ್ತು. ತದನಂತರದಲ್ಲಿ ಕೆಲವು ಅಧಿಕಾರಿಗಳು ನಕಲಿ ದಾಖಲೆ ಸೃಷ್ಟಿಸಿ, ಖಾತೆ ಮಾಡಿಸಿ, ಮಾರಾಟ ಮಾಡುವ ಮೂಲಕ ಸರ್ಕಾರದ ಬೊಕ್ಕಸಕ್ಕೆ ಭಾರೀ ನಷ್ಟ ಉಂಟು ಮಾಡಿದ್ದಾರೆ ಎಂದು ದೂರಿದರು.

ಬಳಿಕ ಸ್ಥಳಕ್ಕೆ ಆಗಮಿಸಿದ ಬೋಗಾದಿ ಪಪಂ ಮುಖ್ಯಾಧಿಕಾರಿ ಶ್ಯಾಮ್‌ಸುಂದರ್ ಅವರಿಗೆ ಮನವಿ ಸಲ್ಲಿಸಿ, ಶೀಘ್ರ ಕ್ರಮ ವಹಿಸುವಂತೆ ಒತ್ತಾಯಿಸಲಾಯಿತು. ಮನವಿ ಸ್ವೀಕರಿಸಿದ ಶ್ಯಾಮ್‌ಸುಂದರ್ ಮನವಿ ಪರಿಶೀಲಿಸಿ ಮೇಲಾಧಿಕಾರಿಗಳಿಗೆ ಕಳುಹಿಸಲಾಗುವುದು. ಕಾನೂನಿನಂತೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ ನಂತರ ಪ್ರತಿಭಟನೆ ಅಂತ್ಯಗೊಂಡಿತು.

ಗ್ರಾಪಂ ಮಾಜಿ ಸದಸ್ಯರಾದ ಹಾಲಿನ ಪುಟ್ಟೇಗೌಡ, ಎಂ.ಪುಟ್ಟೇಗೌಡ, ಗ್ರಾಮದ ಮುಖಂಡರಾದ ಕೆಂಪೇಗೌಡ, ರವಿಸಿಗಳ್ಳಿ, ರವಿಚಂದ್ರ ನಾಗರಾಜು, ನಾಗಣ್ಣ ರವಿಕುಮಾರ್, ರವಿಚಂದ್ರು, ರಘು, ತ್ಯಾಗರಾಜು, ರಾಘವೇಂದ್ರ ಸೇರಿದಂತೆ ಗ್ರಾಮಸ್ಥರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



> **ಅಕ್ರಮ ನಿವೇಶನಗಳ ಖಾತೆ ರದ್ದುಪಡಿಸಿ**
> **ಅಕ್ರಮ ನಿವೇಶನಗಳ ಖಾತೆ ರದ್ದುಪಡಿಸಿ ಅವುಗಳನ್ನು ವಶಕ್ಕೆ ಪಡೆಯಬೇಕು. ಆ ಮೂಲಕ ನಿಜವಾದ ನಿರಾಶ್ರಿತರಿಗೆ ನಿವೇಶನಗಳನ್ನು ಹಂಚಿಕೆ ಮಾಡಬೇಕು. ಈ ಒತ್ತಾಯದೊಂದಿಗೆ ಗ್ರಾಮಸ್ಥರು ಪಕ್ಷಾತೀತವಾಗಿ ಇಂದು ಹೋರಾಟ ಮಾಡುತ್ತಿದ್ದೇವೆ. ಗ್ರಾಮದ ನಿಜವಾದ ಬಡವರಿಗೆ ನಿವೇಶನ ಕಲ್ಪಿಸಿಕೊಡಬೇಕು.**
> -ಅರುಣ್‌ಕುಮಾರ್‌ಗೌಡ

ಮೈಸೂರು ಮಿತ್ರ



ರಾಮ್‌ಸನ್ಸ್ ಕಲಾ ಪ್ರತಿಷ್ಠಾನದ

'ದಸರಾ ಬೊಂಬೆ ಪ್ರದರ್ಶನ'ಕ್ಕೆ ಆನೇಗುಂದಿ ಸಂಸ್ಥಾನದ

ರಾಜವಂಶಸ್ಥ ಕೃಷ್ಣದೇವರಾಯರಿಂದ ಚಾಲನೆ






ಮೈಸೂರಿನ ನಜರ್‌ಬಾದ್‌ನಲ್ಲಿರುವ ರಾಮ್‌ಸನ್ಸ್ ಬೊಂಬೆ ಮನೆಯಲ್ಲಿ ಹದಿನೆಂಟನೇ ವರ್ಷ ಆಯೋಜಿಸಿರುವ 'ದಸರಾ ಬೊಂಬೆ ಪ್ರದರ್ಶನ'ವನ್ನು ಆನೇಗುಂದಿ ಸಂಸ್ಥಾನದ ರಾಜವಂಶಸ್ಥರಾದ ಕೃಷ್ಣದೇವರಾಯ ಉದ್ಘಾಟಿಸಿದರು. ಲೇಖಕಿ ಕಾವೇರಿ ಪೊನ್ನಪ್ಪ, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ, ರಾಮ್‌ಸನ್ಸ್ ಕಲಾ ಪ್ರತಿಷ್ಠಾನದ ಕಾರ್ಯದರ್ಶಿ ಆರ್.ಜಿ.ಸಿಂಗ್ ಮತ್ತಿತರರಿದ್ದರು.

ಮೈಸೂರು, ಸೆ.8(ಎಂಕೆ)– ಬೊಂಬೆಗಳ ಲೋಕದಲ್ಲಿ ಪ್ರಸ್ತುತಪಡಿಸಿದ ರಾಮಾಯಣ ಮಹಾಕಾವ್ಯ, ಮೈಸೂರು ದಸರಾ ಪರಂಪರೆಯ ಜೊತೆಗೆ ಐಷಾರಾಮಿ ಕಾರುಗಳ ಓಡಾಟ ನೋಡುಗರನ್ನು ಸೂಜಿಗಲ್ಲಿನಂತೆ ಸೆಳೆಯಿತು...!

ಮೈಸೂರಿನ ನಜರ್‌ಬಾದ್‌ನಲ್ಲಿರುವ ರಾಮ್‌ಸನ್ಸ್ ಕಲಾ ಪ್ರತಿಷ್ಠಾನ ಹದಿನೆಂಟನೇ ವರ್ಷ ಆಯೋಜಿಸಿರುವ 'ದಸರಾ ಬೊಂಬೆ ಪ್ರದರ್ಶನ'ದಲ್ಲಿ ರಾಮಾಯಣ ಕಾವ್ಯದ ಪ್ರಮುಖ ಸನ್ನಿವೇಶಗಳು, ಮೈಸೂರು ಸಂಸ್ಥಾನ ಆಚರಿಸುತ್ತಾ ಬಂದಿರುವ ವಿಶ್ವ ವಿಖ್ಯಾತ ದಸರಾ, ಚಾಮುಂಡಿ ತಾಯಿಯ ಉತ್ಸವ ಮೂರ್ತಿ, ಕೇರಳದ ಚಂಡೆ ಮೇಳ, ಯೋಗ ನಿರತ ವಿನಾಯಕನ ಮೂರ್ತಿಗಳು, ಚನ್ನಪಟ್ಟಣದ ಮುದ್ದು ಆನೆಯ ಬೊಂಬೆಗಳು ಸೇರಿದಂತೆ ಸಾವಿರಾರು ಬಣ್ಣ ಬಣ್ಣ, ಬಹು ವರ್ಣರಂಜಿತ ಬೊಂಬೆಗಳು ಒಂದೊಂದು ವೈಶಿಷ್ಟ್ಯದ ಕಥೆ ಹೇಳುತ್ತಿವೆ. ನಾಟ್ಯ ಮಯೂರಿ, ವಾದಿರಾಜ ತೀರ್ಥರು, ಗುರು ರಾಯರ ಜೀವನ ಗಾಥೆ, ಸಾಯಿಬಾಬಾ ಅವರ ಜೀವನ ಗಾಥೆಯ ಜೊತೆಗೆ ಮೊದಲ ಬಾರಿಯ ಆಕರ್ಷಣೆಯಾಗಿರುವ ಐಷಾರಾಮಿ ಕಾರುಗಳ ಮಾದರಿಯ ಪುಟಾಣಿ ಬೊಂಬೆ ಕಾರುಗಳು ನಯನ ಮನೋಹರವಾಗಿ ಕಾಣುತ್ತಿವೆ.

ಚಾಲನೆ: ನಾಡಹಬ್ಬ ಮೈಸೂರು ದಸರಾ ಉದ್ಘಾಟನೆಗೆ 18 ದಿನಗಳು ಬಾಕಿ ಇರುವಂತೆ ಬೊಂಬೆ ಪ್ರಿಯರನ್ನು ಆಕರ್ಷಿಸುವ 'ದಸರೆಯ ಬೊಂಬೆ ಪ್ರದರ್ಶನಕ್ಕೆ' ಗುರುವಾರ ಆನೇಗುಂದಿ ಸಂಸ್ಥಾನದ ರಾಜವಂಶಸ್ಥರಾದ ಕೃಷ್ಣದೇವರಾಯ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಬೊಂಬೆ ಮನೆಯಲ್ಲಿರುವ ಹಳೇ ಬೊಂಬೆಗಳನ್ನು ನೋಡಿ ತುಂಬಾ ಸಂತೋಷವಾಗಿದೆ. ನಮ್ಮ ಪೂರ್ವಿಕರು ತಯಾರಿಸುತ್ತಿದ್ದಂತೆ ಬೊಂಬೆಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ನಾವು ನಮ್ಮ ಸಂಸ್ಕೃತಿ, ಧರ್ಮವನ್ನು



ಕಾಪಾಡಬೇಕಿದೆ. ನಾವುಗಳು ನಮ್ಮ ಪೂರ್ವಿಕರ ದಾರಿಯಲ್ಲಿ ಸಾಗುವುದು ಅಗತ್ಯವಾಗಿದೆ. ಯುವಕರು ವಿದೇಶಿ ಸಂಸ್ಕೃತಿಗೆ ಮಾರು ಹೋಗದೆ ಸ್ವದೇಶಿಗರಾಗಿ ಬದುಕಬೇಕು ಎಂದು ಕಿವಿಮಾತು ಹೇಳಿದರು.

ಮೈಸೂರು ದಸರಾ ಸಂದರ್ಭದಲ್ಲಿ ಮೊದಲು ಪ್ರತಿಯೊಂದು ಮನೆಯಲ್ಲೂ ಬೊಂಬೆಗಳನ್ನಿಟ್ಟು ಅಲಂಕಾರ ಮಾಡಲಾಗುತ್ತಿತ್ತು. ಈಗ ಬದಲಾವಣೆ ಹೆಸರಿನಲ್ಲಿ ಎಲ್ಲಾ ಆಚರಣೆಗಳು ಕಣ್ಮರೆಯಾಗುತ್ತಿವೆ. ಆದ್ದರಿಂದ ಯುವ ಸಮೂಹ ಮತ್ತೆ ಹಳೇ ಸಾಂಸ್ಕೃತಿಕ ವೈಭವದ ಕಡೆಗೆ ಸಾಗಬೇಕು. ಇದರಿಂದ ನಮಗೂ, ನಮ್ಮ ಮುಂದಿನ ಪೀಳಿಗೆಗೂ ಒಳ್ಳೆಯದು ಎಂದರು.

ಬೊಂಬೆಗಳ ಲೋಕ: ದಸರಾ ಬೊಂಬೆ ಪ್ರದರ್ಶನದಲ್ಲಿನ ವಿಶೇಷ ಅಂಕಣವನ್ನು ಉದ್ಘಾಟಿಸಿದ ಲೇಖಕಿ ಕಾವೇರಿ ಪೊನ್ನಪ್ಪ ಮಾತನಾಡಿ, ಅದ್ಭುತ ಬೊಂಬೆಗಳ ಪ್ರದರ್ಶನ ಇದಾಗಿದ್ದು, ಬೊಂಬೆಗಳ ಲೋಕಕ್ಕೆ ಪ್ರತಿಯೊಬ್ಬರು ಭೇಟಿ ನೀಡಿ ವೀಕ್ಷಣೆ ಮಾಡಬೇಕು. ದೇಶದಲ್ಲಿ ಕಲೆ–ವಾಸ್ತುಶಿಲ್ಪಕ್ಕೆ ನೀಡುವ ಪ್ರೋತ್ಸಾಹ ಕಡಿಮೆಯಾಗುತ್ತಿದೆ. ಆದರೆ ಮೈಸೂರಿನಲ್ಲಿ ಮೊದಲಿನಿಂದಲೂ ಕಾಪಾಡಿಕೊಂಡು ಬರಲಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬಳಿಕ ಬೊಂಬೆ ಮನೆಯಲ್ಲಿನ ದಸರಾ ಬೊಂಬೆ ಪ್ರದರ್ಶನ ಉದ್ಘಾಟಿಸಿದ ಗಣ್ಯರ ಮೇಲೆ ಬೊಂಬೆಗಳಿಂದಲೇ ಹೂ ಮಳೆ ಸುರಿಸಲಾಯಿತು. ಅಲ್ಲದೆ ವಿಶೇಷ ಬೊಂಬೆಗಳನ್ನು ನೀಡಿ ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ವೇಳೆ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ, ರಾಮ್‌ಸನ್ಸ್ ಕಲಾ ಪ್ರತಿಷ್ಠಾನದ ಕಾರ್ಯದರ್ಶಿ ಆರ್.ಜಿ.ಸಿಂಗ್, ರಘು ಧಮೇಂದ್ರ, ಹರಿಣಿತ ಸಿಂಗ್ ಮತ್ತಿತರರು ಉಪಸ್ಥಿತರಿದ್ದರು.

ಸೆ.26ರಿಂದ ಯೋಗ ದಸರಾ ಕಾರ್ಯಕ್ರಮಗಳು



ಮೈಸೂರು, ಸೆ.8– ಮೈಸೂರು ದಸರಾ ಮಹೋತ್ಸವ–2022 ಹಾಗೂ ಯೋಗಾದಸರಾ ಸಮಿತಿ–2022ರ ವತಿಯಿಂದ ಸೆಪ್ಟೆಂಬರ್ 26 ರಿಂದ ಅಕ್ಟೋಬರ್ 3 ರವರೆಗೆ ಯೋಗ ದಸರಾ 2022ರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಸೆಪ್ಟೆಂಬರ್ 26 ರಂದು ಸಂಜೆ 5 ಗಂಟೆಯಿಂದ 8 ಗಂಟೆಯವರೆಗೆ ಜಿಲ್ಲಾಧಿಕಾರಿಗಳ ಕಚೇರಿಯ ಬಳಿ ಇರುವ ಮಹಾರಾಜ ಓವಲ್ ಮೈದಾನದಲ್ಲಿ ಯೋಗ ದಸರಾ ಉದ್ಘಾಟನೆ ಹಾಗೂ ಯೋಗ ನೃತ್ಯ ರೂಪಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸೆಪ್ಟೆಂಬರ್ 27 ರಂದು ಬೆಳಗ್ಗೆ 8ರಿಂದ ಬೆಳಗ್ಗೆ 9 ಗಂಟೆಯವರೆಗೆ ಜನಪ್ರತಿನಿಧಿಗಳಿಗೆ, ಮಾಧ್ಯಮ ಮತ್ತು ಪತ್ರಿಕಾ ಪ್ರತಿನಿಧಿಗಳಿಗೆ ಸರಸ್ವತಿಪುರಂ ಬಳಿ ಇರುವ ಜವರೇಗೌಡ ಪಾರ್ಕ್‌ನಲ್ಲಿ ಯೋಗವಾಹಿನಿ ಕಾರ್ಯಕ್ರಮದ ಮೂಲಕ ಯೋಗಾಭ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಸೆಪ್ಟೆಂಬರ್ 28 ರಂದು ಬೆಳಗ್ಗೆ 6 ರಿಂದ 8 ಗಂಟೆವರೆಗೆ ಅರಮನೆ ಆವರಣದಲ್ಲಿ ಯೋಗ ಸಂಭ್ರಮ ಕಾರ್ಯಕ್ರಮದಲ್ಲಿ ಸಾಮೂಹಿಕ ಯೋಗಭ್ಯಾಸ ಮತ್ತು ಅಮೃತ ಮಹೋತ್ಸವ ಪ್ರಯುಕ್ತ 75 ಯೋಗಾಸನಗಳ ಪ್ರದರ್ಶನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಸೆಪ್ಟೆಂಬರ್ 29 ಗುರುವಾರ ಬೆಳಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆವರೆಗೆ ಮೈಸೂರು ದಸರಾ ಮತ್ತು ಪ್ರದರ್ಶನ ಪ್ರಾಧಿಕಾರದ ಪಿ.ಕಾಳಿಂಗರಾವ್ ಸಭಾಂಗಣದಲ್ಲಿ ರಾಜ್ಯಮಟ್ಟದ ದಸರಾ ಯೋಗಾಸನ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿದೆ.

ಸೆಪ್ಟೆಂಬರ್ 30 ಶುಕ್ರವಾರ ಬೆಳಗ್ಗೆ 6 ಗಂಟೆಯಿಂದ 9 ಗಂಟೆವರೆಗೆ ಅರಮನೆ ಆವರಣದಲ್ಲಿ ಯೋಗಾಸರಪಳಿ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಮತ್ತು ಯೋಗಾಸಕ್ತರು ಪಾಲ್ಗೊಳ್ಳುವರು. ಅಕ್ಟೋಬರ್ 1 ಶನಿವಾರ ಬೆಳಗ್ಗೆ 6 ರಿಂದ ಬೆಳಗ್ಗೆ 8ರವರೆಗೆ ನಂಜನಗೂಡಿನ ನಂಜುಂಡೇಶ್ವರ ದೇವಸ್ಥಾನ ಆವರಣದಲ್ಲಿ ಗ್ರಾಮೀಣ ಯೋಗ ಸಾಮೂಹಿಕ ಯೋಗಾಭ್ಯಾಸ ಮತ್ತು ಸೂರ್ಯ ನಮಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಅಕ್ಟೋಬರ್ 3 ಸೋಮವಾರ ಬೆಳಗ್ಗೆ 6 ಗಂಟೆಯಿಂದ 8 ಗಂಟೆವರೆಗೆ ಚಾಮುಂಡಿಬೆಟ್ಟದ ತಪ್ಪಲು ಮತ್ತು ದೇವಸ್ಥಾನದ ಆವರಣದಲ್ಲಿ ಯೋಗ ಚಾರಣ ಮತ್ತು ದುರ್ಗಾ ನಮಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಮೈಸೂರು ದಸರಾ ಮಹೋತ್ಸವ ಯೋಗ ದಸರಾ ಉಪ ಸಮಿತಿಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದಿನಿಂದ ಮೇಯರ್ ಶಿವಕುಮಾರ್ ಕುದುರೆ ಸವಾರಿ ತಾಲೀಮು

ಮೈಸೂರು, ಸೆ.8(ಆರ್‌ಕೆ)–ನಾಳೆ(ಸೆ.9)ಯಿಂದ ನೂತನ ಮೇಯರ್ ಶಿವಕುಮಾರ್ ಅವರಿಗೆ ಮೈಸೂರಿನ ಲಲಿತ ಮಹಲ್ ರಸ್ತೆಯಲ್ಲಿರುವ ಅಶ್ವಾರೋಹಿ ದಳದ ಆವರಣದಲ್ಲಿ ಕುದುರೆ ಸವಾರಿ ತಾಲೀಮು ಆರಂಭವಾಗಲಿದೆ.

ದಸರಾ ಮಹೋತ್ಸವದ ವಿಜಯದಶಮಿ ಮೆರವಣಿಗೆಯಲ್ಲಿ ಕುದುರೆ ಸವಾರಿ ಮಾಡಲಿರುವ ಮೇಯರ್‌ಗೆ ತರಬೇತಿ ನೀಡಲು ಮೌಂಟೆಡ್ ಕಂಪನಿ ಪೊಲೀಸರು ಸಿದ್ಧತೆ ಮಾಡಿಕೊಂಡಿದ್ದು, ಶುಕ್ರವಾರ ಬೆಳಗ್ಗೆ ಶಿವಕುಮಾರ್ ತಾಲೀಮು ಆರಂಭಿಸುವರು. ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿರುವ ಅವರು, ನಾಡಹಬ್ಬ ದಸರಾ ಮಹೋತ್ಸವದಲ್ಲಿ ಅಧಿದೇವತೆ ಶ್ರೀ ಚಾಮುಂಡೇಶ್ವರಿಗೆ



ಪುಷ್ಪಾರ್ಚನೆ ಮಾಡುವ ಅವಕಾಶ ದೇಶದ ಯಾವುದೇ ಪಾಲಿಕೆಯಲ್ಲಿ ಸಿಗುವುದಿಲ್ಲ. ಅದು ನನಗೆ ಸಿಕ್ಕಿರುವುದು ನನ್ನ ಸೌಭಾಗ್ಯ ಎಂದರು. ಜಂಬೂ ಸವಾರಿ ಮೆರವಣಿಗೆಯಲ್ಲಿ ಕುದುರೆ ಮೇಲೆ ಕುಳಿತು ಸಾಗುವ ಅವಕಾಶ ಮೇಯರ್‌ಗೆ ಇರುವುದರಿಂದ ತರಬೇತಿ ಪಡೆಯಬೇಕೆಂದು ಮೌಂಟೆಡ್ ಪೊಲೀಸರು ತಿಳಿಸಿದ್ದಾರೆ. ನಾಳೆಯಿಂದ ತಾಲೀಮಿನಲ್ಲಿ ಪಾಲ್ಗೊಳ್ಳುತ್ತೇನೆ ಎಂದು ಶಿವಕುಮಾರ್ ತಿಳಿಸಿದರು.

ದಸರಾ ಗಜಪಡೆ ಮಾವುತರು, ಕಾವಾಡಿಗಳ ಮಕ್ಕಳಿಗೆ ನೆರವಾಗಲು 'ಮೈಸೂರು ಸಂತೆ'

ಇಲ್ಲಿ ಬಂದ ಆದಾಯದ ಒಂದು ಭಾಗ ಈ ಮಕ್ಕಳ ಶೈಕ್ಷಣಿಕ ಸಾಮಗ್ರಿಗೆ ಬಳಕೆ



ಮೈಸೂರು,ಸೆ.8(ಎಂಟಿವೈ)– ದಸರಾ ಗಜಪಡೆಯೊಂದಿಗೆ ಬಂದಿರುವ ಮಾವುತ, ಕಾವಾಡಿಗಳ ಮಕ್ಕಳ ಶಿಕ್ಷಣಕ್ಕೆ ನೆರವಾಗುವ ನಿಟ್ಟಿನಲ್ಲಿ ಆರ್ಥಿಕ ಸಂಪನ್ಮೂಲ ಕ್ರೂಢೀಕರಿಸಲು ಮಹಾರಾಜ ಕಾಲೇಜು ಮೈದಾನದಲ್ಲಿ ಸೆ.10 ಮತ್ತು 11ರಂದು 'ಮೈಸೂರು ಸಂತೆ' ಹೆಸರಲ್ಲಿ ಮಾರಾಟ ಮೇಳ ಆಯೋಜಿಸಲಾಗಿದೆ ಎಂದು ಮೈಸೂರು ಸಂತೆ ತಂಡದ ಭರತ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಮಾರಾಟ ಮೇಳದಲ್ಲಿ 70 ಮಳಿಗೆಗಳನ್ನು ತೆರೆಯಲಾಗುತ್ತಿದ್ದು, ಬಟ್ಟೆ, ಪಾದರಕ್ಷೆ, ಆಭರಣ, ಕಲಾಕೃತಿ, ಕರಕುಶಲ ವಸ್ತುಗಳು, ಕೈಮಗ್ಗ, ಪೀಠೋಪಕರಣ, ವಿಂಟೇಜ್ ಗೃಹೋಪಯೋಗಿ ವಸ್ತುಗಳು, ಉದ್ಯಾನ ಸಾಮಗ್ರಿ, ಆಟಿಕೆಗಳು ಸೇರಿದಂತೆ ಇನ್ನಿತರ ವಸ್ತುಗಳು ದೊರೆಯಲಿವೆ. ಇದಕ್ಕೆ 50 ರೂ. ಪ್ರವೇಶ ದರ ನಿಗದಿ ಮಾಡಿದ್ದು, ಸಂಗ್ರಹವಾದ ಮೊತ್ತದಲ್ಲಿ ಒಂದು ಭಾಗವನ್ನು ಮಾವುತರು, ಕಾವಾಡಿಗಳ ಮಕ್ಕಳಿಗೆ ಪಠ್ಯ ಸಾಮಗ್ರಿ ಹಾಗೂ ಅಗತ್ಯ ವಸ್ತುಗಳ ಕೊಡುಗೆ ನೀಡಲು ಬಳಸಲಾಗುತ್ತದೆ ಎಂದರು. ಸುದ್ದಿಗೋಷ್ಠಿಯಲ್ಲಿ ಮೈಸೂರು ಸಂತೆ ತಂಡದ ಸ್ನೇಹಲ್, ಸ್ಮಿತಾಬಾಲು, ನಿಖಿಲೇಶ್, ಗಮ್ಯ, ಕಾರ್ತಿಕ್ ಇದ್ದರು.

ಫಲಪುಷ್ಪ ಪ್ರದರ್ಶನ ಪ್ರವೇಶ ಶುಲ್ಕ ಬಹಿರಂಗ ಹರಾಜು



ಮೈಸೂರು, ಸೆ.8– ತೋಟಗಾರಿಕೆ ಇಲಾಖೆ, ಜಿಲ್ಲಾ ತೋಟಗಾರಿಕೆ ಸಂಘ(ರಿ) ಹಾಗೂ ಕರ್ಜನ್ ಪಾರ್ಕ್ ಸಂಯುಕ್ತಾಶ್ರಯದಲ್ಲಿ 2022–23ನೇ ಸಾಲಿನ ದಸರಾ ಫಲಪುಷ್ಪ ಪ್ರದರ್ಶನ ಪ್ರವೇಶ ಶುಲ್ಕಕ್ಕೆ ಸಂಬಂಧಿಸಿದಂತೆ ಅಲ್ಪಾವಧಿ ಮರು ಟೆಂಡರ್ ಯಾ ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಸಂಸ್ಥೆಯವರು ಸೆಪ್ಟೆಂಬರ್ 14ರಂದು ಸಂಜೆ 5 ಗಂಟೆಯೊಳಗಾಗಿ ತೋಟಗಾರಿಕೆ ಇಲಾಖೆಗೆ ಅರ್ಜಿ ಸಲ್ಲಿಸಲು ಕೋರಲಾಗಿದೆ. ನಿಗದಿತ ಅವಧಿ ಮೀರಿ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಮತ್ತು ಅಲ್ಪಾವಧಿ ಮರು ಟೆಂಡರ್ ಯಾ ಬಹಿರಂಗ ಹರಾಜು 2022ರ ಸೆಪ್ಟೆಂಬರ್ 15 ರಂದು 11 ಗಂಟೆಗೆ ಜಿಲ್ಲಾ ತೋಟಗಾರಿಕೆ ಸಂಘದ ಕಚೇರಿಯಲ್ಲಿ ನಡೆಯುತ್ತದೆ.

ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 7090665086 ಸಂಪರ್ಕಿಸಬಹುದು.

ದಸರಾದಲ್ಲಿ ಪುಸ್ತಕಗಳಿಗೆ ಮನ್ನಣೆ ಇಲ್ಲ!

ಮೈಸೂರು, ಸೆ.8(ಎಂಕೆ)– ವಿಜೃಂಭಣೆಯ ದಸರಾ ಆಚರಣೆಗೆ ಸಿದ್ದಗೊಳ್ಳುತ್ತಿರುವ ಮೈಸೂರಿನಲ್ಲಿ ಪುಸ್ತಕ ಪ್ರೇಮಿಗಳಿಗೆ ಭಾರೀ ನಿರಾಸೆ ಉಂಟಾಗಿದೆ....!



ಹೌದು! ನಗರದ ಕಾಡಾ ಕಚೇರಿ ಆವರಣದಲ್ಲಿ ಪ್ರತಿವರ್ಷ ಓದುಗರನ್ನು ಕೈಬೀಸಿ ಕರೆಯುತ್ತಿದ್ದ ಪುಸ್ತಗಳ ಮಳಿಗೆಗಳು ಈ ವರ್ಷ ಇಲ್ಲದಂತಾಗಿವೆ. ರಾಜ್ಯದ ನಾನಾ ಕಡೆಗಳಿಂದ ಆಗಮಿಸುತ್ತಿದ್ದ ಪ್ರಕಾಶಕರಿಗೂ ನಿರಾಸೆ ಉಂಟಾಗುತ್ತಿದ್ದು, ದಸರಾ ಸಂಭ್ರಮ ಸನ್ನಿವೇಶದಲ್ಲಿ ಪುಸ್ತಗಳಿಗೆ ಮನ್ನಣೆ ಇಲ್ಲದಂತಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶನದ ಮೇರೆಗೆ ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ಆಯೋಜನೆಯಾಗುತ್ತಿದ್ದ ದಸರಾ ಪುಸ್ತಕ ಮೇಳ ಅನುದಾನವಿಲ್ಲದೆ ಈ ವರ್ಷ ನಡೆಯುವುದು ಬಹುತೇಕ ಅನುಮಾನವಾಗಿದೆ. ಸುಮಾರು 15 ಲಕ್ಷ ರೂ., ವೆಚ್ಚದಲ್ಲಿ ನಿರ್ಮಾಣವಾಗುತ್ತಿದ್ದ ಬೃಹತ್ ಮಳಿಗೆಯನ್ನು ನೋಡುವ, ಇಷ್ಟದ ಪುಸ್ತಕಗಳನ್ನು ಕೊಂಡುಕೊಳ್ಳುವ ಸದವಕಾಶ ಇಲ್ಲದಂತಾಗಿದೆ.

ಇನ್ನೂ ಅನುದಾನ ನೀಡಿಲ್ಲ: ನಾಡಹಬ್ಬ ದಸರಾ ಆಚರಣೆ ವೇಳೆ ಪ್ರತೀ ವರ್ಷ ಇರುತ್ತಿದ್ದ ಪುಸ್ತಕ ಮೇಳ ಈ ವರ್ಷ ಇರುವುದಿಲ್ಲ. ಏಕೆಂದರೆ ಇಲ್ಲಿಯವರೆಗೂ ಪುಸ್ತಕ ಮೇಳ ಸ್ಥಾಪನೆಗೆ ಯಾವುದೇ ಅನುದಾನ ಬಂದಿಲ್ಲ. ಆದ್ದರಿಂದ ಈ ವರ್ಷ ಪುಸ್ತಕ ಮೇಳ ಆಯೋಜನೆ ಬಹುತೇಕ ಅನುಮಾನವಾಗಿದೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧಿಕಾರಿಯೊಬ್ಬರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

40–50 ಸ್ಟಾಲ್: ಪುಸ್ತಕ ಮೇಳದಲ್ಲಿ ಸುಮಾರು 40–50 ಬುಕ್ಸ್ ಸ್ಟಾಲ್‌ಗಳನ್ನು ಹಾಕಲಾಗುತ್ತಿತ್ತು. ಅಲ್ಲದೆ ಸುಪ್ರಸಿದ್ಧ ಲೇಖಕರು, ಸಾಹಿತಿಗಳ ಕೃತಿ, ಕಾದಂಬರಿಗಳನ್ನು ಮಾರಾಟ ಮಾಡಲಾಗುತ್ತಿತ್ತು 9 ದಿನ ನಡೆಯುತ್ತಿದ್ದ ಪುಸ್ತಕ ಮೇಳದಲ್ಲಿ ಸುಮಾರು 20–25 ಲಕ್ಷಕ್ಕೂ ಹೆಚ್ಚು ಮೌಲ್ಯದ ಪುಸ್ತಕಗಳು ಮಾರಾಟವಾಗುತ್ತಿದ್ದವು. ಆದರೆ ಪ್ರಸಕ್ತ ದಸರಾ ಮಹೋತ್ಸವದಲ್ಲಿ ಪುಸ್ತಕ ಮೇಳಕ್ಕೆ ಅವಕಾಶ ನೀಡಲು ಹಿಂದೇಟು ಹಾಕುತ್ತಿರುವುದಕ್ಕೆ ಹಲವಾರು ಓದುಗರು ಬೇಸರ ವ್ಯಕ್ತಪಡಿಸಿದ್ದಾರೆ.

ಮೈಸೂರು ಮಿತ್ರ ಶುಕ್ರವಾರ 9 ಸೆಪ್ಟೆಂಬರ್ 2022

ಸುಂಕದಹಳ್ಳಿ ಕೆರೆಯಲ್ಲಿ ಮೊಸಳೆಗಳ ಹಾವಳಿ


ಫೈಲ್ ಚಿತ್ರ

ಕೃಷಿ ಚಟುವಟಿಕೆಯಲ್ಲಿ ತೊಡಗಲು ರೈತರ ಆತಂಕ

ಬೈಲಕುಪ್ಪೆ, ಸೆ.8– ಪಿರಿಯಾಪಟ್ಟಣ ತಾಲೂಕಿನ ಆವರ್ತಿ ಗ್ರಾಪಂ ವ್ಯಾಪ್ತಿಯ ಸುಂಕದಳ್ಳಿಯ ಪಿಕಪ್ ಕೆರೆಯಲ್ಲಿ ಮೊಸಳೆಗಳ ಹಾವಳಿ ಹೆಚ್ಚಾಗಿದ್ದು, ಕೆರೆ ಅಕ್ಕಪಕ್ಕದ ಕೃಷಿಕರು ಆತಂಕದ ನಡುವೆ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳ ಬೇಕಾದ ಸ್ಥಿತಿ ನಿರ್ಮಾಣವಾಗಿದೆ.

ಕೆರೆ ಸಮೀಪದ ಕಾವೇರಿ ನದಿಯಲ್ಲಿ ನೀರಿನ ಹರಿವು ಹೆಚ್ಚಾದ ಸಂದರ್ಭ ಬೃಹತ್ ಮೊಸಳೆಗಳು ನದಿಯಿಂದ ಬಂದು ಕೆರೆ ಸೇರಿಕೊಂಡಿದೆ. ಆಗಾಗ ಕೆರೆದಂಡೆ, ಕಾಲುದಾರಿಯಲ್ಲಿ ಅಡ್ಡಾಡುವ ಮೊಸಳೆ ಕಂಡು ಜನರು ಭಯಭೀತರಾಗಿದ್ದಾರೆ.

ಕೆರೆ ಸುತ್ತಲೂ ಕೃಷಿ ಜಮೀನಿನಲ್ಲಿ ಕೆಲಸ ಮಾಡುವ ರೈತ ಮಹಿಳೆಯರು ಕೂಡ ಮೊಸಳೆ ಬಗ್ಗೆ ಭಯ ವ್ಯಕ್ತಪಡಿಸಿದ್ದಾರೆ. ಕೆಲವೊಮ್ಮೆ ಕತ್ತಲಾಗುವವರೆಗೆ ಕೃಷಿ ಕಾರ್ಯ ವಿರುತ್ತದೆ. ಕತ್ತಲಲ್ಲಿ ಗದ್ದೆಯಲ್ಲಿ ಆತಂಕ ದಿಂದಲೇ ಕೆಲಸ ಮಾಡಬೇಕು. ಕೆಲಸ ಮುಗಿಸಿ ಕೆರೆ ಏರಿ ಮೇಲೆ ನಡೆದು ಸಾಗಲು ಕೂಡ ಹಿಂದೆ ಮುಂದೆ ನೋಡುವ ಪರಿಸ್ಥಿತಿ ಇದೆ. ಕೈಕಾಲು ತೊಳೆಯಲು ಕೂಡ ಕೆರೆಗೆ ಇಳಿಯದಂತಹ ಆತಂಕ ಉಂಟಾಗಿದೆ ಎಂದು ಕೃಷಿಕ ಮಹಿಳೆಯರಾದ ಸೌಭಾಗ್ಯ, ಮಲ್ಲಿಕಾ, ವಸಂತಮ್ಮ, ಮಂಜುಳಾ ಎಂಬವರು ತಮ್ಮ ಅಳಲು ತೋಡಿಕೊಂಡಿದ್ದಾರೆ.

ಹಸು, ಆಡು, ಕುರಿಗಳಿಗೆ ನೀರು ಕುಡಿಸಲು ಕೂಡ ಜನರು ಕೆರೆಯತ್ತ ಸುಳಿಯು



ತ್ತಿಲ್ಲ ಎಂದು ರೈತ ದೇವಯ್ಯ ತಿಳಿಸಿದರು. ಮತ್ತೊಂದೆಡೆ ಕೆರೆಯನ್ನು ಗುತ್ತಿಗೆ ಪಡೆದ ಸುಂಕದಳ್ಳಿಯ ಪ್ರಸನ್ನ ಎಂಬವರಿಗೆ ಮೊಸಳೆಗಳ ಕಾಟದಿಂದ. ಅಪಾರ ಪ್ರಮಾಣದ ನಷ್ಟ ಉಂಟಾಗಿದೆ. ಕೆರೆಯನ್ನು ವಾರ್ಷಿಕ ಗುತ್ತಿಗೆ ಪಡೆದು 60 ಸಾವಿರ ಮೀನು ಮರಿಗಳನ್ನು ಬಿಟ್ಟಿದ್ದರು. ಆದರೆ ಮೊಸಳೆಗಳು ಮೀನುಗಳನ್ನು ತಿಂದು ಮುಗಿಸುತ್ತಿದೆ. ಮೀನು ಹಿಡಿಯಲು ಜನರು ಹಿಂದೇಟು ಹಾಕುವ ಕಾರಣ ಮೀನು ಹಿಡಿಯಲು ಸಾಧ್ಯವಾಗದೆ ಒಂದೂವರೆ ಲಕ್ಷಕ್ಕೂ ಅಧಿಕ ನಷ್ಟ ಉಂಟಾಗಿದೆ.

ಮೊಸಳೆ ಹಿಡಿದು ಸ್ಥಳಾಂತರಿಸಲು ಗ್ರಾಮ ಪಂಚಾಯ್ತಿಗೆ ಹಲವು ಬಾರಿ ಮನವಿ ಮಾಡಿದರೂ ಸಕಾಲದಲ್ಲಿ ಸ್ಪಂದಿಸದೆ ಅತಂತ್ರ ಸ್ಥಿತಿ ನಿರ್ಮಾಣಗೊಂಡಿದೆ ಎಂದು ಪ್ರಸನ್ನ ಅಳಲು ತೋಡಿಕೊಂಡಿದ್ದಾರೆ. ಜೀವಹಾನಿ ಉಂಟಾಗುವ ಮುನ್ನ ಸುಬಂಧಿಸಿದವರು ಮೊಸಳೆ ಹಿಡಿಯಲು ಕ್ರಮಕೈಗೊಳ್ಳಬೇಕೆಂದು ಕೃಷಿಕರು ಆಗ್ರಹಿಸಿದ್ದಾರೆ.

ಕೊತ್ತೇಗಾಲ ಗ್ರಾಪಂ ಅಧ್ಯಕ್ಷರ ಆಯ್ಕೆ



ತಿ.ನರಸೀಪುರ, ಸೆ.8– ತಾಲೂಕಿನ ಕೊತ್ತೇಗಾಲ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿ ಕನ್ನಹಳ್ಳಿ ಲಕ್ಷ್ಮಣ್ ಅವಿರೋಧ ಆಯ್ಕೆಯಾಗಿದ್ದಾರೆ.

ತಾಲೂಕಿನ ಕೊತ್ತೇಗಾಲ ಗ್ರಾಮ ಪಂಚಾಯಿತಿಯ ನಿಕಟಪೂರ್ವ ಅಧ್ಯಕ್ಷ ಮರಯ್ಯ ವಿರುದ್ಧ ಅವಿಶ್ವಾಸ ನಿರ್ಣಯ ಗೊತ್ತುವಳಿ ಮಂಡನೆಯಾಗಿದ್ದರಿಂದ ಅವರು ರಾಜೀನಾಮೆ ಸಲ್ಲಿಸಿದ್ದರು. ಇಂದು ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಗಾದಿಗೆ ಲಕ್ಷ್ಮಣ್ ಮಾತ್ರ ನಾಮಪತ್ರ ಸಲ್ಲಿಸಿದ್ದರಿಂದ ಅವರ ಆಯ್ಕೆಯನ್ನು ಚುನಾವಣಾಧಿಕಾರಿ ಶಿವಮಾಧು ಘೋಷಿಸಿದರು.

ಗ್ರಾಮ ಪಂಚಾಯಿತಿಯು ಒಟ್ಟು 17 ಸದಸ್ಯರ ಬಲ ಹೊಂದಿದ್ದು, ಚುನಾವಣೆಯಲ್ಲಿ 16 ಸದಸ್ಯರು ಭಾಗವಹಿಸಿ ಲಕ್ಷ್ಮಣ್ ಅವರನ್ನು ಬೆಂಬಲಿಸಿದರು. ನಂತರ ಮಾತನಾಡಿದ ನೂತನ ಅಧ್ಯಕ್ಷರು, ತಮ್ಮ ಆಯ್ಕೆಗೆ ಸಹಕರಿಸಿದ ಎಲ್ಲ ಸದಸ್ಯರಿಗೂ ಅಭಿನಂದಿಸಿದರು. ಪಂಚಾಯಿತಿಯ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುವೆ. ಮೂಲಭೂತ ಸೌಕರ್ಯಗಳಿಗೆ ಹೆಚ್ಚಿನ ಆದ್ಯತೆ ನೀಡುವುದಾಗಿ ತಿಳಿಸಿದರು.

ಗ್ರಾಪಂ ಸದಸ್ಯರಾದ ವನಜಾಕ್ಷಮ್ಮ, ಮಹೇಶ್, ಮಲ್ಲೇಶ್, ನಾಗರತ್ನ, ಬಸವರಾಜು, ನಾಗಮಣಿ, ಮರಿಸ್ವಾಮಿ, ಭಾಗ್ಯಮ್ಮ, ಕೆ.ಬಿ.ಬಸವರಾಜು, ಮರಿಸ್ವಾಮಿ, ನಾಗೇಂದ್ರ ಮೀನಾಕ್ಷಿ, ಲೀಲಾವತಿ, ಮಣಿಕಂಠ, ಶಿವಮ್ಮ, ಪುಟ್ಟನಂಜಮ್ಮ, ಮಹ ದೇವಸ್ವಾಮಿ, ಮಾಜಿ ಅಧ್ಯಕ್ಷ ವೀರೇಶ್, ಮಹದೇವಸ್ವಾಮಿ, ಕುಮಾರ್, ಶಾಂತ ನಾಗರಾಜ್, ಮಲ್ಲೇಶ್, ನೀಲಸೋಗೆ ಬಸವರಾಜು, ತಾಪಂ ಮಾಜಿ ಸದಸ್ಯ ಗುರುಮೂರ್ತಿ, ಗುತ್ತಿಗೆದಾರ ಪಾಪಣ್ಣ ಇತರರು ಹಾಜರಿದ್ದರು.


ಚಿಕ್ಕಹುಣಸೂರಲ್ಲಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಆಚರಿಸಲಾಯಿತು. ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಗೋವಿಂದೇಗೌಡ, ಶಿಕ್ಷಕರ ಸಂಘದ ಉಪಾಧ್ಯಕ್ಷ ರಂಗಸ್ವಾಮಿ ಟಿ, ಖಜಾಂಚಿ ಕರಿಯಪ್ಪ ಮುಖ್ಯ ಶಿಕ್ಷಕ ಸಿ.ಎಸ್.ಮಹೇಶ್, ಸಿಆರ್‌ಪಿ ಮಮತ ಹಾಜರಿದ್ದರು.

ಆಕಸ್ಮಿಕ ವಿದ್ಯುತ್ ಪ್ರವಹಿಸಿ ಕರು ಬಲಿ

ಹುಣಸೂರು, ಸೆ.8– ತಾಲೂಕಿನ ಹನಗೋಡು ಹೋಬಳಿಯ ದೊಡ್ಡಹೆಜ್ಜೂರು ಗ್ರಾಮದ ಪುಟ್ಟಯ್ಯರಿಗೆ ಸೇರಿದ ಕರು ಆಕಸ್ಮಿಕ ವಿದ್ಯುತ್ ಪ್ರವಹಿಸಿ ಸಾವನ್ನಪ್ಪಿದೆ.

ದೊಡ್ಡ ಹೆಜ್ಜೂರು–ವೀರನಹೊಸಹಳ್ಳಿ ರಸ್ತೆ ಬದಿಯಲ್ಲಿ ಮೇವು ಮೇಯುತ್ತಿದ್ದ ಕರು ಪಕ್ಕದಲ್ಲೇ ಇದ್ದ ಟ್ರಾನ್ಸ್‌ಫಾರ್ಮರ್‌ನಿಂದ ಆಕಸ್ಮಿಕವಾಗಿ ವಿದ್ಯುತ್ ಪ್ರವಹಿಸಿ ಸ್ಥಳದಲ್ಲೇ ಸಾವಿಗೀಡಾಗಿದ್ದು, ಕರುವಿನ ಮಾಲೀಕರಿಗೆ ಚೆಸ್ಕಾಂ ವತಿಯಿಂದ ಸೂಕ್ತ ಪರಿಹಾರ ನೀಡಬೇಕೆಂದು ಅಂಬೇಡ್ಕರ್ ಸ್ವಾಭಿಮಾನಿ ಸೇನೆ ತಾಲೂಕು ಅಧ್ಯಕ್ಷ ದೊಡ್ಡಹೆಜ್ಜೂರು ನಾಗೇಶ್ ಒತ್ತಾಯಿಸಿದ್ದಾರೆ.

ನಾಳೆ ನಾರಾಯಣ ಗುರು ಜಯಂತಿ

ಮೈಸೂರು, ಸೆ.8– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬ್ರಹ್ಮಶ್ರೀ ನಾರಾಯಣಗುರು ಜಯಂತ್ಯುತ್ಸವ ಸಮಿತಿಗಳ ಸಂಯುಕ್ತಾಶ್ರಯದಲ್ಲಿ ಬ್ರಹ್ಮಶ್ರೀ ನಾರಾಯಣಗುರು ಜಯಂತಿಯನ್ನು ಸೆಪ್ಟೆಂಬರ್ 10ರಂದು ಶನಿವಾರ ಬೆಳಿಗ್ಗೆ 11 ಗಂಟೆಗೆ ಕರ್ನಾಟಕ ಕಲಾಮಂದಿರದಲ್ಲಿ ಆಯೋಜಿಸಲಾಗಿದೆ.

ಸಹಕಾರ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಮೇಯರ್ ಶಿವಕುಮಾರ್, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ ಪ್ರಸಾದ್, ಸುಮಲತಾ ಅಂಬರೀಷ್, ವಿಧಾನಸಭೆ ಮತ್ತು ವಿಧಾನಪರಿಷತ್‌ನ ಶಾಸಕರು, ನಿಗಮ ಮಂಡಳಿ ಅಧ್ಯಕ್ಷರು ಹಾಗೂ ಅನೇಕ ಗಣ್ಯರು ಉಪಸ್ಥಿತರಿರುವರು.


ಬನ್ನೂರು ಸಮೀಪದ ಕೊಡಗಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಕಸ್ಟರ್ ಮಟ್ಟದ ಪ್ರತಿಭಾ ಕಾರಂಜಿಯನ್ನು ಕೊಡಗಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಧನಂಜಯ ಪಾಪಣ್ಣ ಉದ್ಘಾಟಿಸಿದರು. ಈ ವೇಳೆ ಎಸ್‌ಡಿಎಂಸಿ ಅಧ್ಯಕ್ಷೆ ಶೃತಿ, ಉಪಾಧ್ಯಕ್ಷ ನಾಗೇಂದ್ರ, ಇಸಿಓ ಪರಮೇಶ್ವರ್, ಬಿಆರ್‌ಪಿ ಮೇರಿಶೈಲಜಾ, ಸಿಆರ್‌ಪಿ ಚಂದ್ರಶೇಖರ್, ಮುಖ್ಯಶಿಕ್ಷಕಿ ಲತಾ, ಎಂ.ನಾಗರಾಜು, ರೇವಣ್ಣ ಸೇರಿದಂತೆ ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

ಕಬಡ್ಡಿ ಪಂದ್ಯಾವಳಿ: ಮೇಟಿಕುಪ್ಪೆ ಜೆಎಸ್‌ಎಸ್ ಪ್ರೌಢಶಾಲೆ ಪ್ರಥಮ



ಹೆಚ್.ಡಿ.ಕೋಟೆ, ಸೆ8– ಹೋಬಳಿ ಮಟ್ಟದ 16 ವರ್ಷದೊಳಗಿನ ಶಾಲಾ ಮಕ್ಕಳ ಕಬಡ್ಡಿ ಪಂದ್ಯಾವಳಿಯಲ್ಲಿ ಮೇಟಿಕುಪ್ಪೆ ಜೆಎಸ್‌ಎಸ್ ಪ್ರೌಢಶಾಲೆ ಮಕ್ಕಳು ಪ್ರಥಮ ಸ್ಥಾನ ಪಡೆದರೆ, ಪಟ್ಟಣದ ಸೆಂಟ್ ಮೇರಿಸ್ ಶಾಲೆ ಮಕ್ಕಳು ದ್ವಿತೀಯ ಸ್ಥಾನ ಪಡೆದಿದ್ದಾರೆ.

ಪಟ್ಟಣದ ವಿಶ್ವ ಭಾರತಿ ಶಿಕ್ಷಣ ಸಂಸ್ಥೆ ಆವರಣದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಉದಯ ಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಕಬಡ್ಡಿ ಫೈನಲ್ ಪಂದ್ಯಾವಳಿಯಲ್ಲಿ ಮೇಟಿಕುಪ್ಪೆ ಶಾಲೆ ಸೆಂಟ್ ಮೇರಿಸ್ ಶಾಲೆಗಿಂತ ಒಂದು ಅಂಕ ಪಡೆದು ಜಯ ಗಳಿಸಿತು.

ಶನಿವಾರ ಸೆಂಟ್ ಮೇರಿಸ್ ಶಾಲಾ ವರಣದಲ್ಲಿ ನಡೆದ ಹೋಬಳಿ ಮಟ್ಟದ ಕಬಡ್ಡಿ ಪಂದ್ಯಾವಳಿಯ ಫೈನಲ್‌ನಲ್ಲಿ ಮೇಟಿಕುಪ್ಪೆ ಹಾಗೂ ಸೆಂಟ್ ಮೇರಿಸ್ ಶಾಲೆಗಳು ಮುಖಾಮುಖಿಯಾಗಿದ್ದವು. ಈ ವೇಳೆ ನಮ್ಮ ಶಾಲೆಯ ಮಕ್ಕಳಿಗೆ ತೀರ್ಪುಗಾರರು ಅನ್ಯಾಯ ಮಾಡಿದ್ದಾರೆ ಎಂದು ಆರೋಪಿಸಿ ಕಬಡ್ಡಿ ಪಂದ್ಯಾವಳಿಯನ್ನು ಅರ್ಧಕ್ಕೆ ನಿಲ್ಲಿಸಿ ಶಾಲಾ ಮಕ್ಕಳ ಜೊತೆ ಗ್ರಾಮಸ್ಥರು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ನ್ಯಾಯ ದೊರಕಿಸಿ ಕೊಡುವಂತೆ ಮನವಿ ಮಾಡಿದ್ದರು.

ನಂತರ ಬಿಇಓ ಉದಯಕುಮಾರ್ ಅವರು ದೈಹಿಕ ಶಿಕ್ಷಣ ಅಧಿಕಾರಿ ರಾಮ ಪ್ರಸಾದ್, ದೈಹಿಕ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಅಂತೋಣಿ ಅವರನ್ನು ತಮ್ಮ ಕಚೇರಿಗೆ ಕರೆದು ಗ್ರಾಮಸ್ಥರು ಸಮ್ಮುಖದಲ್ಲಿ ವಿಚಾರಣೆ ಮಾಡಿ ಅರ್ಧಕ್ಕೆ ನಿಂತ ಕಬಡ್ಡಿ ಪಂದ್ಯಾವಳಿಯನ್ನು ಪಟ್ಟಣದ ವಿಶ್ವ ಭಾರತಿ ಶಾಲೆ ಆವರಣದಲ್ಲಿ ನಡೆಸಿ ಪಾರದರ್ಶಕವಾಗಿ ತೀರ್ಪು ನೀಡಲು ತೀರ್ಮಾನಿಸಲಾಗಿತ್ತು. ಅದರಂತೆ ಇಂದು ವ್ಯವಸ್ಥಿತವಾಗಿ ಕಬಡ್ಡಿ ಪಂದ್ಯಾವಳಿಯನ್ನು ಆಯೋಜನೆ ಮಾಡಿ ಸುಸೂತ್ರವಾಗಿ ನಡೆಯಲು ಎರಡು ಶಾಲೆಯ ಮುಖ್ಯಸ್ಥರು ಹಾಗೂ ಗ್ರಾಮಸ್ಥರು ಸಹಕಾರ ನೀಡಿದರು. ನಂತರ ವಿಜೇತರಾದ ಮೇಟಿಕುಪ್ಪೆ ಶಾಲೆ ಮಕ್ಕಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿ ಬಹುಮಾನ ವಿತರಣೆ ಮಾಡಿದರು.

ಮೇಟಿಕುಪ್ಪೆ ಗ್ರಾಮದ ಗುರುಸ್ವಾಮಿ, ಶಿವನಂಜಪ್ಪ ಮಲ್ಲೇಶ, ಮಾದಪ್ಪ ನಾಗನಾಯಕ, ಚನ್ನಬಸವಚಾರಿ, ಮಂಜುನಾಥ, ಬಸವಲಿಂಗ, ಮಾದೇವಸ್ವಾಮಿ, ಪ್ರಕಾಶ್, ಬಿಆರ್‌ಸಿ ಕೃಷ್ಣಯ್ಯ, ಶಿಕ್ಷಕರಾದ ನಂಜರಾಜು, ಗೋಪಾಲಯ್ಯ, ರಾಮಮೂರ್ತಿ ಇದ್ದರು.

ಪಿರಿಯಾಪಟ್ಟಣ ತಾಲೂಕು ಕುರುಬ ಸಮಾಜದ ಅಧ್ಯಕ್ಷರಾಗಿ ಗಣೇಶ್ ಆಯ್ಕೆ

ಪಿರಿಯಾಪಟ್ಟಣ, ಸೆ.8– ಪಿರಿಯಾಪಟ್ಟಣದ ಕನಕ ಭವನದಲ್ಲಿ ನಡೆದ ಸಭೆಯಲ್ಲಿ ತಾಲೂಕು ಕುರುಬ ಸಮಾಜದ ಅಧ್ಯಕ್ಷರಾಗಿ ಎಚ್.ಡಿ. ಗಣೇಶ್ ಹಾಗೂ ಉಪಾಧ್ಯಕ್ಷರಾಗಿ ಡಿ.ಎ. ಜವರಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ತಾಲೂಕಿನಲ್ಲಿ ಸುಮಾರು ನಲವತ್ತೈದು ಸಾವಿರ ಜನಸಂಖ್ಯೆ ಇರುವ ಕುರುಬ ಸಮಾಜ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಹಿಂದುಳಿದ ವರ್ಗವಾಗಿದ್ದು, ಈ ಸಮಾಜದ ಸದೃಢ ಬೆಳವಣಿಗೆಗೆ ಅತ್ಯಂತ ಪ್ರಬಲ ನಾಯಕನ ಅವಶ್ಯಕತೆಯಿದ್ದು ಹೆಚ್.ಡಿ. ಗಣೇಶ್ ಅವರು ಈ ಹುದ್ದೆಗೆ ಸಮರ್ಪಕವಾದ ಅಭ್ಯರ್ಥಿಯಾಗಿದ್ದಾರೆ. ಹಾಗೂ ಇವರು 2004 ಹಾಗೂ 2008ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಪಿರಿಯಾಪಟ್ಟಣ ಕ್ಷೇತ್ರದಿಂದ ಭಾರತೀಯ ಜನತಾ ಪಕ್ಷದಿಂದ ಸ್ಪರ್ಧಿಸಿ ಸುಮಾರು 30,000 ಸಾವಿರಕ್ಕೂ ಅಧಿಕ ಮತಗಳನ್ನು ಪಡೆದು ಅತ್ಯಂತ ಕಡಿಮೆ ಅಂತರದಿಂದ ಸೋಲನು ಭವಿಸಿದರು ಎಂದು ಸಭೆಯುನ್ನುದ್ದೇಶಿಸಿ ಮಾತನಾಡಿದ ಸಮಾಜದ ಮುಖಂಡರು ತಿಳಿಸಿದರು.


ಪಿರಿಯಾಪಟ್ಟಣ ತಾಲೂಕು ಕುರುಬ ಸಮಾಜದ ಅಧ್ಯಕ್ಷರಾಗಿ ಆಯ್ಕೆಯಾದ ಎಚ್.ಡಿ. ಗಣೇಶ್ ಅವರನ್ನು ಮಾಜಿ ಸಿಎಂ ಸಿದ್ದರಾಮಯ್ಯ ಅಭಿನಂದಿಸಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಅಧ್ಯಕ್ಷ ಎಚ್.ಡಿ. ಗಣೇಶ್, ನನಗೆ ಅಧಿಕಾರ ಇರಲಿ ಇಲ್ಲದಿರಲಿ ಮೊದಲಿನಿಂದಲೂ ತಾಲೂಕಿನ ನೊಂದವರ ಬಡವರ ಧ್ವನಿಯಾಗಿ ಕೆಲಸ ಮಾಡಿದ್ದೇನೆ. ತಾಲೂಕಿನಲ್ಲಿ ಕುರುಬ ಸಮಾಜ ಅತ್ಯಂತ ಹೆಚ್ಚಿನ ಸಂಖ್ಯಾಬಲ ಹೊಂದಿರುವ ಸಮಾಜವಾಗಿದ್ದು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಅತ್ಯಂತ ಹಿಂದುಳಿದ ವರ್ಗವಾಗಿದ್ದು ಈ ಸಮಾಜವನ್ನು ಸದೃಢವಾಗಿ ಕಟ್ಟುವುದರ ಜೊತೆಗೆ ಇನ್ನಿತರೆ ಎಲ್ಲಾ ಸಮಾಜದ ಜನತೆಯ ವಿಶ್ವಾಸವನ್ನು ಗಳಿಸಿ ಎಂದಿನಂತೆ ನನ್ನ ಸೇವಾ ಕಾರ್ಯವನ್ನು ಮುಂದುವರಿಸುತ್ತೇನೆ ಎಂದು ನುಡಿದರು.

ತಮ್ಮನ್ನು ಭೇಟಿ ಮಾಡಿದ ಗಣೇಶ್ ಅವರನ್ನು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿನಂದಿಸಿ, ಶುಭ ಹಾರೈಸಿದ್ದಾರೆ.

ನೀರು ನಿಲ್ಲದಂತೆ ಎಚ್ಚರಿಕೆ ವಹಿಸಿ



ಮೂಗೂರು, ಸೆ.7– ಮನೆ ಸುತ್ತಮುತ್ತ ಕಲುಷಿತ ನೀರು ನಿಲ್ಲದಂತೆ ಎಚ್ಚರಿಕೆ ವಹಿಸಬೇಕು ಎಂದು ಮೂಗೂರು ಸಮುದಾಯ ಆರೋಗ್ಯ ಕೇಂದ್ರದ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಎನ್.ನರಸಮ್ಮ ತಿಳಿಸಿದರು.

ಗ್ರಾಮದ ಅಂಬೇಡ್ಕರ್ ಕಾಲೋನಿಯ ಮನೆಗಳಿಗೆ ಭೇಟಿ ನೀಡಿ ಡೆಂಗ್ಯೂ ಸೊಳ್ಳೆ ನಿಯಂತ್ರಣದ ಬಗ್ಗೆ ಮಾಹಿತಿ ನೀಡಿದರು. ಅಲ್ಲದೇ ಮನೆಗೆ ಬಳಸುವ ನೀರಿನ ತೊಟ್ಟಿಗಳನ್ನು ಆಗಾಗ ಶುದ್ಧಗೊಳಿಸಬೇಕು. ನೀರಿನ ತೊಟ್ಟಿಗಳಲ್ಲಿ ಶೇಖರಣೆಗೊಂಡ ಮಲಿನ ನೀರನ್ನು ಆಶಾ ಕಾರ್ಯಕರ್ತೆಯರಿಂದ ತೆರವುಗೊಳಿಸಿ ನೀರನ್ನು ಸಂರಕ್ಷಿಸಿಕೊಳ್ಳುವ ಬಗ್ಗೆ ಪ್ರಾತ್ಯಕ್ಷಿಕೆ ನಡೆಸಿಕೊಟ್ಟು ಗ್ರಾಮಸ್ಥರಲ್ಲಿ ಸಾಂಕ್ರಾಮಿಕ ರೋಗ ತಡೆಗಟ್ಟುವ ಬಗ್ಗೆ ಅರಿವು ಮೂಡಿಸಿದರು.

ಜೆಡಿಎಸ್ ಮುಖಂಡ ಕೃಷ್ಣರಿಗೆ ಮಾತೃವಿಯೋಗ

ಹೆಚ್.ಡಿ.ಕೋಟೆ, ಸೆ.8– ಸಮಾಜ ಸೇವಕ ಮತ್ತು ಜೆಡಿಎಸ್ ಮುಖಂಡ ಕೆ.ಎಂ. ಕೃಷ್ಣನಾಯಕ ಅವರ ತಾಯಿ ಜಯಮ್ಮ (74) ಹೃದಯಾಘಾತದಿಂದ ಗುರುವಾರ ಮುಂಜಾನೆ ನಿಧನರಾಗಿದ್ದಾರೆ.



ಹಲವಾರು ದಿನಗಳಿಂದ ಹೃದಯದ ಸಮಸ್ಯೆಯಿಂದ ಬಳಲುತ್ತಿದ್ದ ಅವರು ಬೆಂಗಳೂರಿನ ಖಾಸಗಿ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಚಿಕಿತ್ಸೆ ಫಲಕಾರಿಯಾಗದೆ ಗುರುವಾರ ನಿಧನವಾಗಿದ್ದಾರೆ.

ಮೃತರು ಪುತ್ರ ಕೆ.ಎಂ. ಕೃಷ್ಣನಾಯಕ, ಸಹೋದರ, ಸಹೋದರಿ ಸೇರಿ ಅಪಾರ ಬಂಧು ಬಳಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ಗುರುವಾರ ಮಧ್ಯಾಹ್ನ ಹುಲಿದುರ್ಗದ ಸಮೀಪವಿರುವ ಕಮಲಾಪುರ ಗ್ರಾಮದ ತೋಟದ ಮನೆಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬ ವರ್ಗ ತಿಳಿಸಿದೆ.

ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಸೇರಿದಂತೆ ಅನೇಕ ಗಣ್ಯರು ಸಂತಾಪ ಸೂಚಿಸಿದ್ದಾರೆ. ಹೆಚ್.ಡಿ.ಕೋಟೆಯಿಂದ ತಾಲೂಕು ಜೆಡಿಎಸ್ ಮಾಜಿ ಅಧ್ಯಕ್ಷ ಸಿ.ವಿ. ನಾಗರಾಜ್, ಕೆ.ಜೆ. ಗೌಡ್ರು, ಮುಖಂಡರುಗಳಾದ ಶಂಭೇಗೌಡ, ಕಾಡಾ ಮಾಜಿ ಸದಸ್ಯ ಯತೀಶ, ಜಿತೇಂದ್ರ, ವಕೀಲರಾದ ಪ್ರಶಾಂತ, ಪ್ರಸನ್ನ ಗಿರೀಶ ಇನ್ನು ನೂರಾರು ಜೆಡಿಎಸ್ ಕಾರ್ಯಕರ್ತರು, ಮುಖಂಡರು ಅಂತಿಮ ದರ್ಶನ ಪಡೆದರು.


ಸಿದ್ದಮ್ಮ



ನಂಜನಗೂಡು, ಸೆ.8– ತಾಲೂಕಿನ ಹರಗನಪುರ ಗ್ರಾಮದ ಮುತ್ತಯ್ಯ ಅವರ ಪತ್ನಿ ಸಿದ್ದಮ್ಮ(65) ಅವರು ಇಂದು ನಿಧನರಾದರು. ಮೃತರು ಪುತ್ರಿ, ಪುತ್ರ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸ್ವಗ್ರಾಮದಲ್ಲಿ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು ಎಂದು ಮೃತರ ಕುಟುಂಬದವರು ತಿಳಿಸಿದ್ದಾರೆ.

ದನ ಮೇಯಿಸಲು ಹೋದಾಗ ಮಳೆ ನೀರಿನಲ್ಲಿ ಕೊಚ್ಚಿ ಹೋಗಿದ್ದ ವ್ಯಕ್ತಿ ಶವವಾಗಿ ಪತ್ತೆ

ನಂಜನಗೂಡು, ಸೆ.8– ದನ ಮೇಯಿಸಲು ತೆರಳಿದ್ದ ವೇಳೆ ಮಳೆಯ ನೀರಿನ ಸೆಳೆತಕ್ಕೆ ಸಿಲುಕಿ ಕೊಚ್ಚಿ ಹೋಗಿ ನಾಪತ್ತೆಯಾಗಿದ್ದ ವ್ಯಕ್ತಿಯು ಶವವಾಗಿ ಪತ್ತೆಯಾಗಿರುವ ಘಟನೆ ತಾಲೂಕಿನ ಹೆಡತಲೆ ಗ್ರಾಮದಲ್ಲಿ ನಡೆದಿದೆ.



ಹೆಡತಲೆ ಗ್ರಾಮದ ಕರಿನಾಯಕ(65) ಮೃತ ದುರ್ದೈವಿ. ಸೆ.5 ರ ಸೋಮವಾರ ಕರಿನಾಯಕ ದನ ಮೇಯಿಸಲು ತೆರಳಿದ್ದರು ಎನ್ನಲಾಗಿದೆ. ಇದೇ ವೇಳೆ ಧಾರಾಕಾರ ಮಳೆಯಿಂದಾಗಿ ಮೂಡಲುಗುಂಡ್ಲದ ನೀರಿನ ಹರಿವಿನಲ್ಲಿ ಹೆಚ್ಚಳವಾಗಿದ್ದು, ಆಕಸ್ಮಿಕವಾಗಿ ನೀರಿನ ಸೆಳೆತಕ್ಕೆ ಸಿಲುಕಿ ನೀರಿನಲ್ಲಿ ಕೊಚ್ಚಿ ಹೋಗಿ ನಾಪತ್ತೆಯಾಗಿದ್ದರು.

ಸಂಜೆ ದನಗಳು ಮಾತ್ರ ಮನೆಗೆ ಬಂದಿದ್ದ ಕಾರಣ ಪತ್ನಿ ಮುದ್ದಮ್ಮ ಪತಿ ಎಲ್ಲೋ ಹೊರಗಡೆ ತೆರಳಿರಬಹುದೆಂದು ಭಾವಿಸಿದ್ದರು. ರಾತ್ರಿಯಾದರೂ ಮನೆಗೆ ಹಿಂತಿರುಗದ ಕಾರಣ ಎಲ್ಲಾ ಕಡೆಯಲ್ಲೂ ಹುಡುಕಾಟ ನಡೆಸಿದ್ದರು. ಗುರುವಾರ ಮೂಡಲುಗುಂಡ್ಲದ ಮುಳ್ಳಿನ ಪೊದೆಯಲ್ಲಿ ಕರಿನಾಯಕನ ಶವ ದೊರತಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ಕೌಲಂದೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ವ್ಯಕ್ತಿ ನಾಪತ್ತೆ



ತಿ.ನರಸೀಪುರ, ಸೆ.8–ವ್ಯಕ್ತಿಯೊಬ್ಬರು ಕಾಣೆಯಾಗಿರುವ ಬಗ್ಗೆ ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ತಾಲೂಕಿನ ನಿಂಗೇಗೌಡನಹುಂಡಿ ಗ್ರಾಮದ ಶಿವಗೌಡ ಎಂಬುವರ ಪುತ್ರ ಉಮೇಶ್ (48) ಎಂಬುವರು ಕಾಣೆಯಾದ ವ್ಯಕ್ತಿಯಾಗಿದ್ದು, ಕೂಲಿ ಕೆಲಸ ಮಾಡಿಕೊಂಡು ತಾಯಿಯ ಜೊತೆ ವಾಸವಾಗಿದ್ದರೆನ್ನಲಾಗಿದೆ. ಸೆ.3 ರಂದು ಸಂಜೆ 4.30 ರ ಸಮಯದಲ್ಲಿ ಮನೆಯಿಂದ ಹೊರಗೆ ಹೋದ ಈತ ಮತ್ತೆ ಮನೆಗೆ ವಾಪಸ್ ಬಂದಿರುವುದಿಲ್ಲ ಎಂದು ಕಾಣೆಯಾಗಿರುವ ಉಮೇಶ್ ಅವರ ಸಹೋದರ ಎಸ್.ರಮೇಶ್ ಪೊಲೀಸರಿಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಎಎಸ್‌ಐ ದಶರಥ್ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಅಪರಿಚಿತ ಶವ ಪತ್ತೆ

ಹುಣಸೂರು, ಸೆ.8– ಬಿಳಿಕೆರೆ ಠಾಣೆ ವ್ಯಾಪ್ತಿಯ ಹುಸೇನಪುರ ಗ್ರಾಪಂ ವ್ಯಾಪ್ತಿಯ ಆಯರಹಳ್ಳಿ ಗ್ರಾಮದ ಮಾಯಿಗೌಡರ ಜಮೀನು ಬಳಿ ಲಕ್ಷ್ಮಣ ತೀರ್ಥ ನದಿಯ ಹಿನ್ನೀರಿನ ಬಳಿ ಸುಮಾರು 35 ರಿಂದ 40 ವರ್ಷದ ವ್ಯಕ್ತಿಯ ಶವ ಪತ್ತೆಯಾಗಿದೆ. ಕೊಳೆತ ಸ್ಥಿತಿಯಲ್ಲಿರುವ ಶವದ ಯಾವುದೇ ಗುರುತುಗಳು ಕಂಡುಬರುತ್ತಿಲ್ಲ. ಹಾಗೂ ಮೈಮೇಲೆ ಯಾವುದೇ ಬಟ್ಟೆಗಳು ಇರುವುದಿಲ್ಲ. ಗ್ರಾಮಸ್ಥರ ದೂರಿನ ಮೇರೆಗೆ ಈ ಪ್ರಕರಣ ಬಿಳಿಕೆರೆ ಠಾಣೆಯಲ್ಲಿ ದೂರು ದಾಖಲಾಗಿದೆ. ಯಾರಿಗಾದರೂ ಮಾಹಿತಿ ಕಂಡುಬಂದಲ್ಲಿ ಬಿಳಿಕೆರೆ ಠಾಣೆಗೆ ಮಾಹಿತಿ ನೀಡುವಂತೆ ಮನವಿ ಮಾಡಿದ್ದಾರೆ.

ಡಿಆರ್‌ಸಿ ಸಿನಿಮಾಸ್

DRC CINEMAS ದೂ : 4240422/4241800

ಸ್ಕ್ರೀನ್ 1	ಕ್ಯಾಪ್ಟನ್ (ತ): ಬೆ.10.40ಕ್ಕೆ, ಲಕ್ಕಿಮ್ಯಾನ್ (ಕ): ಮ.1.05ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	9 ಸುಳ್ಳು ಕಥೆಗಳು (ಕ): ರಾ.10.30ಕ್ಕೆ, ತಿರುಚಿಟ್ರಂಬಲಂ (ತ): ಮ.1.20ಕ್ಕೆ, ಒಕೇ ಒಕ ಜೀವಿತಂ (ತೆ): ಸಂ.4ಕ್ಕೆ, ಗಾಳಿಪಟ 2(ಕ): ರಾ.7.05ಕ್ಕೆ, ಒಟ್ಟು (ಮ): ರಾ.9.55ಕ್ಕೆ.
ಸ್ಕ್ರೀನ್ 3	ಲಕ್ಕಿಮ್ಯಾನ್ (ಕ): ಬೆ.10.45ಕ್ಕೆ, ಕ್ಯಾಪ್ಟನ್ (ತ): ಮ.1.45ಕ್ಕೆ, ಅಬತಾರ ಮಾತೆರ್ನಾಳ (ತು): ಸಂ.4.15ಕ್ಕೆ, ಒರು ತೆಕ್ಕನ್ ತಾಲು ಕೇಸ್ (ಮ): ರಾ.7ಕ್ಕೆ, ಪಥೋಪಥಂ ನೋಟಂಡು (ಮ): ರಾ.9.55ಕ್ಕೆ.
ಸ್ಕ್ರೀನ್ 4	ಬ್ರಹ್ಮಾಸ್ತ್ರ (3ಡಿ) (ಹಿಂ): ಬೆ.9.55ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10.05ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE ದೂ : 2533444 / 2433456

ಸ್ಕ್ರೀನ್ 1	ಬ್ರಹ್ಮಾಸ್ತ್ರ (3ಡಿ)(ಹಿಂ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಒಕೇ ಒಕ ಜೀವಿತಂ (ತೆ): ಬೆ.10ಕ್ಕೆ, ಕ್ಯಾಪ್ಟನ್ (ಇಂ): ಮ.1.10ಕ್ಕೆ, ಲಕ್ಕಿ ಮ್ಯಾನ್ (ಕ): ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ.
ಸ್ಕ್ರೀನ್ 3	ಲವ್ 360 (ಕ): ಬೆ.10.50ಕ್ಕೆ, ಲಕ್ಕಿಮ್ಯಾನ್ (ಕ): ಮ.1.30ಕ್ಕೆ, ಒಕೇ ಒಕ ಜೀವಿತಂ (ತೆ): ಸಂ.4.40ಕ್ಕೆ, ಕ್ಯಾಪ್ಟನ್ (ತ): ರಾ.7.50ಕ್ಕೆ, ಪಥೋಪಥಂ ನೋಟಂಡು (ಮ): ರಾ.10.20ಕ್ಕೆ.
ಸ್ಕ್ರೀನ್ 4	ಬ್ರಹ್ಮಾಸ್ತ್ರ (3ಡಿ)(ಹಿಂ): ಬೆ.10.30ಕ್ಕೆ, ಸಂ.5.30ಕ್ಕೆ, ರಾ.9ಕ್ಕೆ, ಬ್ರಹ್ಮಾಸ್ತ್ರ (3ಡಿ)(ಕ): ಮ.2ಕ್ಕೆ,

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಲೈಗರ್ (ತೆ): ಬೆ.10.45ಕ್ಕೆ, ಲವ್ 360 (ಕ): ಮ.1.30ಕ್ಕೆ, ಲೈಗರ್ (ಕ): ಸಂ.4.05ಕ್ಕೆ, ಧಮಾಕ (ಕ): ಸಂ.6.50ಕ್ಕೆ.
ಸ್ಕ್ರೀನ್ 2	ಗಾಳಿಪಟ 2(ಕ): ಬೆ.10.30ಕ್ಕೆ, ಸೀತಾರಾಮಂ (ತೆ): ಮ.1.30ಕ್ಕೆ, ರಂಗ ರಂಗ ವೈಭವಂಗ (ತೆ): ಸಂ.4.45ಕ್ಕೆ, ಕೋಬ್ರಾ (ತ): ರಾ.9.15ಕ್ಕೆ.
ಸ್ಕ್ರೀನ್ 3	ಕೋಬ್ರಾ (ತ): ಮ.1.30ಕ್ಕೆ, ಸಂ.6.50ಕ್ಕೆ.
ಸ್ಕ್ರೀನ್ 4	ರಂಗ ರಂಗ ವೈಭವಂಗ (ತೆ): ಬೆ.10.30ಕ್ಕೆ, ಗಾಳಿಪಟ–2 (ಕ): ಮ.1.20ಕ್ಕೆ, ರಾ.7.15ಕ್ಕೆ, ಕೋಬ್ರಾ (ತ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಗಾಳಿಪಟ–2 (ಕ): ಮ.2.55ಕ್ಕೆ, ಸಂ.6.20ಕ್ಕೆ, ರಾ.9.30ಕ್ಕೆ, ಫ್ಯಾಂಟಸಿ(ಕ): ಬೆ.11ಕ್ಕೆ, ಸರ್ವಸ್ಯ ನಾಟ್ಯಂ (ಕ): ಬೆ.10.10ಕ್ಕೆ, ತಾಜ್‌ಮಹಲ್ 2 (ಕ): ಮ.1.20ಕ್ಕೆ, ಕೋಬ್ರಾ (ತ): ಬೆ.11ಕ್ಕೆ, ಮ.2.40ಕ್ಕೆ, ಸಂ.6.20ಕ್ಕೆ, ರಾ.10ಕ್ಕೆ, ಕೋಬ್ರಾ (ತೆ): ಬೆ.11.15ಕ್ಕೆ, ಸಂ.6.05ಕ್ಕೆ, ಬೀಸ್ಟ್ (ಇಂ): ಬೆ.10.10ಕ್ಕೆ, ಮ.2.15ಕ್ಕೆ, ರಾ.8ಕ್ಕೆ, ರಾ.10.15ಕ್ಕೆ, ಸ್ಪೈಡರ್ ಮ್ಯಾನ್ ನೋ ವೇ ಹೋಂ (ಇಂ): ಬೆ.10.45ಕ್ಕೆ, ಸಂ.4.30ಕ್ಕೆ, ಸೊಲೊಮಂಟೆ ತೇನೀಚಕಲ್ (ಮ): ರಾ.7.15ಕ್ಕೆ, ಸೀತಾರಾಮಂ (ಹಿಂ): ಮ.3.50ಕ್ಕೆ, ರಂಗ ರಂಗ ವೈಭವಂಗ (ತೆ): ಮ.3.15ಕ್ಕೆ, ರಾ.9.15ಕ್ಕೆ, ಪಲ್ತು ಜನ್ವರ್ (ಮ): ರಾ.9.45ಕ್ಕೆ, ಕಾರ್ತಿಕೇಯ–2 (ತೆ): ಬೆ.9.05ಕ್ಕೆ, ಮ.12.10ಕ್ಕೆ, ಲೈಗರ್ (ಹಿಂ): ಮ.3.20ಕ್ಕೆ, ತಿರುಚಿಟ್ರಂಬಲಂ (ತ): ಮ.12.25ಕ್ಕೆ, ಸಂ.6.20ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಬ್ರಹ್ಮಾಸ್ತ್ರ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ತಾಜ್ ಮಹಲ್–2 (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಬ್ರಹ್ಮಾಸ್ತ್ರ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಲಕ್ಕಿಮ್ಯಾನ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲಕ್ಕಿಮ್ಯಾನ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಓಕೇ ಓಕ ಜೀವಿತಂ (ತೆ)	4 ಪ್ರದರ್ಶನಗಳು
ಸಂಗಂ	
ಬ್ರಹ್ಮಾಸ್ತ್ರ (ಹಿಂ)	4 ಪ್ರದರ್ಶನಗಳು
ಲಿಡೋ	
ಕ್ಯಾಪ್ಟನ್ (ತ)	4 ಪ್ರದರ್ಶನಗಳು
ತಿಬ್ಬಾದೇವಿ	
ಬ್ರಹ್ಮಾಸ್ತ್ರ (ಹಿಂ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಓ ಮೈ ಲವ್ (ಕ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು
ಪ್ರಭಾ	
ಗಾಳಿಪಟ–2 (ಕ)	4 ಪ್ರದರ್ಶನಗಳು

ಮೈಸೂರು ರೇಸುಗಳು–2022

4ನೇ ದಿನ, ಶುಕ್ರವಾರ 9-9-2022

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. **ಕುಮಾರಧಾರ ಪ್ಲೇಟ್–1200** ಮೀ. ರೇಟೆಡ್ 20 ರಿಂದ 45. (ಮೈಸೂರ್ ಬೇಸ್ಡ್ ಹಾರ್ಸ್). ಮ.2.00ಕ್ಕೆ
1. ಇಂಪ್ಲಿಂಗ್ ಪವರ್ 2. ಸ್ಪಿರಿಚ್ಯುಯಲ್ ಫೋರ್ಸ್ 3. ಪಾಸ್ ಬೈಂಡರ್

II. **ಕಾಸರಗೋಡ್ ಪ್ಲೇಟ್–1200** ಮೀ. ರೇಟೆಡ್ 20 ರಿಂದ 45. ಮ.2.30ಕ್ಕೆ
1. ಮ್ಯೂರ್ ಫೀಲ್ಡ್ 2. ಲೈಕ್ಯೂಗಸ್ 3. ಗ್ರೇಟ್ ಹೋಪ್

III. **ಪಾಡಾಕ್ ಪ್ಲೇಟ್–1400** ಮೀ. ರೇಟೆಡ್ 00 ರಿಂದ 25. (ಮೈಸೂರ್ ಬೇಸ್ಡ್ ಹಾರ್ಸ್). ಮ.3.00ಕ್ಕೆ
1 ಶಿವಾಲಿಕ್ ಧನುಷ್ 2 ತಿಯಾಸ್ ಗಿಫ್ಟ್ 3 ಶಿವಾಲಿಕ್ ಎಂಪರರ್

IV. **J.H. ಘೋಲೆ ಮೆಮೋರಿಯಲ್ ಟ್ರೋಫಿ–1600** ಮೀ. ರೇಟೆಡ್ 40 ರಿಂದ 65. ಮ.3.30ಕ್ಕೆ
1. ಕೆನ್‌ಸಿಂಗ್‌ಟನ್ 2. ತೆರೆಸಿಟಾ 3. ವಾಟ್ ಈಸ್ ದಿಸ್

V. **H.H. ಶ್ರೀ ಚಾಮರಾಜ ಒಡೆಯರ್ ಮೆಮೋರಿಯಲ್ ಟ್ರೋಫಿ–1200** ಮೀ. 3 ವರ್ಷದ (ಟರ್ಮ್ಸ್). ಸಂ.4.00ಕ್ಕೆ
1. ಮಂಡೇಲಾ 2. ಲೋಚ್ ಲೊಮಂಡ್ 3. ಸ್ಟಾರ್ ಅಬೌ

VI. **ಯಲಹಂಕ ಪ್ಲೇಟ್–1200** ಮೀ. ರೇಟೆಡ್ 80 ಮತ್ತು ಮೇಲ್ವರ್ಗ. ಸಂ.4.30ಕ್ಕೆ
1. ದಿ ಸವರ್ ಜಿನ್ ಆರ್ಬ್ 2. ಸೆಗೇರಾ 3. ಗೋಲ್ಡ್ ಫೀಲ್ಡ್

VII. **ಜೋಗ್‌ಫಾಲ್ಸ್ ಪ್ಲೇಟ್–1200** ಮೀ. ರೇಟೆಡ್ 40 ರಿಂದ 65. (ಮೈಸೂರ್ ಬೇಸ್ಡ್ ಹಾರ್ಸ್). ಸಂ.5.00ಕ್ಕೆ
1. ಬೀಟ್ ದಿ ಆಡ್ಸ್ 2. ಕ್ರಿಮ್ಸನ್ ಫೈರ್ 3. ವಿಂಡ್ ಪವರ್

ದಿನದ ಅತ್ಯುತ್ತಮ	: ಕೆನ್‌ಸಿಂಗ್ ಟನ್
ಡಬ್ಬಲ್	: ಇಂಪ್ಲಿಂಗ್ ಪವರ್, ದಿ ಸವರ್ ಜಿನ್ ಆರ್ಬ್
ಜಾಕ್‌ಪಾಟ್	: 3, 4, 5, 6 ಮತ್ತು 7
I ಟ್ರಿಬಲ್	: 2, 3 ಮತ್ತು 4
II ಟ್ರಿಬಲ್	: 5, 6 ಮತ್ತು 7
ಎಕ್ಸ್‌ಆಕ್ಟ್	: 6 ಮತ್ತು 7

ಟಿಪ್ ಸ್ಟರ್ ಪಿಜಿಸಿ

ವಿಘ್ನ ವಿನಾಶಕ, ಅವನ ತಾಯಿ ಗೌರಿಗೆ ಈ ಪರಿ ಸರಿಯೇ...!?









ಮೈಸೂರು, ಸೆ.8– ಇವರು ಹಿಂದೂ ಧರ್ಮ ರಕ್ಷಕರು. ಹಿಂದೂ ಧರ್ಮಕ್ಕೆ ಹಾಗೂ ದೇವರಿಗೆ ಕಿಂಚಿತ್ತು ಅವಮಾನವಾದರೂ ಸಹಿಸಿಕೊಳ್ಳದವರು. ಹಿಂದೂ ಧರ್ಮ ಉಳಿದಿರುವುದೇ ಇವರಿಂದ ಎಂದು ಪೋಸ್ ಕೊಡುತ್ತಿರುವವರು. ಹಿಂದೂ ಹಬ್ಬಗಳನ್ನು ಅದ್ದೂರಿಯಾಗಿ ಆಚರಿಸಬೇಕೆಂದು ಪುಂಖಾನು ಪುಂಖವಾಗಿ ಭಾಷಣ ಬಿಗಿಯುವವರು. ಆದರೆ ಹಿಂದೂ ಧರ್ಮದ ಪವಿತ್ರ ಧಾರ್ಮಿಕ ಆಚರಣೆಗಳ ಪ್ರತೀಕಗಳು ಮಣ್ಣು ಪಾಲು ಮಾಡುವವರು, ಇದನ್ನು ನೋಡಿಯೂ ದಿವ್ಯ ಮೌನಕ್ಕೆ ಶರಣಾಗಿರುವವರು.

ಇದಕ್ಕೆ ತಾಜಾ ಉದಾಹರಣೆ ಕಳೆದ ವಾರವಷ್ಟೇ ಅದ್ದೂರಿಯಾಗಿ ಆಚರಿಸಲ್ಪಟ್ಟ ಗೌರಿ–ಗಣೇಶ ಹಬ್ಬ. ಗೌರಿ–ಗಣೇಶ ಪ್ರತಿಷ್ಠಾಪನೆಗೆ ತೋರಿದ ಆಸಕ್ತಿ, ಹಾಗೆಯೇ ಅದ್ದೂರಿತನದಿಂದ ಆಚರಿಸಿದ ವಿಧಾನ, ವರ್ಣರಂಜಿತ ಮೆರವಣಿಗೆ ಇದಕ್ಕೆಲ್ಲಾ ನೀಡಿದ ಮುತುವರ್ಜಿಯನ್ನು ಗೌರಿ–ಗಣೇಶ ವಿಸರ್ಜನೆಗೆ ಯಾರೂ ತೋರದೇ ಇರುವುದು ಅತ್ಯಂತ ದುರದೃಷ್ಟಕರ ಸಂಗತಿ. ಭಕ್ತಿಪೂರ್ವಕವಾಗಿ ಪೂಜಿಸಲ್ಪಟ್ಟ ಗೌರಿ–ಗಣೇಶ ವಿಗ್ರಹಗಳನ್ನು ಹೀನಾಯವಾಗಿ ವಿಸರ್ಜಿಸಲಾಗಿದೆ. ನಿರ್ಬಂಧರಹಿತವಾಗಿ ಗಣೇಶನ ಪ್ರತಿಷ್ಠಾಪನೆಗೆ ಅಬ್ಬರಿಸಿದ ನಮ್ಮ ಹಿಂದೂ ಧರ್ಮ ರಕ್ಷಕ ಸಂಘಟನೆಗಳು, ಹಾಗೇ ಪ್ರತಿಷ್ಠಾಪಿಸಿದ ಗಣೇಶನ ವಿಸರ್ಜಿಸುವ ವ್ಯವಸ್ಥೆಯನ್ನಂತೂ ಕ್ರಮಬದ್ಧವಾಗಿ ಮಾಡಲಿಲ್ಲ. ಮೈಸೂರು ಸೇರಿದಂತೆ ಸುತ್ತಮುತ್ತಲ ಪ್ರದೇಶಗಳಲ್ಲಿ ಪ್ರತಿಷ್ಠಾಪಿಸಲ್ಪಟ್ಟ ಗೌರಿ–ಗಣೇಶ ಮೂರ್ತಿಗಳನ್ನು ಶ್ರೀರಂಗಪಟ್ಟಣ ತಾಲೂಕು ಪಂಪ್ ಹೌಸ್ ಬಳಿ ನಾಲೆಗಳಲ್ಲಿ ಮನ ಬಂದಂತೆ ಬಿಸಾಡಲಾಗಿದೆ. ನಾಲೆಗಳಲ್ಲಿ ನೀರು ನಿಲ್ಲಿಸಿರುವುದರಿಂದ ಕೆಲ ದಿನಗಳ ಹಿಂದೆಯಷ್ಟೇ ಪೂಜಿಸಲ್ಪಟ್ಟ ನೂರಾರು ಗೌರಿ–ಗಣೇಶ ವಿಗ್ರಹಗಳು ಭಗ್ನಾವಸ್ಥೆಯಲ್ಲಿ ಬಿದ್ದಿವೆ. ಹಿಂದೂ ಧರ್ಮದಲ್ಲಿ ಪ್ರತಿ ದೇವರ ಮೂರ್ತಿಗೂ ಪವಿತ್ರ ಸ್ಥಾನ, ಮನ್ನಣೆ ಇದೆ. ಇದನ್ನು ಹಿಂದೂ ಸಂಘಟನೆಗಳು ಪ್ರತಿಪಾದಿಸುತ್ತವೆ. ದೇವರಿಗೆ ಕಿಂಚಿತ್ತು ಅವಮಾನವಾದರೂ ನಾವು ಸಹಿಸಿಕೊಳ್ಳುವುದಿಲ್ಲ. ಹಿಂದೂ ಹಬ್ಬ ಆಚರಣೆಗಳನ್ನು ಶಾಸ್ತ್ರೋಕ್ತವಾಗಿ ನಡೆಸಬೇಕು. ಹಿಂದೂ ಧರ್ಮದ ಆಚರಣೆ, ದೇವರ ಮೇಲಿನ ಭಕ್ತಿ, ಪೂಜಾ ವಿಧಿ–ವಿಧಾನಗಳು ಇವುಗಳ ಬಗ್ಗೆ ಎಲ್ಲಾ ಹಿಂದೂ ಸಂಘಟನೆಗಳು ಪುಂಖಾನುಪುಂಖವಾಗಿ ಭಾಷಣ ಬಿಗಿಯುತ್ತವೆ. ಹೌದು, ಇವರ ಹಿಂದೂ ಧರ್ಮದ ಮೇಲಿನ ಕಾಳಜಿ ಹಾಗೂ ದೇವರ ಮೇಲಿನ ಭಕ್ತಿ ಬರೀ ಬೂಟಾಟಿಕೆಯೇ? ಎಂದು ಪ್ರಶ್ನಿಸುವಂತಾಗಿದೆ. ಹಿಂದೂ ಧರ್ಮ ಹಾಗೂ ದೇವರ ಬಗ್ಗೆ ನೈಜ ಕಾಳಜಿಯುಳ್ಳ ಹಿಂದೂ ಸಂಘಟನೆಗಳ ಕಾರ್ಯಕರ್ತರು ಇತ್ತ ಗಮನ ಹರಿಸುವರೇ? ಅನಾಥವಾಗಿ ಬಿದ್ದಿರುವ ಗೌರಿ–ಗಣೇಶ ಮೂರ್ತಿಗಳಿಗೆ ಗೌರವಯುತ ಮುಕ್ತಿ ನೀಡುವರೇ? ಕಾದು ನೋಡಬೇಕಾಗಿದೆ.

ಕಾಡಿನಿಂದ ನಾಡಿಗೆ ಬಂದು ಕುವೆಂಪು ಕಾವ್ಯಕೃಷಿ ಮಾಡಿದರೆ, ನಾಡಿನಿಂದ ಕಾಡಿಗೆ ಹೋಗಿ ಕಾವ್ಯದ ಫಸಲು ತೆಗೆದವರು ತೇಜಸ್ವಿ...

● ಹಿರಿಯ ಸಾಹಿತಿ ಸಿಪಿಕೆ ಸ್ಮರಣೆ ● 'ಉದಯರವಿ' ಮುಂದೆ ತೇಜಸ್ವಿ ಅವರ 85ನೇ ಜನ್ಮ ದಿನಾಚರಣೆ



ಮೈಸೂರು, ಸೆ.8(ಎಸ್‌ಬಿಡಿ)– ರಾಷ್ಟ್ರಕವಿ ಕುವೆಂಪು ಹಾಗೂ ಅವರ ಪುತ್ರ ಪೂರ್ಣಚಂದ್ರ ತೇಜಸ್ವಿ ನಡುವೆ ಹಲವು ಸಾಮ್ಯತೆ ಹಾಗೂ ವಿಭಿನ್ನತೆಗಳಿದ್ದವು ಎಂದು ಹಿರಿಯ ಸಾಹಿತಿ ಸಿ.ಪಿ.ಕೃಷ್ಣಕುಮಾರ್(ಸಿಪಿಕೆ) ಸ್ಮರಿಸಿಕೊಂಡರು.

ಮೈಸೂರಿನ ನಮ್ಮೂರು ನಮ್ಮೋರು ಸಮಾಜ ಸೇವಾ ಟ್ರಸ್ಟ್ ವತಿಯಿಂದ ಚಿಂತಕ, ಸಾಹಿತಿ ದಿವಂಗತ ಪೂರ್ಣಚಂದ್ರ ತೇಜಸ್ವಿ ಅವರು ಆಡಿ ಬೆಳೆದ 'ಉದಯರವಿ' ನಿವಾಸದ ಎದುರು ಗುರುವಾರ ಏರ್ಪಡಿಸಿದ್ದ ಅವರ 85ನೇ ಜನ್ಮದಿನಾಚರಣೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಕುವೆಂಪು ಹಾಗೂ ತೇಜಸ್ವಿ ನಡುವೆ ಸಾಕಷ್ಟು ಸಾಮ್ಯತೆ ಇತ್ತು. ಮುಖ್ಯವಾಗಿ ಇಬ್ಬರ ಬರಹದಲ್ಲೂ ಸಮಾಜ ತಿದ್ದುವ ಉದ್ದೇಶವನ್ನು ಕಾಣಬಹುದು. ಹಾಗೆಯೇ ವಿಭಿನ್ನತೆ ಎಂದರೆ ಕುವೆಂಪುರವರು ಕಾಡಿನಿಂದ(ನಿಸರ್ಗದ ಮಡಿಲಿನಿಂದ) ನಾಡಿಗೆ ಬಂದು ಕಾವ್ಯ ಕೃಷಿ ಮಾಡಿದರೆ ತೇಜಸ್ವಿಯವರು ನಾಡಿನಿಂದ ಕಾಡಿಗೆ ಹೋಗಿ ಕಾವ್ಯದ ಫಸಲು ತೆಗೆದರು ಎಂದು ಬಣ್ಣಿಸಿದರು.

ತೇಜಸ್ವಿಯವರ ಬರಹಕ್ಕೆ ಜ್ಞಾನಪೀಠ ಪ್ರಶಸ್ತಿ ಸಂದಬೇಕಿತ್ತು. ಆದರೆ ಅದು ಸಾಕಾರವಾಗಲಿಲ್ಲ. ಹಾಗೆಯೇ ಕುವೆಂಪು ಅವರ ಬರಹಗಳು ನೊಬೆಲ್ ಪ್ರಶಸ್ತಿಗೆ ಅರ್ಹವಾಗಿದೆ. ಆದರೆ ಕೃತಿಗಳು ಇಂಗ್ಲಿಷ್‌ಗೆ ಅನುವಾದಗೊಂಡು ಮರುಮುದ್ರಣವಾಗಬೇಕಿದ್ದ ಕಾರಣದಿಂದ ಅದೂ ಸಾಧ್ಯವಾಗಲಿಲ್ಲ. ಆದರೆ ಬರಹಗಾರರ ಸಾಮರ್ಥ್ಯಕ್ಕೆ ಓದುಗ ವರ್ಗವೇ ಮಾನದಂಡ ಎಂಬಂತೆ ಕುವೆಂಪು ಹಾಗೂ ತೇಜಸ್ವಿ ಅವರಿಗೆ ಪ್ರಶಸ್ತಿಗಿಂತ ಮಿಗಿಲಾಗಿ ದೊಡ್ಡ ಓದುಗ ವರ್ಗವೇ ಇದೆ ಎಂದು ಹೇಳಿದರು.

ವೈದ್ಯನ ಮಗ ವೈದ್ಯ, ವಕೀಲನ ಮಗ ವಕೀಲ, ಶಿಕ್ಷಕನ ಮಗ ಶಿಕ್ಷಕ, ಪೊಲೀಸ್ ಮಗ ಪೊಲೀಸ್ ಆಗುವುದನ್ನು ಸಹಜವಾಗಿ ನೋಡುತ್ತೇವೆ. ಆದರೆ ಓರ್ವ ಕವಿಶ್ರೇಷ್ಠರ ಪುತ್ರ ಶ್ರೇಷ್ಠ ಸಾಹಿತಿ ಆಗುವುದು ಅತ್ಯಂತ ವಿರಳ. ಪದಗಳ ಜೋಡಣೆ, ಕಾವ್ಯಕೃಷಿ ಶ್ರೇಷ್ಠತೆಯೂ ಅನುವಂಶೀಯವಾಗಿ ಬರುವುದಲ್ಲ. ಆದರೆ ತೇಜಸ್ವಿ ಅವರಿಗೆ ಅದೂ ದಕ್ಕಿತ್ತು. ತೇಜಸ್ವಿ ಸಾಧನೆಯ ಶಿಖರವನ್ನೇರಿದ್ದ ವಿಭಿನ್ನತೆಯ ಸಾಕಾರಮೂರ್ತಿಯಾಗಿದ್ದರು ಎಂದರು.

ಕನ್ನಡ ಭಾಷೆ ಉಳಿಯುವುದು ಕತೆ, ಕಾದಂಬರಿ, ಕವಿತೆಗಳಿಂದ ಅಲ್ಲ ಜನಬಳಕೆಯಿಂದ ಮಾತ್ರ ಭಾಷೆ ಶ್ರೀಮಂತವಾಗಿ ಬೆಳೆಯುತ್ತದೆ ಎನ್ನುವುದು ತೇಜಸ್ವಿ ಅವರ ಅಚಲ ನಂಬಿಕೆಯಾಗಿತ್ತು. ಕನ್ನಡ ವಿರೋಧಿಗಳ ಮುಖಕ್ಕೆ ಮಸಿ ಬಳಿಯದೆ ಸ್ನೋ ಹಚ್ಚಬೇಕೆನ್ರಿ? ಎಂದು ಖಾರವಾಗಿ ಪ್ರಶ್ನಿಸುತ್ತಿದ್ದರು. ರೈತರು ಎಷ್ಟೇ ಬಡವರಾಗಿದ್ದರೂ ಅವರು ಆತ್ಮಗೌರವ ಉಳ್ಳವರು ಎಂದು ಅನ್ನದಾತನ ಬಗ್ಗೆ ಹೆಮ್ಮೆಯ ನುಡಿಗಳನ್ನಾಡಿದ್ದರು. ತೇಜಸ್ವಿ ಅವರಂತಹ ಸಾಹಿತಿಗಳು ಹೆಚ್ಚಾಗಬೇಕು, ಕನ್ನಡ ಸಾಹಿತ್ಯ ಕ್ಷೇತ್ರ ಶ್ರೀಮಂತವಾಗಬೇಕು, ಯುವ ಸಮೂಹ ಅವರನ್ನು ಹಿಂಬಾಲಿಸಬೇಕು ಎಂದು ಆಶಿಸಿದರು.

ನನಗಿಂತ 6 ತಿಂಗಳ ಹಿರಿಯ ತೇಜಸ್ವಿ ಸ್ನಾತಕೋತ್ತರ ಶಿಕ್ಷಣ ಘಟ್ಟದ ಗೆಳೆಯ. ಅವರು ಅಕಾಲಿಕ ಕರೆಗೆ ಓಗೊಟ್ಟಿದ್ದು ಅತ್ಯಂತ ಅಸಹನೀಯ. ಪತ್ರಿಕೆಯಲ್ಲಿ ಪ್ರಕಟವಾದ ತೇಜಸ್ವಿ ಅವರ ಮೊದಲ ಕತೆ 'ಲಿಂಗ ಬಂದ'. ಅದಕ್ಕೆ ನಾನು ಅಕ್ಷರಗಳನ್ನು ಜೋಡಿಸಿದ್ದೆ. ನಾವು ಬಯಸಿದಂತೆ ಬದುಕುವುದು ಸುಲಭ ಸಾಧ್ಯವಲ್ಲ. ಅದು ಹೋರಾಟದ ಪ್ರತಿಫಲ. ಬದುಕು ನಿರ್ಮಿಸಿಕೊಳ್ಳಲು ನೀನು ಶ್ರಮಪಡಲೇಬೇಕು ಎಂದು ತೇಜಸ್ವಿ ಹೇಳುತ್ತಿದ್ದರು ಎಂದು ಸಿಪಿಕೆ ಸ್ಮರಿಸಿಕೊಂಡರು.

ಈ ವೇಳೆ ಟ್ರಸ್ಟ್‌ನ ಅಧ್ಯಕ್ಷ ಸತೀಶ್ ಗೌಡ, ಉಪಾಧ್ಯಕ್ಷ ಕುಮಾರ್ ಗೌಡ, ಕಾರ್ಯದರ್ಶಿ ಎ.ರವಿ, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್‌ನ ನಿರ್ದೇಶಕರಾದ ರವಿ ರಾಜಕೀಯ, ಹೇಮಾ, ಗುರುರಾಜ್, ಚೇತನ್, ರಾಜ್‌ಕುಮಾರ್, ವಾಸು ಮತ್ತಿತರರು ಉಪಸ್ಥಿತರಿದ್ದರು.

ತಹಸೀಲ್ದಾರ್ ಗಿರೀಶ್‌ಗೆ ಅಭಿನಂದನೆ



ಮೈಸೂರು, ಸೆ.8– ರಾಜ್ಯ ಸರ್ಕಾರ ಕೊಡಮಾಡುವ 'ಸರ್ವೋತ್ತಮ ಸೇವಾ ಪ್ರಶಸ್ತಿ'ಗೆ ಭಾಜನರಾಗಿರುವ ಮೈಸೂರು ತಾಲೂಕು ತಹಸೀಲ್ದಾರ್ ಬಿ.ಎನ್.ಗಿರೀಶ್ ಅವರನ್ನು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಹಾಗೂ ಜೆಡಿಎಸ್ ಹಿಂದುಳಿದ ವರ್ಗಗಳ ಘಟಕದ ಜಿಲ್ಲಾಧ್ಯಕ್ಷ ಡಿ.ಶ್ರೀನಿವಾಸ್ ಅಭಿನಂದಿಸಿದರು.

ಹಾಸನ ಜಿಲ್ಲೆ, ಅರಕಲಗೂಡು ತಾಲೂಕು, ಬೆಟ್ಟದಹಳ್ಳಿಯ ಕೃಷಿ ಕುಟುಂಬದ ಬಿ.ಎನ್. ಗಿರೀಶ್, 8 ವರ್ಷ ಸಹಕಾರ ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದರು. ಚಂದನ ವಾಹಿನಿಯಲ್ಲಿ ನಿರೂಪಕರಾಗಿಯೂ ಕಾರ್ಯ ನಿರ್ವಹಿಸಿದ್ದರು. ನಂತರ 2014ರ ಕೆಎಎಸ್ ಬ್ಯಾಚ್‌ನಲ್ಲಿ ಆಯ್ಕೆಯಾಗಿ ಶಿವಮೊಗ್ಗ, ದಾವಣಗೆರೆಯ ನಂತರ ಮೈಸೂರು ತಾಲೂಕು ತಹಸೀಲ್ದಾರ್ ಆಗಿ ಸೇವೆ ಮುಂದುವರೆಸಿದ್ದಾರೆ. ಇವರಿಗೆ ಹಾಸನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ 'ಕನ್ನಡ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಐಪಿಎಲ್ ಕ್ರಿಕೆಟ್ ಮಾದರಿ 'ಕರ್ನಾಟಕ ಬಾಲ್ ಬ್ಯಾಡ್ಮಿಂಟನ್ ಪ್ರೀಮಿಯರ್ ಲೀಗ್' ಆಯೋಜನೆ

● ಮೈಸೂರಲ್ಲಿ ನಾಳೆ, ನಾಡಿದ್ದು ಪಂದ್ಯಾವಳಿ ಆಯೋಜನೆ ● ಸ್ಟಾರ್ ಆಟಗಾರರು ಭಾಗಿ; ಈಗಾಗಲೇ ಹಲವು ಆಟಗಾರರ ಯಶಸ್ವಿ ಬಿಡ್

ಮೈಸೂರು, ಸೆ.8(ಎಂಟಿವೈ)– ಶಾಲಾ–ಕಾಲೇಜು, ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಬಾಲ್ ಬ್ಯಾಡ್ಮಿಂಟನ್ ಕ್ರೀಡೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಇದೇ ಮೊದಲ ಬಾರಿಗೆ ಐಪಿಎಲ್ ಮಾದರಿಯಲ್ಲಿ ಸೆ.10, 11ರಂದು ಎರಡು ದಿನಗಳ ಕಾಲ ಹಾರ್ಡ್ವಿಕ್ ಶಾಲಾ ಮೈದಾನದಲ್ಲಿ 'ಕರ್ನಾಟಕ ಬಾಲ್ ಬ್ಯಾಡ್ಮಿಂಟನ್ ಪ್ರೀಮಿಯರ್ ಲೀಗ್' ಆಯೋಜಿಸಲಾಗಿದೆ ಎಂದು ಜಿಲ್ಲಾ ಬಾಲ್ ಬ್ಯಾಡ್ಮಿಂಟನ್ ಅಸೋಸಿಯೇಷನ್ ಅಧ್ಯಕ್ಷ ಲಕ್ಷ್ಮೀಶ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಾರಾಜ ಬಾಲ್ ಬ್ಯಾಡ್ಮಿಂಟನ್ ಕ್ಲಬ್, ಬಾಲ್ ಬ್ಯಾಡ್ಮಿಂಟನ್ ಅಸೋಸಿಯೇಷನ್ ಆಫ್ ಕರ್ನಾಟಕ, ಜಿಲ್ಲಾ ಬಾಲ್ ಬ್ಯಾಡ್ಮಿಂಟನ್ ಅಸೋಸಿಯೇಷನ್ ಸಹಯೋಗದಲ್ಲಿ ರಾಜ್ಯ ಮಟ್ಟದ 'ಕರ್ನಾಟಕ ಬಾಲ್ ಬ್ಯಾಡ್ಮಿಂಟನ್ ಪ್ರೀಮಿಯರ್ ಲೀಗ್' ನಡೆಸಲು ತೀರ್ಮಾನಿಸಲಾಗಿದೆ. ಇದು ದೇಶದಲ್ಲಿ ಮೊದಲ ಬಾಲ್ ಬ್ಯಾಡ್ಮಿಂಟನ್ ಲೀಗ್ ಎಂಬ ಹೆಗ್ಗಳಿಕೆಗೆ ಮೈಸೂರು ಪಾತ್ರವಾಗುತ್ತಿದೆ. ದೇಶದಲ್ಲಿ ಇದೇ ಮೊದಲ ಬಾರಿಗೆ ಬಾಲ್ ಬ್ಯಾಡ್ಮಿಂಟನ್ ಲೀಗ್ ನಡೆಸಲಾಗುತ್ತಿದೆ. ಇದರಲ್ಲಿ ರಾಜ್ಯದ ವಿವಿಧ ಭಾಗಗಳ ಪ್ರತಿಭಾವಂತ ಬಾಲ್ ಬ್ಯಾಡ್ಮಿಂಟನ್ ಸ್ಟಾರ್ ಪ್ಲೇಯರ್ ಮತ್ತು ಉದಯೋನ್ಮುಖ ಪ್ರತಿಭೆಗಳನ್ನೊಳಗೊಂಡ 10 ತಂಡಗಳು ಪ್ರಶಸ್ತಿಗಾಗಿ ಸೆಣಸಲಿವೆ. ಲೀಗ್ ಮತ್ತು ನಾಕೌಟ್ ಮಾದರಿಯಲ್ಲಿ ಪಂದ್ಯಾವಳಿ ನಡೆಯಲಿದೆ ಎಂದು ವಿವರಿಸಿದರು.

ಪ್ರತಿ ತಂಡದಲ್ಲಿಯೂ 8 ಮಂದಿ ಆಟಗಾರರನ್ನು ಒಳಗೊಂಡಿದೆ. ಬೆಂಗಳೂರು, ಕೋಲಾರ, ಬಳ್ಳಾರಿ, ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಹೀಗೆ ರಾಜ್ಯದ ವಿವಿಧ ಜಿಲ್ಲೆಗಳ ಆಟಗಾರರು 1 ಸಾವಿರ ರೂ. ಮೂಲ ಸಂಭಾವನೆಯಿಂದ 5 ಸಾವಿರ ರೂ.ವರೆಗೆ ಆಟಗಾರರು ಮಾರಾಟವಾಗಿದ್ದು, ಇದರಲ್ಲಿ ಬಿ.ಎನ್. ಕಿರಣ್ ಕುಮಾರ್, ಎಂ.ಎಸ್.ಸತ್ಯ, ಮಹದೇವಸ್ವಾಮಿ, ಆರ್.ಸಂಜಯ್, ಮಹದೇವ್ಪು, ತರುಣ್ ಕುಮಾರ್, ಆರ್.ವಿಜಯಕುಮಾರ್, ಬಿ.ಕೆ.ಚೇತನ್, ಹೆಚ್.ಕೆ. ತೇಜಸ್



ಆಟಗಾರರು ಅತೀ ಹೆಚ್ಚಿನ ಬೆಲೆಗೆ (5 ಸಾವಿರ ರೂ) ಬಿಡ್ ಆಗಿದ್ದಾರೆ ಎಂದರು.

ಎರಡು ದಿನಗಳ ಕಾಲ ನಡೆಯುವ 'ಕೆಬಿಬಿಪಿಎಲ್–2022' ಪಂದ್ಯಾವಳಿಗೆ ಸೆ.10ರಂದು ಸಂಜೆ 5ಕ್ಕೆ ಚಾಮರಾಜನಗರದ ಸಂಸದ ವಿ.ಶ್ರೀನಿವಾಸ ಪ್ರಸಾದ್ ಚಾಲನೆ ನೀಡಲಿದ್ದಾರೆ. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಕ್ಷರಿ, ಜಿಲ್ಲಾಧ್ಯಕ್ಷ ಜಿ.ಗೋವಿಂದರಾಜು ಹಾಗೂ ಇನ್ನಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಸೆ.11ರಂದು ಬೆಳಗ್ಗೆ 8ಕ್ಕೆ ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡ ಕೆ.ಹರೀಶ್ ಗೌಡ, ಮಾಜಿ ಮೇಯರ್ ಪುರುಷೋತ್ತಮ್, ಲಕ್ಷ್ಮೀಪುರಂ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಮೋಹಿತ್ ಸಹದೇವ್ ಭಾಗವಹಿಸುವರು ಎಂದರು.

ಪಂದ್ಯಾವಳಿಗೆ ಎ ಪೂಲ್‌ನಲ್ಲಿ ಕೃಷ್ಣರಾಜನಗರ ಕಿಂಗ್ಸ್, ಹಿಮಾನಿ ಸ್ಟ್ರೈಕರ್ಸ್, ಟ್ವಿನ್ ಬಿ ಸ್ಪೋರ್ಟ್ಸ್ ಅರೆನಾ, ತುಮಕೂರು ಟೈಟಾನ್ಸ್, ಸ್ಕಲ್ ಸಿಕ್ಸ್ ಅಸ್ತ್ರ ತಂಡಗಳು ಪಾಲ್ಗೊಳ್ಳಲಿವೆ. ಬಿ ಬ್ಲಾಕ್‌ನಲ್ಲಿ ಸಿದ್ದಗಂಗಾ ಶ್ರೀ ತುಮಕೂರು, ಮಹಾರಾಜ ಸ್ಟಾರ್ಸ್, ಶರವಣ ಹೆಬ್ಬಾಳ್ ಸ್ಟಾರ್ಸ್, ಹಾಸನಾಂಬ ಚಾಲೆಂಜರ್ಸ್, ಶತ ಶೃಂಗಾ ವಾರಿಯರ್ಸ್ ಇವೆ. ಸುದ್ದಿಗೋಷ್ಠಿಯಲ್ಲಿ ಅಸೋಸಿಯೇಷನ್‌ನ ಕಾರ್ಯದರ್ಶಿ ಸತ್ಯನಾರಾಯಣ, ಖಜಾಂಚಿ ನಟರಾಜು, ಸಂಘಟನಾ ಕಾರ್ಯದರ್ಶಿ ಮಹದೇವ್, ಕಾರ್ಯಕಾರಿಣಿ ಸಮಿತಿ ಸದಸ್ಯ ಮುರಳಿ ಇದ್ದರು.

ಗೌರವಾನ್ವಿತ ಪ್ರಾದೇಶಿಕ ಭೂ ದಾಖಲೆಗಳ ಜಂಟಿ ನಿರ್ದೇಶಕರ ನ್ಯಾಯಾಲಯ, ಮೈಸೂರು

ರಿ.ಪಿ. ಸಂಖ್ಯೆ 419/2021–2022

ಅರ್ಜಿದಾರರು : ಎಸ್.ಎಂ. ಚೀನಿ ಮಹಮ್ಮದ್

ವಿರುದ್ಧ

ಎದುರುದಾರರು : 1) ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಹೆಚ್.ಡಿ.ಕೋಟೆ ತಾಲ್ಲೂಕು ಮತ್ತು ಇತರರು. 3) ಪುಟ್ಟಮಲ್ಲೇಗೌಡ, ಸುಮಾರು 58 ವರ್ಷ. 4) ನಾಗಪ್ಪ ಬಿನ್ ಮಾಂತಪ್ಪ ಸುಮಾರು 56 ವರ್ಷ. 5) ಮಾದಪ್ಪ ಬಿನ್ ಮಾಂತಪ್ಪ, ಸುಮಾರು 57 ವರ್ಷ. 6) ಹಾಲೇಗೌಡ ಬಿನ್ ಪುಟ್ಟೀರೇಗೌಡ, ಸುಮಾರು 56 ವರ್ಷ. 7) ಶ್ರೀಮತಿ.ಮಾಲಮ್ಮ, ಕೋಂ ಪುಟ್ಟಮಲ್ಲೇಗೌಡ, ಸುಮಾರು 52 ವರ್ಷ. 8) ಮಲ್ಲಜಮ್ಮ ಬಿನ್ ಪುಟ್ಟಮಲ್ಲೇಗೌಡ, ಸುಮಾರು 30 ವರ್ಷ. 9) ಚಿಕ್ಕಮ್ಮ ಬಿನ್ ಪುಟ್ಟಮಲ್ಲೇಗೌಡ, ಸುಮಾರು 28 ವರ್ಷ. 10) ಶಿವಮ್ಮ ಬಿನ್ ಪುಟ್ಟಮಲ್ಲೇಗೌಡ, ಸುಮಾರು 27 ವರ್ಷ 8 ರಿಂದ 10 ರವರು ಪ್ರತಿವಾದಿಗಳಾದ 3 ಮತ್ತು 7 ರವರ ಮಕ್ಕಳಾಗಿರುತ್ತಾರೆ. ಎಲ್ಲರ ವಾಸ: ಕೊತ್ತೇಗಾಲ ಗ್ರಾಮ ಮತ್ತು ಅಂಚೆ, ಸರಗೂರು ಹೋಬಳಿ ಮತ್ತು ತಾಲ್ಲೂಕು.

ಪತ್ರಿಕಾ ಪ್ರಕಟಣೆ

ಮೇಲ್ಕಂಡ ಪ್ರಕರಣವನ್ನು ಮೇಲ್ಮನವಿದಾರರಾದ 1 ರಿಂದ 7ನೇ ಎದುರುದಾರರ ವಿರುದ್ಧ ಹೆಚ್.ಡಿ.ಕೋಟೆ ತಾಲ್ಲೂಕು, ಸರಗೂರು ಹೋಬಳಿ, ಕೊತ್ತೇಗಾಲ ಗ್ರಾಮದ ಸರ್ವೆ ನಂ. 127, ಹೊಸ ಸರ್ವೆ ನಂ. 292 ಮತ್ತು 293 ರನ್ನು, ದುರುಸ್ಥಿಯಾಗಿರುವುದನ್ನು ಪ್ರತಿಷ್ಠಿ, ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 56 ರ ಅಡಿಯಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಎದುರುದಾರರಾದ 3 ಮತ್ತು 7ನೇ ಎದುರುದಾರರ ಮಕ್ಕಳುಗಳಾದ 8 ರಿಂದ 10 ರವರು ಒಳಗೊಂಡಂತೆ, 3ನೇ ಎದುರುದಾರರು ಪೌತಿಯಾಗಿರುತ್ತಾರೆ. ಸರ್ವೆ ನಂ. 273, 274, 275 ರ ಜಮೀನಿನಲ್ಲಿ ಸ್ವಾಧೀನಾನುಭವದಲ್ಲಿರುತ್ತಾರೆ. 3 ರಿಂದ 10ನೇ ಎದುರುದಾರರ ವಿರುದ್ಧ ಹಾಜರಾತಿಗಾಗಿ ಅಂಚೆ ತಲೋಪೋಲೆ ಮೂಲಕ ಹಾಜರಾತಿಗಾಗಿ ಕಳುಹಿಸಿದ್ದರು ಸಹ ಇದುವರೆವಿಗೂ ಹಿಂಬರಹ ವಾಪಸ್ ಬರದೇ ಇರುವುದರಿಂದ ಘನ ನ್ಯಾಯಾಲಯವು ಆದೇಶ ಮಾಡಿರುವುದರಿಂದ ಎದುರುದಾರರಾದ 3 ರಿಂದ 10 ರವರು ಆದರೆ ಇದರ ಹಾಜರಾತಿ ಪಡೆದುಕೊಂಡು ಸದರಿ ಮೇಲ್ಮನವಿಯನ್ನು ಇತ್ಯರ್ಥ ಪಡಿಸಬೇಕಾಗಿರುವುದರಿಂದ 3 ರಿಂದ 10ನೇ ಎದುರುದಾರರ ಹಾಜರಾತಿ ಈ ಮೇಲ್ಮನವಿಗೆ ಅತ್ಯವಶ್ಯಕವಾಗಿರುವುದರಿಂದ ಸದರಿಯವರ ಹಾಜರಾತಿಗಾಗಿ 08-09-2022 ರಂದು ಮೈಸೂರು ಮಿತ್ರ ಪತ್ರಿಕೆಯಲ್ಲಿ ಪ್ರಕಟಣೆ ಮಾಡಿ ಮೇಲ್ಕಂಡ ವಿಚಾರದ ಬಗ್ಗೆ 3 ರಿಂದ 10ನೇ ಎದುರುದಾರರು ಅಥವಾ ಇವರ ವಾರಸುದಾರರು ಏನಾದರೂ ತಕರಾರು ಇದ್ದಲ್ಲಿ ಸುನಾವಣಾ ದಿನಾಂಕ 29/09/2022 ರಂದು ಮಧ್ಯಾಹ್ನ 3-00 ಗಂಟೆಗೆ ಮೇಲ್ಕಂಡ ನ್ಯಾಯಾಲಯ ದಲ್ಲಿ ಹಾಜರಾಗಿ ತಕರಾರು ಸಲ್ಲಿಸಬಹುದು. ತಪ್ಪಿದಲ್ಲಿ ನಿಯಮಾನುಸಾರ ಮೇಲ್ಕಂಡ ಪ್ರಕರಣವನ್ನು ಇತ್ಯರ್ಥಪಡಿಸಲಾಗುವುದು ಎಂದು ಈ ಪತ್ರಿಕೆಯ ಮೂಲಕ ತಿಳಿಯಪಡಿಸುವುದು.

ಸಹಿ/– ಗೌರವಾನ್ವಿತ ಪ್ರಾದೇಶಿಕ ಭೂ ದಾಖಲೆಗಳ ಜಂಟಿ ನಿರ್ದೇಶಕರ ನ್ಯಾಯಾಲಯ.

ಅರ್ಜಿದಾರರ ಪರ ವಕೀಲರು
ಸಹಿ/– ಗಣೇಶ್. ಎಸ್.
#17, Triangle Fortune, Bogadi,
Mysuru-26. Mob: 8050300920
ದಿನಾಂಕ: 08–09–2022
ಸ್ಥಳ: ಮೈಸೂರು

ತಾಲ್ಲೂಕು ಪಂಚಾಯತ್ ಕಾರ್ಯಾಲಯ ತಿ.ನರಸೀಪುರ

ಸಂ.: ತಾಪಂ/ತಿ.ನ.ಪು/ಇಎಸ್‌ಟಿ–2/ಇ–ಟೆಂಡರ್/2022–23 ದಿ: 08.09.2022

ಟೆಂಡರ್ ಪ್ರಕಟಣೆ

ಈ ಕಛೇರಿಗೆ ಅಗತ್ಯವಿರುವ 1 ಗಣಕಯಂತ್ರ ನಿರ್ವಾಹಕರು ಹಾಗೂ 2 'ಡಿ' ದರ್ಜೆ ನೌಕರರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಪಡೆಯಲು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಇ.ಎಂ.ಡಿ. ಮೊತ್ತ ರೂ.8000/– (ರೂ. ಎಂಟು ಸಾವಿರಗಳು ಮಾತ್ರ). ಟೆಂಡರ್ ಸಲ್ಲಿಸಲು ಕೊನೆಯ ದಿ: 23.09.2022 ಸಂಜೆ 5.30 ಗಂಟೆ. ಟೆಕ್ನಿಕಲ್ ಬಿಡ್ ತೆರೆಯುವ ದಿ: 26.09.2022 ಅಪರಾಹ್ನ 12.30 ಗಂಟೆ. ಹಣಕಾಸು ಬಿಡ್ ತೆರೆಯುವ ದಿ: 28.09.2022 ಅಪರಾಹ್ನ 12.30 ಗಂಟೆ. ಟೆಂಡರ್ ತೆರೆಯುವ ಸ್ಥಳ: ಕಾರ್ಯನಿರ್ವಾಹಕ ಅಧಿಕಾರಿರವರ ಕೊಠಡಿ, ತಾಲ್ಲೋಕು ಪಂಚಾಯತ್, ತಿ.ನರಸೀಪುರ. ದೂ.ಸಂ. 08227–261223 ಹೆಚ್ಚಿನ ಮಾಹಿತಿಗಾಗಿ ಕಛೇರಿಗೆ ಭೇಟಿ ನೀಡಿ ಮಾಹಿತಿ ಪಡೆಯುವುದು.

ಸಹಿ/– ಕಾರ್ಯ ನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ತಿ.ನರಸೀಪುರ.

DIPR/DDMYS/MCA/457/2022-23